

# ಚೈತನ್ಯದ ಬದುಕಿನ್ ಮೇಲೆ ಪ್ರತಿಫಲನ್ಗಳು



ರೂಹಿ ಸಂಸ್ಥೆ





ಪುಸ್ತಕ ೧

# ಚೈತನ್ಯದ ಬದುಕಿನ ಮೇಲೆ ಪ್ರತಿಫಲನಗಳು

ರೂಹಿ ಸಂಸ್ಥೆ

ಶ್ರೇಣಿಯಲ್ಲಿನ ಪುಸ್ತಕಗಳು:

ರೂಹಿ ಸಂಸ್ಥೆಯು ವಿನ್ಯಾಸಗೊಳಿಸಿದ ಶ್ರೇಣಿಯಲ್ಲಿನ ಪ್ರಸ್ತುತ ಶೀರ್ಷಿಕೆಗಳನ್ನು ಕೆಳಗೆ ಕೊಡಲಾಗಿದೆ. ಈ ಪುಸ್ತಕಗಳನ್ನು ಯುವಜನರು ಹಾಗೂ ವಯಸ್ಕರು ತಮ್ಮ ಸಮುದಾಯಗಳಲ್ಲಿ ಸೇವೆ ಸಲ್ಲಿಸುವ ಸಾಮರ್ಥ್ಯವನ್ನು ಹೆಚ್ಚಿಸಲು ಮುಖ್ಯ ಸರಣಿಯ ಶಿಕ್ಷಣದಲ್ಲಿ ವ್ಯವಸ್ಥಿತ ಪ್ರಯತ್ನವಾಗಿ ಉಪಯೋಗಿಸಲು ಆಶಿಸಲಾಗಿದೆ. ರೂಹಿ ಸಂಸ್ಥೆಯು ಬಹಾಯಿ ಮಕ್ಕಳ ತರಗತಿಗಳ ಬೋಧಕರ ತರಬೇತಿಗಾಗಿ ಒಂದು ಪಠ್ಯಕ್ರಮವನ್ನು ಪುಸ್ತಕ ಮೂರರ ಶಾಖೆಯಾಗಿ ಹೊರತರುತ್ತಿದೆ ಮತ್ತು ಇದನ್ನು ಪಟ್ಟಿಯಲ್ಲಿ ಸಹ ಸೂಚಿಸಲಾಗಿದೆ. ಈ ಕ್ಷೇತ್ರದಲ್ಲಿ ಅನುಭವವು ಮುಂದುವರೆದಂತೆ ಪಟ್ಟಿಯಲ್ಲಿ ಬದಲಾವಣೆಗಳಾಗುವುದೆಂಬುದನ್ನು ಗಮನಿಸಬೇಕಾಗಿದೆ ಮತ್ತು ಬೆಳವಣಿಗೆಯಲ್ಲಿರುವ ಮೂಲ ಪಠ್ಯಗಳು ಎಲ್ಲೆಡೆಯು ದೊರಕುವ ಹಂತವನ್ನು ತಲುಪಿದಾಗ ಹೊಸ ಶೀರ್ಷಿಕೆಗಳನ್ನು ಸೇರಿಸಲಾಗುವುದು.

| | |
|---|---|
| ಪುಸ್ತಕ ೧ | ಚೈತನ್ಯದ ಬದುಕಿನ ಮೇಲೆ ಪ್ರತಿಫಲನಗಳು |
| ಪುಸ್ತಕ ೨ | ಸೇವೆಗಾಗಿ ಮೇಲೇಳುವುದು |
| ಪುಸ್ತಕ ೩ | ಮಕ್ಕಳ ತರಗತಿಗಳಿಗೆ ಬೋಧಿಸುವುದು ಕ್ರಮ ೧ |
| | ಮಕ್ಕಳ ತರಗತಿಗಳಿಗೆ ಬೋಧಿಸುವುದು ಕ್ರಮ ೨ (ಶಾಖಾ ಶಿಕ್ಷಣ) |
| | ಮಕ್ಕಳ ತರಗತಿಗಳಿಗೆ ಬೋಧಿಸುವುದು ಕ್ರಮ ೩ (ಶಾಖಾ ಶಿಕ್ಷಣ) |
| | ಮಕ್ಕಳ ತರಗತಿಗಳಿಗೆ ಬೋಧಿಸುವುದು ಕ್ರಮ ೪ (ಶಾಖಾ ಶಿಕ್ಷಣ) |
| ಪುಸ್ತಕ ೪ | ಅವಳಿ ಅವತಾರ ಪುರುಷರು |
| ಪುಸ್ತಕ ೫ | ಕಿಶೋರರ ಅಂತಃಶಕ್ತಿಯನ್ನು ಹೊರಹೊಮ್ಮಿಸುವುದು |
| | ಪ್ರಾರಂಭಿಕ ಪ್ರೇರಣೆ : ಪುಸ್ತಕ ೫ ರ ಮೊದಲನೆಯ ಶಾಖಾ ಶಿಕ್ಷಣ |
| | ವಿಸ್ತೃತ ವಲಯ : ಪುಸ್ತಕ ೫ ರ ಎರಡನೆಯ ಶಾಖಾ ಶಿಕ್ಷಣ |
| ಪುಸ್ತಕ ೬ | ಧರ್ಮ ಬೋಧನೆ |
| ಪುಸ್ತಕ ೭ | ಸೇವೆಯ ಪಥದಲ್ಲಿ ಜೊತೆಯಾಗಿ ನಡೆಯುವುದು |
| ಪುಸ್ತಕ ೮ | ಬಹಾಉಲ್ಲಾರವರ ಒಡಂಬಡಿಕೆ |
| ಪುಸ್ತಕ ೯ | ಐತಿಹಾಸಿಕ ಮುನ್ನೋಟವನ್ನು ಗಳಿಸುವುದು |
| ಪುಸ್ತಕ ೧೦ | ಹುರುಪಿನ ಸಮುದಾಯ ನಿರ್ಮಾಣ |
| ಪುಸ್ತಕ ೧೧ | ವಸ್ತುನಿಷ್ಠ ಸಾಧನಗಳು |
| ಪುಸ್ತಕ ೧೨ | (ಮುಂಬರಲಿದೆ) |
| ಪುಸ್ತಕ ೧೩ | ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಿಕೆ |
| ಪುಸ್ತಕ ೧೪ | ( ಮುಂಬರಲಿದೆ) |

ಕೃತಿಸ್ವಾಮ್ಯ © ೨೦೨೦ ರೂಹಿ ಫೌಂಡೇಷನ್, ಕೊಲಂಬಿಯ
ಎಲ್ಲಾಹಕ್ಕುಗಳನ್ನು ಕಾಯ್ದಿರಿಸಲಾಗಿದೆ, ಆವೃತ್ತಿ ೪.೧.೫.ಪಿ೩ ನವೆಂಬರ್ ೨೦೨೧ ಪ್ರಕಾಶನ ೨೦೨೦

ಮೂಲತಃ ಸ್ಪಾನಿಷ್ ನಲ್ಲಿ ಪ್ರಕಟವಾದ ಹಾಗೆ *ಚೈತನ್ಯದ ಬದುಕಿನ ಮೇಲೆ ಪ್ರತಿಫಲನಗಳು*
ಕೃತಿಸ್ವಾಮ್ಯ © ೧೯೮೭, ೧೯೯೫, ೨೦೦೮, ೨೦೨೦ ಇವರಿಂದ ರೂಹಿ ಫೌಂಡೇಷನ್, ಕೊಲಂಬಿಯ
ಐಎಸ್‌ಬಿಎನ್ ೯೭೮-೯೫೮-೫೮೮೮೦-೩-೩

Permission for a limited printing of this book in Kannada has been granted to the Regional Training Institute of Karnataka by the Ruhi Institute.

ರೂಹಿ ಸಂಸ್ಥೆ
ಕಲಿ, ಕೊಲಂಬಿಯ
ಇ ಮೇಲ್: instituto@ruhi.org
ವೆಬ್ ಸೈಟ್: www.ruhi.org

# ಅನುಕ್ರಮಣಿಕೆ


ಶಿಕ್ಷಕಕರಿಗೆ ಕೆಲವು ವಿಚಾರಗಳು ........................................ v

ಬಹಾಯಿ ಬರವಣಿಗೆಗಳನ್ನು ಅರಿಯುವುದು ................ 1

ಪ್ರಾರ್ಥನೆ ............................................................................ 15

ಜೀವನ ಮತ್ತು ಮರಣ ...................................................... 33

# ಶಿಕ್ಷಕಕರಿಗೆ ಕೆಲವು ವಿಚಾರಗಳು

ರೂಹಿ ಸಂಸ್ಥೆಯು ನೀಡುತ್ತಿರುವ ಪ್ರಮುಖ ಪಠ್ಯಾನುಕ್ರಮಗಳಲ್ಲಿ *ಚೈತನ್ಯದ ಬದುಕಿನ ಮೇಲೆ ಪ್ರತಿಫಲನಗಳು*, ಎಂಬ ಮೊದಲನೆಯ ಮಾಲಿಕೆಯನ್ನು ಪ್ರಪಂಚದಾದ್ಯಂತ ಹಲವು ವರ್ಷಗಳಿಂದ ಅಧ್ಯಯನ ಮಾಡಲ್ಪಡುತ್ತಿರುವ ಸ್ಥಳಗಳ ಸಂಖ್ಯೆ ಹೆಚ್ಚುತ್ತಿದೆ. ಬಹುಪಾಲು ಸಂದರ್ಭಗಳಲ್ಲಿ ಈ ವಿಷಯವನ್ನು ಸ್ನೇಹಿತರ ಗುಂಪೊಂದು ಓದುತ್ತದೆ ಮತ್ತು ಚರ್ಚಿಸುತ್ತದೆ, ಅವರು ನಿಯಮಿತವಾಗಿ ಭೇಟಿಯಾಗುವ ಅಧ್ಯಯನ ವಲಯವನ್ನು ಹೊಂದಿರಬಹುದು, ತೀವ್ರಗತಿಯ ಅಧ್ಯಯನಕ್ಕಾಗಿ ಏರ್ಪಡಿಸಿದ ಅಭಿಯಾನದಲ್ಲಿ ಒಟ್ಟಿಗೆ ಸೇರಬಹುದು, ಅಥವಾ ಶಾಲಾ ರಜಾ ದಿನಗಳಲ್ಲಿ ಈ ಶಿಬಿರದಲ್ಲಿ ಒಟ್ಟುಗೂಡಬಹುದು. ಯಾವುದೇ ಸಂದರ್ಭವಿದ್ದರೂ ಗುಂಪಿನ ಒಬ್ಬ ಸದಸ್ಯರು ಶಿಕ್ಷಕಕರಾಗಿ ಕಾರ್ಯ ನಿರ್ವಹಿಸುತ್ತಾರೆ. ಶಿಕ್ಷಕ ಮತ್ತು ಇತರ ಭಾಗವಹಿಸುವವರ ಸಂಬಂಧವು ಶಿಕ್ಷಕ-ವಿಧ್ಯಾರ್ಥಿಯದಲ್ಲ; ಎಲ್ಲರೂ ಪ್ರಜ್ಞಾಪೂರ್ವಕವಾಗಿ ಕಲಿಯಲು ಬಯಸುವ ಪ್ರಕ್ರಿಯೆಯಲ್ಲಿ ಪ್ರತಿಯೊಬ್ಬರೂ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ. ಆದರೆ ಶಿಕ್ಷಕನು ಚರ್ಚೆಯನ್ನು ನಿರ್ಲಿಪ್ತ ಹಾಗೂ ನಿಷ್ಕ್ರಿಯವಾಗಿ ನಡೆಸಿಕೊಡುವವನೂ (ಫಸಿಲಿಟೇಟರ್) ಅಲ್ಲ. ಪಠ್ಯಾನುಕ್ರಮದ ಸಾಕಷ್ಟು ಅಧ್ಯಯನಗಳ ನಂತರ ಅವರು ಪ್ರೋತ್ಸಾಹಿಸುವ ಸೇವಾ ಚಟುವಟಿಕೆಗಳಲ್ಲಿ ಭಾಗವಹಿಸಿ, ಆಕೆ/ಆತನು, ಗುಂಪಿನ ಪ್ರತಿಯೊಬ್ಬ ಸದಸ್ಯರೂ ಅವರು ಅಧ್ಯಯನ ಮಾಡುತ್ತಿರುವ ಪಠ್ಯದ ಗುರಿಯನ್ನು ತಲುಪಲು ಸಹಾಯ ಮಾಡುವಲ್ಲಿ ಶಕ್ತರಾಗಿರುತ್ತಾರೆಯೇ ಸರಿ. ಮೊದಲನೆಯ ಈ ಪುಸ್ತಕದ ಶಿಕ್ಷಕರಾಗಿ ಕಾರ್ಯ ನಿರ್ವಹಿಸುವವರೆಲ್ಲರಿಗೂ ಕಾಲ ಕಾಲಕ್ಕೆ ಪ್ರಸ್ತುತಗೊಳಿಸಲ್ಪಡುವ ಈ ಪೀಠಿಕೆಯಲ್ಲಿನ ವಿಚಾರಗಳ ಅವಲೋಕನ ಸಹಾಯಕ್ಕೆ ಬರಬಹುದು.

ವಿಶ್ವಾದ್ಯಂತ ವೈವಿದ್ಯಮಯ ಹಿನ್ನಲೆಗಳಿಂದ ಸಂಸ್ಥೆಯ ಈ ಮೊದಲ ಪುಸ್ತಕದ ಅಧ್ಯಯನದಲ್ಲಿ ಭಾಗವಹಿಸುವವರಿದ್ದಾರೆ. ಕೆಲವರು ಈಗಾಗಲೇ ಬಹಾಯಿ ಸಮುದಾಯದ ಸದಸ್ಯರಾಗಿದ್ದು ಅವರು ಸ್ವೀಕರಿಸಿದ ಧರ್ಮದ ಸೇವೆಸಲ್ಲಿಸಲು ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವ ಭರವಸೆ ಹೊಂದಿರುತ್ತಾರೆ. ಇತರರು ಈ ಪಠ್ಯದ ಅಧ್ಯಯನವನ್ನು, ಬಹಾಯಿ ನಂಬಿಕೆಯನ್ನು ಒಂದು ಧಾರ್ಮಿಕ ಅನ್ವೇಷಣೆಯ ಸಲುವಾಗಿ ನೋಡುತ್ತಾರೆ. ಇನ್ನೂ ಕೆಲವರು ಬಹಾಯಿ ತತ್ವಗಳಿಗೆ ಆಕರ್ಷಿತರಾಗಿ ಮತ್ತು ಸಮುದಾಯದ ಉದ್ದೇಶಗಳು ಮತ್ತು ಪ್ರಯತ್ನಗಳನ್ನು ಪರಿಚಯಿಸಿಕೊಳ್ಳಲು ಬಯಸುತ್ತಾರೆ ಮತ್ತು ವಿಶೇಷವಾಗಿ ಹೆಚ್ಚಿನ ಸಂಖ್ಯೆಯ ಯುವ ಜನರು ಬಹಾಯಿ ಸಮುದಾಯವು ಒಂದಲ್ಲ ಒಂದು ಕಾರ್ಯಕ್ರಮದ ಮೂಲಕ ಪ್ರೋತ್ಸಾಹಿಸುವ ಈ ಪಠ್ಯಕ್ರಮವನ್ನು, ತಾವು ಸಮಾಜಕ್ಕೆ ಸೇವೆ ಸಲ್ಲಿಸುವ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಲು ಒಂದು ಪ್ರಥಮ ಹೆಜ್ಜೆಯಾಗಿ ತೆಗೆದುಕೊಳ್ಳುತ್ತಾರೆ.

ರೂಹಿ ಸಂಸ್ಥೆಯ ಪಠ್ಯಾನುಕ್ರಮಗಳು ಮಾನವತೆಯ ಸೇವಾ ಪಥಕ್ಕೆ ದಾರಿಯನ್ನು ತೋರುತ್ತದೆ, ಅದರ ಮೇಲೆ ನಾವು ನಮ್ಮದೇ ಆದ ವೇಗದಲ್ಲಿ ನಡೆಯಬಹುದು, ಇತರರಿಗೆ ನೆರವು ನೀಡುತ್ತೇವೆ ಮತ್ತು ಇತರರಿಂದ ನಾವು ನೆರವನ್ನು ಪಡೆಯುತ್ತೇವೆ, ಎಂಬುದು ಪ್ರಾರಂಭದಿಂದಲೂ ಎಲ್ಲಾ ಭಾಗವಹಿಸುವವರಿಗೂ ಸ್ಪಷ್ಟವಾಗಿರಬೇಕು. ಈ ಹಾದಿಯಲ್ಲಿ ಸಾಗುವುದು ದ್ವಿಮುಖ ನೈತಿಕ ಉದ್ದೇಶದ ಅನ್ವೇಷಣೆಯನ್ನು ಸೂಚಿಸುತ್ತದೆ: ಒಬ್ಬರ ಸ್ವಂತ ಆಧ್ಯಾತ್ಮಿಕ ಮತ್ತು ಬೌದ್ದಿಕ ಬೆಳವಣಿಗೆಯನ್ನು ನೋಡಿಕೊಳ್ಳುವುದು ಮತ್ತು ಸಮಾಜದ ಪರಿವರ್ತನೆಗೆ ಕೊಡುಗೆ ನೀಡುವುದು. ಈ ಹಾದಿಯಲ್ಲಿನ ಪ್ರಗತಿಗೆ ತಿಳುವಳಿಕೆ ಮತ್ತು ಜ್ಞಾನ, ಆಧ್ಯಾತ್ಮಿಕ ಗುಣಗಳು ಮತ್ತು ಶ್ಲಾಘನೀಯ ವರ್ತನೆಗಳು ಮತ್ತು ಹಲವಾರು ಸಾಮರ್ಥ್ಯಗಳು ಮತ್ತು ಕೌಶಲ್ಯಗಳ ಅಭಿವೃದ್ದಿಯು ಅವಶ್ಯವಾದುದ್ದಾಗಿದೆ. ರೂಹಿ ಸಂಸ್ಥೆಯ ಪುಸ್ತಕಗಳಲ್ಲಿನ ಜ್ಞಾನದ ಮೂಲವನ್ನು, ಒಂದೆಡೆ, ಬಹಾಯಿ ನಂಬಿಕೆಯ ಬೋಧನೆಗಳಿಂದ ,ಮತ್ತೊಂದೆಡೆ, ಬೌದಿಕ ಮತ್ತು ಆಧ್ಯಾತ್ಮಿಕ ನಾಗರಿಕತೆಯನ್ನು ಮುಂದುವರೆಸುವಲ್ಲಿ ವಿಶ್ವಾದ್ಯಂತ ಬಹಾಯಿ ಸಮುದಾಯವು ಸಂಗ್ರಹಿಸಿರುವ ಅನುಭವದಿಂದ ಪಡೆದುದಂತಾಗಿದೆ. ಬಿಡಿ ವ್ಯಕ್ತಿಯ ಬಹಾಉಲ್ಲಾರವರ ದೂರದೃಷ್ಟಿ ಹಾಗೂ ನಾವು ನಿರ್ಮಿಸುವ ನಾಗರೀಕತೆಯ ಪ್ರಕ್ರಿಯೆಯು ಸಂಸ್ಥೆಗೆ ಸ್ಪೂರ್ಥಿಯಾಗಿದೆ. ಎಲ್ಲಾ ಭಾಗವಹಿಸುವವರು ಅವರ ಹಿನ್ನೆಲೆಯಿಂದ ವಿಮುಕ್ತರಾಗಿ, ಪ್ರತಿ ಪುಸ್ತಕದ ಪ್ರತಿಯೊಂದು ಘಟಕದಲ್ಲೂ ಸ್ಪಷ್ಟವಾಗಿರುವ ಈ ದೂರದೃಷ್ಟಿಯನ್ನು ಸ್ವೀಕರಿಸಲು ಮುಕ್ತರಾಗಿರುತ್ತಾರೆಂದು ಭಾವಿಸುತ್ತೇವೆ.

ಪಂಥಗಳು ಮತ್ತು ಸಿದ್ಧಾಂತಗಳು ಅನುಯಾಯಿಗಳನ್ನು ಗೆಲ್ಲಲು ಯಾವುದೇ ವಿಧಾನವನ್ನು ಬಳಸಿಕೊಳ್ಳಲು ಸಿದ್ಧರಿರುವ ಜಗತ್ತಿನಲ್ಲಿ, ಬಹಾಯಿ ನಂಬಿಕೆಯ ಪರಿಚಯವಿಲ್ಲದ ಯಾರಾದರೂ ರೂಹಿ ಸಂಸ್ಥೆಯ ಉದ್ದೇಶಗಳ ಬಗ್ಗೆ ಸಹಜವಾದ ಪ್ರಶ್ನೆಗಳನ್ನು ಹೊಂದಿರಬಹುದು, ಅತ್ಯಂತ ಗಮನಾರ್ಹವಾಗಿ – "ನನ್ನ ಧರ್ಮವನ್ನು ಬದಲಾಯಿಸಲು ನನ್ನನ್ನು ಕೇಳಲಾಗಿದೆಯೇ?" ಅಥವಾ "ನನ್ನನ್ನು ಒಂದು ಧರ್ಮಕ್ಕೆ ಸೇರಲು ಕೇಳಲಾಗಿದೆಯೇ?" ಇಂತಹ ಪ್ರಶ್ನೆಗಳು ಶಿಕ್ಷಕರಿಗೆ ಪಠ್ಯಾನುಕ್ರಮದ ಉದ್ದೇಶವನ್ನು ಮೇಲೆ ತಿಳಿಸಿದ ರೂಪರೇಖೆಯಂತೆ ವಿವರಿಸಲು ಅವಕಾಶವನ್ನು ನೀಡುತ್ತದೆ. ಬಹಾಯಿಗಳು ತಮ್ಮ ಸ್ನೇಹಿತರು ಸಮುದಾಯಕ್ಕೆ ಸೇರುವುದನ್ನು ನೋಡಲು ಉತ್ಸುಕರಾಗಿರುವುದು ಸಹಜವಾದರೂ, ಅವರ ಸ್ವಂತ ಬೋಧನೆಗಳು ಅವರನ್ನು ನಿಷೇಧಿಸುತ್ತವೆ, ಆಗ ಮತಾಂತರದ ಕುರಿತು ಶಿಕ್ಷಕನು ಹೇಳ ಬಯಸಬಹುದು. ಸಂಸ್ಥೆಯ ಪಠ್ಯಾನುಕ್ರಮಗಳ ಮೂಲಕ ತೆರೆದಿರುವ ಸೇವೆಯ ಹಾದಿಯಲ್ಲಿ ನಡೆಯುವುದು, ಬಹಾಉಲ್ಲಾರವರ ಬೋಧನೆಗಳ ಬಗ್ಗೆ ಸದಾ ಆಳವಾದ ಜ್ಞಾನ – ತಿಳುವಳಿಕೆಯನ್ನು ಬಯಸುತ್ತದೆ, ಇದನ್ನು ಪಠ್ಯವಿಷಯಗಳು ನಿಸ್ಸಂದಿಗ್ಧವಾಗಿ ರೂಪಿಸಲು ಪ್ರಯತ್ನಿಸುತ್ತವೆ; ಧರ್ಮದ ಸ್ವೀಕಾರ ಮತ್ತು ನಂಬಿಕೆಯು ಪ್ರತಿಯೊಬ್ಬ ವ್ಯಕ್ತಿಯು ಮುಕ್ತವಾಗಿ ಮತ್ತು ಒತ್ತಡವಿಲ್ಲದೆ ಆಲೋಚಿಸಬೇಕಾದ ವಿಷಯಗಳು.

ಆದ್ದರಿಂದ ಪಠ್ಯಾನುಕ್ರಮದಲ್ಲಿನ ಎಲ್ಲಾ ಪುಸ್ತಕಗಳ ಕೇಂದ್ರವಾಗಿರುವ, ಈ ಮೊದಲನೆಯ ಪುಸ್ತಕವು ಅರ್ಥೈಸುವಿಕೆಯ ಪ್ರಶ್ನೆಯ ಬಗೆಗೆ ಇದೆ. ಪವಿತ್ರ ಬರಹಗಳನ್ನು ಓದುವುದೆಂದರೆ ಒಬ್ಬ ವ್ಯಕ್ತಿಯು ಜೀವಿತಕಾಲದಲ್ಲಿ ಕಾಣುವ ಸಾವಿರಗಟ್ಟಲೆ ಸಂಪುಟಗಳನ್ನು ಓದುವುದಂತಲ್ಲ ಮತ್ತು "ಬಹಾಯಿ ಬರಹಗಳನ್ನು ಅರಿಯುವುದು" ಎಂಬ ಘಟಕವು ಪ್ರತಿದಿನ ಪವಿತ್ರ ಗ್ರಂಥದ ಬರಹಗಳನ್ನು ಓದುವ ಮತ್ತು ಅವುಗಳ ಅರ್ಥದ ಮೇಲೆ ಧ್ಯಾನ ಮಾಡುವ ಅಭ್ಯಾಸವನ್ನು ಬೆಳೆಸಲು ಪ್ರಯತ್ನಿಸುತ್ತದೆ. ಈ ಅಭ್ಯಾಸವು ಭಾಗವಹಿಸುವವರು ಸೇವೆಯ ಹಾದಿಯಲ್ಲಿ ಸಾಗುವಾಗ ಹೆಚ್ಚಿನ ಸಹಾಯ ಮಾಡುತ್ತದೆ. ಅವರ ಅಧ್ಯಯನದಲ್ಲಿ ಅವರಿಗೆ ಮಾರ್ಗದರ್ಶನ ನೀಡಲು, ಶಿಕ್ಷಕನು ವಿಷಯಗಳನ್ನು ಅರಿಯುವ ಬಗ್ಗೆ ಆಳವಾಗಿ ಯೋಚಿಸಬೇಕು.

ಬಹಾಯಿ ಬರಹಗಳು ಆಳವಾದ ಆಧ್ಯಾತ್ಮಿಕ ಸತ್ಯಗಳನ್ನು ಒಳಗೊಂಡಿವೆ, ಮತ್ತು ಅವುಗಳ ಅಪರಿಮಿತ ತಾತ್ಪರ್ಯದ ಬಗ್ಗೆ ನಮ್ಮ ತಿಳುವಳಿಕೆಯನ್ನು ಹೆಚ್ಚಿಸಲು ನಾವು ಪ್ರಯತ್ನಿಸಿದರೂ, ನಾವು ಎಂದಿಗೂ ಒಂದು ನಿರ್ಣಾಯಕ ಅಂತ್ಯವನ್ನು ತಲುಪಲು ಸಾಧ್ಯವಿಲ್ಲ ಎಂದು ನಮಗೆ ತಿಳಿದಿದೆ. ಒಂದು ಭಾಗವನ್ನು ಓದಿದ ನಂತರ ಅದರ ಅತೀ ಸಮೀಪದ ಅರ್ಥದ ಮೂಲಭೂತ ಗ್ರಹಿಕೆಯನ್ನು ನಾವು ಹೆಚ್ಚಾಗಿ ಪಡೆಯುತ್ತೇವೆ. "ಪ್ರಪಂಚದ ಸುಧಾರಣೆಯನ್ನು ಪರಿಶುದ್ಧ ಮತ್ತು ಉತ್ತಮ ಕೃತಿಗಳ ಮೂಲಕವೂ, ಶ್ಲಾಘನೀಯ ಮತ್ತು ಸಭ್ಯ ನಡತೆಯ ಮೂಲಕವೂ ಸಾಧಿಸಬಹುದು", "ಪ್ರಪಂಚದ ಸುಧಾರಣೆಯನ್ನು ಹೇಗೆ ಸಾಧಿಸಬಹುದು?" ಎಂದು ಭಾಗವಹಿಸುವವರನ್ನು ಸರಳವಾಗಿ ಕೇಳಲಾಗುತ್ತದೆ ಈ ರೀತಿಯ ಹೆಚ್ಚಿನ ಪ್ರಶ್ನೆಗಳು ಮತ್ತು ಅಭ್ಯಾಸಗಳನ್ನು ನೋಡಲು ತುಂಬಾ ಸರಳವಾಗಿದೆ. ಹಲವಾರು ವರ್ಷಗಳ ಅನುಭವದಿಂದ ಈ ರೀತಿಯಾಗಿ ಪ್ರಾರಂಭ ಮಾಡುವುದು ಸಂಸ್ಥೆಯ ನಿರ್ಧಾರವಾಗಿದೆ. ಒಂದು ಬರಹದಲ್ಲಿ ಸತ್ಯದ ಪದರಗಳನ್ನು ಕಂಡುಕೊಳ್ಳುವ ತರಾತುರಿಯಲ್ಲಿ, ಮನಸ್ಸು ಅದರ ಸ್ಪಷ್ಟ ಅರ್ಥವನ್ನು ಕಡೆಗಣಿಸಬಾರದು ಎಂಬುದನ್ನು ನಾವೆಲ್ಲರೂ ನೆನಪಿನಲ್ಲಿಡಬೇಕಾಗಿದೆ. ಈ ಮೊದಲ ಹಂತದ ಗ್ರಹಿಕೆಯು ಗುಂಪು ಸಮಾಲೋಚನೆಗೆ ಪ್ರಮುಖವಾದುದು ಎಂಬುದು ಧೃಡವಾಗುತ್ತದೆ; ಇದು ಏಕತೆಯ ಚಿಂತನೆಯನ್ನು ಬಲಪಡಿಸುತ್ತದೆ, ಏಕೆಂದರೆ ಸ್ವಂತ ಅಭಿಪ್ರಾಯಗಳು ದಿವ್ಯ ವಿವೇಕದಿಂದ ಪ್ರಕಾಶಿತವಾಗಿದ್ದರೆ ಮಾತ್ರ ಐಕ್ಯತೆಯನ್ನು ಸಾಧಿಸಬಹುದು.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಅನೇಕ ವಚನಗಳ ಅತೀ ಸಮೀಪದ ಅರ್ಥವನ್ನು ಗ್ರಹಿಸಬೇಕಾದರೆ ಸಂದರ್ಭಕ್ಕೆ ಹೊರತಾಗಿ ಒಂದೇ ಪದಗಳ ಅರ್ಥದ ಬಗ್ಗೆ ಸುದೀರ್ಘ ಚರ್ಚೆ ಮಾಡುವುದು ಪ್ರಯೋಜನಕ್ಕೆ ಬಾರದು. ಇಲ್ಲಿ ಒಂದು ಗುಂಪು ಕೆಲವೊಮ್ಮೆ ನಿಘಂಟಿನಲ್ಲಿ ಒಂದು ಪದವನ್ನು ಹುಡುಕುವುದು ಅನಿವಾರ್ಯವಾಗಬಹುದು ಎಂದು ಹೇಳಲಾಗಿದೆ. ಆದಾಗ್ಯೂ, ಭಾಗವಹಿಸುವವರು ಇಡೀ ವಾಕ್ಯ ಮತ್ತು ವಾಕ್ಯವೃಂದಗಳಿಂದ ಪದಗಳನ್ನು ಅರ್ಥೈಸಿಕೊಳ್ಳುವುದು ಹೇಗೆ ಎಂಬುದನ್ನು ಕಲಿಯುವುದು ಹೆಚ್ಚು ಫಲಪ್ರದವಾಗಬಹುದು.

ತಕ್ಷಣದ ಅರಿಯುವಿಕೆಯ ಕ್ಷೇತ್ರವನ್ನು ಮೀರಿದ ವಿಶಾಲವಾದ ತಿಳುವಳಿಕೆಗಾಗಿ, ಆಲೋಚನೆಗಳು ಹೇಗೆ ನಿರ್ದಿಷ್ಟ ಅಭಿವ್ಯಕ್ತಿಯನ್ನು ಕಂಡುಕೊಳ್ಳುತ್ತವೆ ಎಂಬುದನ್ನು ತೋರಿಸುವ ಉದಾಹರಣೆಗಳು ಸಹಾಯಕವಾಗುತ್ತವೆ. ಈ ಉದ್ದೇಶಕ್ಕಾಗಿಯೇ ವಿಷಯದಲ್ಲಿನ ಎಲ್ಲಾ ಅಭ್ಯಾಸಗಳು ನೇರವಾಗಿ ಕೇಳಲ್ಪಟ್ಟಿರುತ್ತದೆ. ಉದಾಹರಣೆಗೆ, ವಿಭಾಗ 2 ರಲ್ಲಿ, ಭಾಗವಹಿಸುವವರು ತಾವು ಓದಿದ ಒಂದು ವಾಕ್ಯವೃಂದದ ಬೆಳಕಿನಲ್ಲಿ, ಕೆಲವು ಗುಣಲಕ್ಷಣಗಳು ಶ್ಲಾಘನೀಯವೇ ಎಂದು ನಿರ್ಧರಿಸಲು

ಕೇಳಲಾಗುತ್ತದೆ. ವಿಭಾಗ 4 ರಲ್ಲಿ ಇದೇ ರೀತಿಯ ಅಭ್ಯಾಸದಲ್ಲಿ, ಐದು ಸದ್ಗುಣಗಳನ್ನು ಹೆಸರಿಸಿ, ನಂತರ ಬರಹಗಳಲ್ಲಿ "ಎಲ್ಲಾ ಮಾನವ ಸದ್ಗುಣಗಳ ಅಡಿಪಾಯ" ಎಂದು ವಿವರಿಸಿರುವಂತೆ ಅವುಗಳಲ್ಲಿ ಯಾವುದನ್ನಾದರೂ ಸತ್ಯಸಂಧತೆಯ ಅನುಪಸ್ಥಿತಿಯಲ್ಲಿ ಪಡೆದುಕೊಳ್ಳಲು ಸಾಧ್ಯವಿದೆಯೇ ಎಂದು ನಿರ್ಧರಿಸಿ ಎಂದು ಅವರನ್ನು ಪ್ರೋತ್ಸಾಹಿಸಲಾಗುತ್ತದೆ.

ಅದರ ಉದ್ದೇಶವನ್ನು ಸಾಧಿಸಲು, ಕೆಲವು ವಾಕ್ಯವೃಂದದ ಸೂಚ್ಯಾರ್ಥಗಳ ಬಗ್ಗೆ ಯೋಚಿಸಲು ಅರ್ಥಮಾಡಿಕೊಳ್ಳುವಂತೆ ಘಟಕವು ಭಾಗವಹಿಸುವವರಿಗೆ ಸವಾಲು ಹಾಕುವ ಮೂಲಕ ಮತ್ತಷ್ಟು ಮುನ್ನಡೆಯನ್ನು ಕೋರುತ್ತದೆ, ವಿಭಾಗ 2 ರಲ್ಲಿ ಪ್ರಸ್ತುತಪಡಿಸಿರುವಂತೆ "ತಮ್ಮ ಕೃತಿಗಳಿಂದ ಏನೂ ಪರಿಣಾಮ ಬೀರದೆ ಇರುವ ಕೆಲವೇ ಒಳ್ಳೆಯ ವ್ಯಕ್ತಿಗಳು ಈ ಪ್ರಪಂಚದಲ್ಲಿದ್ದಾರೆ" ಎಂಬ ಹೇಳಿಕೆಯು ನಿಜವೇ ಎಂದು ಅವರು ನಿರ್ಧರಿಸುವುದು ಅವಶ್ಯವಾಗಿರುತ್ತದೆ. ಇಲ್ಲಿ ಕೇವಲ ಅಭಿಪ್ರಾಯಗಳನ್ನು ಹೊರಹೊಮ್ಮಿಸುವುದು ಉದ್ದೇಶವಲ್ಲ. ಶಿಕ್ಷಕನು ಸ್ವಲ್ಪ ನಿಂತು ಭಾಗವಹಿಸುವವರ ಉತ್ತರದ ಕಾರಣವನ್ನು ಪ್ರಶ್ನಿಸಬೇಕು. ಹೇಳಿಕೆಯು ಅಗತ್ಯವಾಗಿ ಸುಳ್ಳಾಗಿರಬೇಕು ಏಕೆಂದರೆ ಅದು ಹಿಂದಿನ ವಿಭಾಗದಲ್ಲಿನ ಮೊದಲನೇ ಉದ್ಧರಣಕ್ಕೆ ವಿರುದ್ಧವಾಗಿದೆ ಎಂದು ಗುಂಪು ತೀರ್ಮಾನಕ್ಕೆ ಬರಬೇಕು. ಬಹಾಯಿಗಳು ತಮ್ಮ ಪಾಪಗಳನ್ನು ಇತರರೊಂದಿಗೆ ಒಪ್ಪಿಕೊಳ್ಳಬಹುದೇ ಎಂಬ ಪ್ರಶ್ನೆಯೂ ಈ ರೀತಿಯ ಅಭ್ಯಾಸದ ಉದಾಹರಣೆಯಾಗಿದೆ. ಇದು ತಪ್ಪೊಪ್ಪಿಗೆಯನ್ನು, ಪಾಪನಿವೇದನೆಯ ವಿರುದ್ಧ ಸಾಧನವೆಂದು ಬೋಧನೆಗಳಲ್ಲಿ ನಿಷೇಧಿಸಿರುವುದನ್ನು ಸೂಚಿಸುತ್ತದೆ, "ವಿಚಾರಣೆಯ ದಿನದ ಕರೆ ಬರುವ ಮುಂಚೆಯೇ ನಿನ್ನ ಗುಣಾವಗುಣದ ಲೆಕ್ಕವನ್ನು ಸರಿಪಡಿಸಿ ತಿಳಿದುಕೋ" ಎಂಬ ವಚನದ ಅರ್ಥವನ್ನು ಅನ್ವೇಷಿಸುವ ಮೂಲಕ ಇದನ್ನು ಅರಿಯಬಹುದಾಗಿದೆ, ಇದನ್ನು ಹೊರತುಪಡಿಸಿ ಅಧ್ಯಯನ ಮಾಡಿದ ಯಾವುದೇ ವಾಕ್ಯವೃಂದಗಳಲ್ಲಿ ಈ ಕುರಿತು ಸ್ಪಷ್ಟವಾಗಿ ಉಲ್ಲೇಖಿಸಲಾಗಿಲ್ಲ.

ಪರಿಗಣಿಸಲ್ಪಟ್ಟಿರುವ ವಾಕ್ಯವೃಂದಗಳಲ್ಲಿ ಪ್ರತಿಪಾದಿಸಲಾದ ಅರ್ಥದ ವ್ಯಾಪ್ತಿಯನ್ನು ಒಳಗೊಳ್ಳಲು ಘಟಕದಲ್ಲಿನ ಅಭ್ಯಾಸಗಳು ಖಂಡಿತವಾಗಿಯೂ ಪ್ರಯತ್ನಿಸುವುದಿಲ್ಲ. ಯಾವುದೇ ಅಭ್ಯಾಸವನ್ನು ಎಷ್ಟು ಚರ್ಚೆ ಮಾಡಬೇಕು ಎಂಬುದು ಪ್ರತಿಯೊಬ್ಬ ಶಿಕ್ಷಕನೂ ಧ್ಯಾನದಲ್ಲಿರಿಸಬೇಕಾದ ಒಂದು ಪ್ರಶ್ನೆ. ಅನೇಕ ಸಂಬಂಧಿತ ಆದರೆ ಬಾಹ್ಯ ಪರಿಕಲ್ಪನೆಗಳನ್ನು ಪರಿಚಯಿಸುವ ಮೂಲಕ ದೀರ್ಘತರದ ಚರ್ಚೆಗಳು ವಿಷಯದ ಪರಿಣಾಮಕಾರಿತ್ವವನ್ನು ಕುಂಠಿತಗೊಳಿಸುತ್ತವೆ ಎಂಬುದನ್ನು ಇಲ್ಲಿ ನೆನಪಿನಲ್ಲಿರಿಸಿಕೊಳ್ಳಬೇಕು. ಪ್ರತಿ ಗುಂಪು ಪ್ರಗತಿಯ ಸಮಂಜಸವಾದ ಲಯವನ್ನು ಸ್ಥಾಪಿಸುವ ಅಗತ್ಯವಿದೆ; ಭಾಗವಹಿಸುವವರಿಗೆ ತಮ್ಮದೇ ಸಾಮರ್ಥ್ಯಕ್ಕನುಗುಣವಾಗಿ ಸ್ಥಿರವಾಗಿ ಮುಂದುವರಿಯುತ್ತಿದ್ದೇವೆಂಬ ನಿರ್ದಿಷ್ಟ ಜ್ಞಾನವಿರುವುದು ಅಗತ್ಯ. ಆದಾಗ್ಯೂ, ಅಭ್ಯಾಸದ ಚಿಂತನಶೀಲ ವಿಶ್ಲೇಷಣೆಯಿಲ್ಲದೆ ವಿಭಾಗಗಳು ತ್ವರಿತವಾಗಿ ಮತ್ತು ಮೇಲ್ನೋಟಕ್ಕೆ ಹಾದುಹೋಗದಂತೆ ಶಿಕ್ಷಕನು ಗಮನವಿಡಬೇಕು; ಈ ರೀತಿಯಾಗಿ ಮುಂದುವರಿದ ಗುಂಪುಗಳು, ಬಹುತೇಕ ಉತ್ತರಗಳನ್ನು ಭರ್ತಿ ಮಾಡುತ್ತವೆ, ಎಂದಿಗೂ ಶಾಶ್ವತ ಫಲಿತಾಂಶಗಳನ್ನು ಸಾಧಿಸಿಲ್ಲ.

ಒಂದು ಅಂತಿಮ ಅಂಶವು ಉಲ್ಲೇಖಾರ್ಹವಾಗಿದೆ: ಗುಂಪಿನ ಪ್ರತಿಯೊಬ್ಬ ಸದಸ್ಯರೂ ಕಲಿಕೆಯ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿದ್ದಾರೆ ಎಂದು ಖಚಿತಪಡಿಸಿಕೊಳ್ಳುವುದು ಶಿಕ್ಷಕನನ್ನು ಅವಲಂಬಿಸಿದೆ. ಭಾಗವಹಿಸುವ ಯಾವುದೇ ವ್ಯಕ್ತಿಯನ್ನು ಯಾವುದೇ ಒತ್ತಡ ಹೇರದೆ ಮಾತನಾಡುವಂತೆ ಮಾಡುವುದು ಆಗಾಗ್ಗೆ ಸವಾಲಿನ ವಿಷಯ. ಪ್ರಾರಂಭದಿಂದಲೇ ಸ್ಪಷ್ಟವಾಗಿರಿಸಿಕೊಳ್ಳಬೇಕಾದ ವಿಷಯವೆಂದರೆ, "ಇದರರ್ಥ ನಿಮಗೇನೆನ್ನಿಸುತ್ತದೆ?" ಎಂಬಂತಹ ಪ್ರಶ್ನೆಗಳನ್ನು ಕೇಳುವ ಮೂಲಕ ಈ ಸವಾಲನ್ನು ವಿರಳವಾಗಿ ಎದುರಿಸಲಾಗುತ್ತದೆ, ಈ ರೀತಿಯ ಪ್ರಶ್ನೆಗಳು ಜ್ಞಾನ ಮತ್ತು ಸತ್ಯವನ್ನು ಅಭಿಪ್ರಾಯದ ಮಟ್ಟಕ್ಕೆ ತಗ್ಗಿಸುತ್ತವೆ. ವಾಸ್ತವವಾಗಿ ಗುಂಪಿನ ಸದಸ್ಯರಲ್ಲಿ ಸಮಾಲೋಚನೆಯೇ ಹೆಚ್ಚಿನ ಅರ್ಥೈಸುವಿಕೆಯ ಉದಯ ಎಂಬ ವಾತಾವರಣವನ್ನು ಸೃಷ್ಟಿಸುವುದು ಕಠಿಣವಾಗುತ್ತದೆ.

ಪುಸ್ತಕದಲ್ಲಿನ ಎರಡನೆಯ ಘಟಕವು ಆಧ್ಯಾತ್ಮಿಕ ಜೀವನಕ್ಕೆ ಅಗತ್ಯವಾದ ಅಭ್ಯಾಸವನ್ನು ಹೊಂದಿರುವ ಮೊದಲನೆಯ ಘಟಕಕ್ಕೆ ಸಂಬಂಧಿಸಿದೆ : ನಿಯಮಿತವಾದ ಪ್ರಾರ್ಥನೆ. ಇದು ಆರಂಭಿಕ ವಿಭಾಗದಲ್ಲಿ "ಸೇವಾ ಪಥ" ಎಂಬ ಪರಿಕಲ್ಪನೆಯನ್ನು ಸ್ಪಷ್ಟಪಡಿಸುತ್ತದೆ, ಈ ಹಾದಿಯಲ್ಲಿ ನಡೆಯಲು ನಾವು ದ್ವಿಮುಖ ಉದ್ದೇಶದಿಂದ ಸ್ಫೂರ್ತಿ ಪಡೆಯಬೇಕು ಎಂದು ಸಲಹೆ ನೀಡಲಾಗಿದೆ. ಭಾಗವಹಿಸುವವರು ಒಳನೋಟವನ್ನು ನೀಡುವ ಆರಂಭಿಕ ಉಲ್ಲೇಖಗಳ ಗುಂಪನ್ನು ಪರಿಶೀಲಿಸುತ್ತಾರೆ, ಈ ಉದ್ದೇಶದ ಸ್ವರೂಪ, ಭವಿಷ್ಯದ ತರಗತಿಗಳಲ್ಲಿ ವಿಸ್ತಾರವಾಗಿ ಹೇಳಲಾಗುವ ಒಂದು ವಿಷಯ.

ಈ ವಿಷಯದ ಹಿನ್ನೆಲೆಯಲ್ಲಿ, ಘಟಕವು ಪ್ರಾರ್ಥನೆಯ ಮಹತ್ವದ ಅನ್ವೇಷಣೆಯನ್ನು ತೆಗೆದುಕೊಳ್ಳುತ್ತದೆ. ಇದು ಹಿಂದಿನ ವಾಕ್ಯವೃಂದಗಳಲ್ಲಿ ವಿವರಿಸಿದ ವಿಧಾನವನ್ನು ಅನುಸರಿಸುತ್ತದೆ.

ಅಧ್ಯಯನ ಮಾಡಲಾಗುತ್ತಿರುವ ಬರಹಗಳಿಂದ ವಾಕ್ಯವೃಂದಗಳನ್ನು ಅರ್ಥಮಾಡಿಕೊಳ್ಳಲು ಪ್ರಶ್ನೆಗಳು ಮತ್ತು ಅಭ್ಯಾಸಗಳನ್ನು ರಚಿಸಲಾಗಿದೆ. ಗುಂಪು ಘಟಕದ ಮೂಲಕ ಮುಂದುವರೆದಂತೆ, ಹಿಂದಿನ ವ್ಯಾಖ್ಯಾನಗಳು ಮತ್ತು ಅಭ್ಯಾಸಗಳಲ್ಲಿ ಬೇರೂರಿರುವ ಕಲ್ಪನೆಗಳನ್ನು ವಿಶ್ಲೇಷಿಸುವ ಮೂಲಕ ಶಿಕ್ಷಕರಿಗೆ ಅನುಮಾನಗಳನ್ನು ಹೋಗಲಾಡಿಸಬೇಕಾಗಬಹುದು. ಕೆಲವು ಸಂಪ್ರದಾಯಗಳಲ್ಲಿ, ಆಚರಣೆ ಮತ್ತು ಮಾದರಿಯು ಕ್ರಮೇಣ ಆಂತರಿಕ ಸ್ಥಿತಿಯ ಮಹತ್ವವನ್ನು ಮರೆಮಾಡಿದೆ. ಮತ್ತು ಅನೇಕರು ಪ್ರಾರ್ಥನೆಯ ಅವಶ್ಯಕತೆಯನ್ನು ನಿರ್ಲಕ್ಷಿಸುತ್ತಾರೆ, ಇದು ಮಾನವನ ಆತ್ಮಕ್ಕೆ, ದೇಹವನ್ನು ಪೋಷಿಸುವಲ್ಲಿ ಆಹಾರಕ್ಕಿಂತ ಕಡಿಮೆ ನಿರ್ಣಾಯಕವಲ್ಲ.

ಈ ಘಟಕವು ಎಲ್ಲಕ್ಕಿಂತ ಹೆಚ್ಚಾಗಿ, ಭಾಗವಹಿಸುವವರಲ್ಲಿ "ದೇವರೊಂದಿಗೆ ಸಂಭಾಷಣೆ" ನಡೆಸುವ ಬಯಕೆಯನ್ನು ಜಾಗೃತಗೊಳಿಸಲು ಮತ್ತು ಆತನ ಹತ್ತಿರ ಆಕರ್ಷಿಸಲು ಆಕಾಂಕ್ಷಿಸುತ್ತದೆ. ಸಂಭೋಧಿಸಲ್ಪಟ್ಟ ವಿಚಾರಗಳಲ್ಲಿ ಪ್ರಾರ್ಥನೆಯ ಸ್ಥಿತಿಗೆ ಪ್ರವೇಶಿಸುವುದು ಎಂದರೇನು, ನಾವು ಹಾಗೆ ಮಾಡಿದಾಗ ನಮ್ಮ ಹೃದಯ ಮತ್ತು ಮನಸ್ಸಿನ ಭಾವ, ಮತ್ತು ನಾವು ಒಬ್ಬರೇ ಇದ್ದರೂ ಅಥವಾ ಕೂಟದಲ್ಲಿದ್ದರೂ ನಮ್ಮ ಸುತ್ತಮುತ್ತಲಿನ ವಾತಾವರಣಗಳಲ್ಲಿ ಸೃಷ್ಟಿಸಬೇಕಾದ ಪರಿಸ್ಥಿತಿಗಳು ಹೇಗಿರಬೇಕು ಎಂಬುದಾಗಿತ್ತು. ವಾಸ್ತವವಾಗಿ, ಸಾಮೂಹಿಕ ಆರಾಧನೆಯ ಮೂಲಕ ಉತ್ಪತ್ತಿಯಾಗುವ ಶಕ್ತಿಗಳನ್ನು ಕುರಿತು ಸ್ವಲ್ಪ ಆಲೋಚನೆ ಮಾಡಿದ ನಂತರ, ಭಾಗವಹಿಸುವವರು ಪ್ರಾರ್ಥನೆ ಮತ್ತು ಭಕ್ತ್ಯಾತ್ಮಕ ಕೂಟಗಳು ಆಯೋಜಿಸುವುದನ್ನು ಪರಿಗಣಿಸಲು ಕೋರಲಾಗುತ್ತದೆ.

ಪುಸ್ತಕದ ಮೂರನೇ ಘಟಕವಾದ "ಜೀವನ ಮತ್ತು ಮರಣ" ದ ಅಧ್ಯಯನವು, ಸೇವೆಯ ಹಾದಿಯಲ್ಲಿ ನಡೆಯುವ ಬದ್ಧತೆ ಮತ್ತು ಹೆಚ್ಚಿದ, ಅರ್ಥಪೂರ್ಣ, ಅಗಾಧ ಪ್ರಜ್ಞೆಯನ್ನು ಬಲಗೊಳಿಸುತ್ತದೆ ಎಂದು ಆಶಿಸಲಾಗಿದೆ. ಈ ಜಗತ್ತಿನಲ್ಲಿನ ಸೇವೆಯನ್ನು, ನಮ್ಮ, ಜೀವನದ ಸಂಪೂರ್ಣ ಸಂದರ್ಭಕ್ಕೆ ಅರ್ಥ ಮಾಡಿಕೊಳ್ಳಬೇಕು , ಐಹಿಕ ಅಸ್ತಿತ್ವವನ್ನು ಮೀರಿ, ನಮ್ಮ ಆತ್ಮಗಳು, ದೇವರ ಪ್ರಪಂಚದಾದ್ಯಂತ ಶಾಶ್ವತವಾಗಿ ಪ್ರಗತಿಯಾಗುವವರೆಗೂ ಮುಂದುವರಿಯುತ್ತದೆಯೆಂದು ಉತ್ತಮವಾಗಿ ಅರ್ಥೈಸಲ್ಪಡುತ್ತದೆ. ಶಿಕ್ಷಣದ ಪ್ರಕ್ರಿಯೆಯಲ್ಲಿ, ತಾಂತ್ರಿಕ ತರಬೇತಿಗೆ ವಿರುದ್ಧವಾಗಿ, ಭಾಗವಹಿಸುವವರು ತಾವು ಏನು ಮಾಡುತ್ತಿದ್ದಾರೆ ಎಂಬುದರ ಅರ್ಥ ಮತ್ತು ಮಹತ್ವದ ಬಗ್ಗೆ ಹೆಚ್ಚು ಜಾಗೃತರಾಗುತ್ತಾರೆ. ಅಂತಹ ಪ್ರಜ್ಞೆ ಹೊರಹೊಮ್ಮಿದಾಗ ಮಾತ್ರ, ಅವರು ತಾವು ತಮ್ಮದೇ ಆದ ಸ್ವಂತ ಕಲಿಕೆಯ, ಸಕ್ರಿಯ, ಜವಾಬ್ದಾರಿಯುತ "ಒಡೆಯರು", ಎಂದು ಕಾಣುವರೆಂಬುದನ್ನು"' ಅನುಭವದಿಂದ ತಿಳಿಯಬಹುದಾಗಿದೆ.

ಘಟಕದ ಪ್ರತಿಯೊಂದು ವಿಭಾಗವು ಬಹಾಯಿ ಬರಹಗಳಿಂದ ಆಯ್ದ ಒಂದರಿಂದ ಮೂರು ಉದ್ಧರಣದ ನಂತರ ಕೆಲವು ಅಭ್ಯಾಸಗಳೊಂದಿಗೆ ಪ್ರಾರಂಭವಾಗುತ್ತದೆ. ಈ ಘಟಕದಲ್ಲಿ ಉಲ್ಲೇಖಿಸಲಾದ ವಾಕ್ಯವೃಂದಗಳ ಭಾಷೆ ಹಿಂದಿನ ಎರಡಕ್ಕಿಂತ ಹೆಚ್ಚು ಕ್ಲಿಷ್ಟವಾಗಿವೆ. ಗುಂಪು ಕಷ್ಟಕರವಾದ ಪದಗಳ ಅರ್ಥದಲ್ಲೇ ಮುಳುಗುವ ಅಗತ್ಯವಿಲ್ಲ; ಪ್ರತಿಯೊಂದು ವಿಭಾಗದಲ್ಲೂ ತಿಳಿಸಲಾದ ಪ್ರಧಾನ ಆಶಯವನ್ನು ಪ್ರತಿಯೊಬ್ಬರೂ ಗ್ರಹಿಸುತ್ತಿರುವರು ಎಂದು ಶಿಕ್ಷಕನು ಖಚಿತಪಡಿಸಿಕೊಳ್ಳಬೇಕಾಗುತ್ತದೆ , ಯಾವುದನ್ನು ನಿಖರವಾಗಿ ಅಭ್ಯಾಸಗಳೂ ಸಹ ಹೊರತರಲು ಪ್ರಯತ್ನಿಸುತ್ತವೆ.

ವಿಷಯದ ಸ್ವರೂಪವನ್ನು ಗಮನಿಸಿದರೆ, ನಿರ್ದಿಷ್ಟ ಉದಾಹರಣೆಗಳನ್ನು ಒಳಗೊಂಡ ಅಭ್ಯಾಸಗಳು ಬಹಳ ಕಡಿಮೆ ಮತ್ತು ವಿರಳ. ಬಹಳ ಜನ ಪರಿಕಲ್ಪನಾ ಮಟ್ಟದಲ್ಲಿ ಕಾರ್ಯನಿರ್ವಹಿಸಲು ಒಲವು ತೋರುತ್ತಾರೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಅಭ್ಯಾಸದಿಂದ ಕೇಳಲಾಗುವ ಕೆಲವು ಪ್ರಶ್ನೆಗಳಿಗೆ ತ್ವರಿತ ಅಥವಾ ಸುಸ್ಪಷ್ಟವಾಗಿ ಉತ್ತರಿಸಲಾಗುವುದಿಲ್ಲ. ವಿಷಯದ ಬಗ್ಗೆ ಜಾಗೃತಿ ಮೂಡಿಸಲು ಅವುಗಳನ್ನು ಪರಿಚಯಿಸಲಾಗಿದೆ; ಭಾಗವಹಿಸುವವರು ಅಂತಹ ಪ್ರಶ್ನೆಗಳ ಬಗ್ಗೆ ಯೋಚಿಸಿದಾಗ ಮಾತ್ರ ಕಲಿಕೆಯ ಉದ್ದೇಶವು ಈಡೇರುತ್ತದೆ.

ಮೊದಲ ಹಲವಾರು ವಿಭಾಗಗಳು ಮಾನವನ ಆತ್ಮ ಮತ್ತು ದೇಹದ ನಡುವಿನ ಸಂಬಂಧದ ಮೇಲೆ ಕೇಂದ್ರೀಕರಿಸುತ್ತದೆ. ಯಾವು ಈ ಅಸ್ತಿತ್ವದ ಸ್ತರದಲ್ಲಿ ಒಬ್ಬ ಮನುಷ್ಯನನ್ನು ರೂಪಿಸುತ್ತದೆ. ಈ ವಿಭಾಗಗಳಲ್ಲಿ ಪ್ರಸ್ತುತಪಡಿಸಲಾದ ಪ್ರಧಾನ ವಿಷಯವೆಂದರೆ, ಆತ್ಮವು ಭೌತಿಕ ಅಸ್ತಿತ್ವದ್ದಲ್ಲ; ದೇಹದೊಂದಿಗಿನ ಅದರ ಒಡನಾಟವನ್ನು ಕನ್ನಡಿಯಲ್ಲಿ ಕಾಣುವ ಬೆಳಕಿಗೆ ಹೋಲಿಸಬಹುದು. ಅದರ ಮೇಲ್ಮೈಯನ್ನು ಆವರಿಸಿರುವ ಧೂಳು ಅಥವಾ ಅಂತಿಮವಾಗಿ ಕನ್ನಡಿಯ ನಾಶವು ಬೆಳಕಿನ ವೈಭವದ ಮೇಲೆ ಪರಿಣಾಮ ಬೀರುವುದಿಲ್ಲ. ಸಾವು ಕೇವಲ ಸ್ಥಿತಿಯ ಬದಲಾವಣೆಯಾಗಿದೆ; ದೇಹ ಮತ್ತು ಆತ್ಮದ ನಡುವಿನ ಒಡನಾಟವು ಮುರಿದ ನಂತರ, ಆತ್ಮವು ತನ್ನ ಸೃಷ್ಟಿಕರ್ತನ ಕಡೆಗೆ ಶಾಶ್ವತವಾಗಿ ಮುಂದುವರಿಯುತ್ತದೆ.

ನಂತರ ಈ ಘಟಕವು ಜೀವನದ ಉದ್ದೇಶದ ವಿಚಾರದ ಕಡೆಗೆ ತಿರುಗುತ್ತದೆ - ದೇವರನ್ನು ಅರಿಯುವುದು ಮತ್ತು ಆತನ ಸಮ್ಮುಖವನ್ನು ಸಾಧಿಸುವುದು. ಇಲ್ಲಿ ಚರ್ಚೆಯು ಎರಡು ವಿಶಾಲ ವಿಷಯಗಳ ಸುತ್ತ ಸುತ್ತುತ್ತದೆ. ಮೊದಲನೆಯದು ಈ ಜಗತ್ತಿನಲ್ಲಿ ನಮ್ಮ ಜೀವನದ ಉದ್ದೇಶ, ಮತ್ತು ಎರಡನೆಯದು ಸಾವಿನ ನಂತರ ಆತ್ಮದ ಪ್ರಯಾಣ. ಆತ್ಮವು ದೇವರ ಸಂಕೇತವಾಗಿದೆ ಮತ್ತು ಅವನ ಎಲ್ಲಾ ಹೆಸರುಗಳು ಮತ್ತು ಗುಣಲಕ್ಷಣಗಳನ್ನು ಪ್ರತಿಬಿಂಬಿಸಬಲ್ಲದು, ಆದರೂ ಮಾನವರೊಳಗಿನ ಸಾಮರ್ಥ್ಯವು ಸುಪ್ತವಾಗಿದೆ; ಮಾನವತೆಗೆ ಮಾರ್ಗದರ್ಶನ ನೀಡಲು ಕಾಲಕಾಲಕ್ಕೆ ಬಂದ ಪವಿತ್ರವಾದ ದೇವರ ಅವತಾರಪುರುಷರ ಸಹಾಯದಿಂದ ಮಾತ್ರ ಇದನ್ನು ಅಭಿವೃದ್ಧಿಪಡಿಸಲಾಗುವುದು. ಅವರು ಒದಗಿಸುವ ಆಧ್ಯಾತ್ಮಿಕ ಶಿಕ್ಷಣದ ಮೂಲಕ, ನಮ್ಮೊಳಗೆ ಅಡಗಿರುವ ಸಂಪತ್ತನ್ನು ಬಹಿರಂಗಪಡಿಸಬಹುದು.

ಮರಣಾನಂತರದ ಆತ್ಮದ ಪ್ರಯಾಣದ ಬಗ್ಗೆ, ಮನನ ಮಾಡಲು ಭಾಗವಹಿಸುವವರಿಗೆ ವಿಚಾರ ಸರಣಿಗಳನ್ನು ಬಿಚ್ಚಿಡಲಾಗುತ್ತದೆ: ದೇವರಲ್ಲಿ ಭರವಸೆ ಹೊಂದಿರುವವರು ನಿಜವಾದ ಆನಂದವನ್ನು ಪಡೆಯುವರು; ನಮ್ಮಲ್ಲಿ ಯಾರಿಗೂ ನಮ್ಮ ಕೊನೆಯನ್ನು ಅರಿಯಲು ಸಾಧ್ಯವಿಲ್ಲ, ಆದ್ದರಿಂದ, ನಾವು ಒಬ್ಬರನ್ನೊಬ್ಬರು ಕ್ಷಮಿಸಬೇಕು ಮತ್ತು ಇತರರಿಗಿಂತ ಶ್ರೇಷ್ಠರೆಂದು ಭಾವಿಸಬಾರದು; ಮುಂದಿನ ಜಗತ್ತಿನಲ್ಲಿ, ಹೀಗೆಯೇ, ಆತ್ಮವು ಮುಂದುವರಿಯುತ್ತದೆ ಮತ್ತು ನಾವು ಇಲ್ಲಿ ಅಭಿವೃದ್ಧಿಪಡಿಸಿದ ಆಧ್ಯಾತ್ಮಿಕ ಸಾಮರ್ಥ್ಯಗಳು ಅಲ್ಲಿ ನಮಗೆ ಸಹಾಯ ಮಾಡುತ್ತವೆ; ದೇವರ ಸಾಮ್ರಾಜ್ಯದಲ್ಲಿ ನಮ್ಮ ಪ್ರೀತಿಪಾತ್ರರನ್ನು ನಾವು ಗುರುತಿಸುತ್ತೇವೆ, ಈ ಬೌತಿಕ ಪ್ರಪಂಚದಲ್ಲಿನ ನಮ್ಮ ಜೀವನವನ್ನು ಅಲ್ಲಿ ನೆನಪಿಸಿಕೊಳ್ಳುತ್ತೇವೆ ಮತ್ತು ಪವಿತ್ರ ಆತ್ಮಗಳ ಒಡನಾಟವನ್ನು ಆನಂದಿಸುತ್ತೇವೆ.

ಈ ಜೀವನದ ಬದಲಾವಣೆಗಳು ಮತ್ತು ಅವಕಾಶಗಳು ನಮಗೆ ದುಃಖವನ್ನು ತರಲು ನಾವು ಅನುಮತಿಸಬಾರದು ಏಕೆಂದರೆ ಪರಮಸುಖದ ದಿನಗಳು ನಿಮಗಾಗಿ ಕಾದಿವೆ ಎಂದು ಆಶ್ವಾಸನೆ ನೀಡಿರುವ ಬಹಾಉಲ್ಲಾರವರ ಈ ಬರಹದ ಒಂದು ಭಾಗದೊಂದಿಗೆ ಈ ಘಟಕವು ಮುಕ್ತಾಯಗೊಳ್ಳುತ್ತದೆ. ಭಾಗವಹಿಸುವವರು ತಮ್ಮ ಜೀವನಕ್ಕಾಗಿ ತಾವು ಅಧ್ಯಯನ ಮಾಡಿದ ವಿಷಯಗಳ ಅಂತರಾರ್ಥವನ್ನು ಪ್ರತಿಬಿಂಬಿಸಲು ಕೇಳಲಾಗುತ್ತದೆ.



# ಬಹಾಯಿ ಬರಹಗಳನ್ನು ಅರಿಯುವುದು

## ಉದ್ದೇಶ

ಪವಿತ್ರ ಬರಹಗಳಿಂದ ವಾಕ್ಯವೃಂದಗಳನ್ನು ಪ್ರತಿದಿನ
ಓದುವ ಅಭ್ಯಾಸವನ್ನು ಬಲಗೊಳಿಸುವುದು ಮತ್ತು
ಅವುಗಳ ಅರ್ಥದ ಮೇಲೆ ಧ್ಯಾನಮಾಡುವುದು.

# ವಿಭಾಗ 1

ಈ ಘಟಕದ ಉದ್ದೇಶ, ಪವಿತ್ರ ಬರಹಗಳಿಂದ ವಾಕ್ಯವೃಂದಗಳನ್ನು ಪ್ರತಿದಿನ ಓದುವ ಅಭ್ಯಾಸವನ್ನು ಬಲಗೊಳಿಸುವುದು ಮತ್ತು ಅವುಗಳ ಅರ್ಥದ ಮೇಲೆ ಧ್ಯಾನಮಾಡುವುದು. ಈ ಘಟಕವು ಒಂದು ಸರಳವಾದ ಅಭ್ಯಾಸದಿಂದ ಪ್ರಾರಂಭಗೊಳ್ಳುತ್ತದೆ, ಪವಿತ್ರ ಬರಹಗಳಿಂದ ಒಂದು ವಾಕ್ಯವನ್ನು ಓದಲು ಹೇಳುವುದು ಮತ್ತು ನಂತರ ಆ ಹೇಳಿಕೆಯೇ ಉತ್ತರವಾಗಿರುವ ಒಂದು ಪ್ರಶ್ನೆಗೆ ಸ್ಪಂದಿಸುವಂತೆ ಕೇಳಲಾಗುತ್ತದೆ. ಸರಳವಾಗಿದ್ದರೂ ಈ ಅಭ್ಯಾಸವು, ವಾಕ್ಯವೃಂದಗಳ ಅರ್ಥವನ್ನು ಪ್ರತಿಫಲಿಸುವಲ್ಲಿ ಮತ್ತು ಅವುಗಳನ್ನು ಕಂಠಪಾಠ ಮಾಡುವಲ್ಲಿ ಸಹಾಯ ಮಾಡುತ್ತದೆ.

**"ಪ್ರಪಂಚದ ಸುಧಾರಣೆಯನ್ನು ಪರಿಶುದ್ಧ ಮತ್ತು ಉತ್ತಮ ಕೃತಿಗಳ ಮೂಲಕವೂ ಶ್ಲಾಘನೀಯ ಮತ್ತು ಸಭ್ಯನಡತೆಯ ಮೂಲಕವೂ ಸಾಧಿಸಬಹುದು."[1]**

1. ಪ್ರಪಂಚದ ಸುಧಾರಣೆಯನ್ನು ಹೇಗೆ ಸಾಧಿಸಬಹುದು? ________________________________

________________________________________________________________

________________________________________________________________

**"ಓ ಬಹಾನ ಜನರೇ, ಯಾರ ಮಾತುಗಳು ತಮ್ಮ ಕೃತಿಗಳಿಗಿಂತ ಭಿನ್ನವಾಗಿರುತ್ತವೆಯೋ ಅಂತಹವರ ಹಾದಿಯಲ್ಲಿ ನಡೆಯದಂತೆ ಎಚ್ಚರಿಕೆಯಿಂದಿರಿ"[2]**

2. ಯಾರ ಹಾದಿಯಲ್ಲಿ ನಾವು ನಡೆಯಬಾರದು?________________________________

________________________________________________________________

________________________________________________________________

**"ಓ ಜೀವಗುವರ! ವಿಚಾರಣೆಯ ದಿನದ ಕರೆಬರುವ ಮುಂಚೆಯೇ ಪ್ರತಿ ದಿನದ ನಿನ್ನ ಲೆಕ್ಕವನ್ನು ನೀನು ನೀಡು . . ."[3]**

3. ವಿಚಾರಣೆಯ ದಿನದ ಕರೆ ಬರುವ ಮುಂಚೆ ನಾವು ಏನು ಮಾಡಬೇಕು?__________________

________________________________________________________________

________________________________________________________________

**"ಹೇಳಿ, ಓ ಸೋದರರರೇ! ಮಾತುಗಳಲ್ಲ, ಕೃತಿಗಳು ನಿಮ್ಮ ಅಲಂಕಾರವಾಗಿರಲಿ."[4]**

4. ನಮ್ಮ ನಿಜವಾದ ಅಲಂಕಾರ ಯಾವುದಾಗಿರಬೇಕು?________________________________

________________________________________________________________

**"ಪವಿತ್ರ ನುಡಿಗಳು ಮತ್ತು ಪರಿಶುದ್ಧ ಹಾಗೂ ಉತ್ತಮ ಕೃತಿಗಳು ದಿವ್ಯ ವೈಭವವಾದ ಸ್ವರ್ಗಕ್ಕೇರುವವು."[5]**

5. ಪವಿತ್ರ ನುಡಿಗಳು ಮತ್ತು ಪರಿಶುದ್ಧ ಹಾಗೂ ಉತ್ತಮ ಕೃತಿಗಳು ಏನು ಮಾಡುತ್ತವೆ? ________

________________________________________________________________

________________________________________________________________

# ವಿಭಾಗ 2

ನೀವು ಈ ಸಧ್ಯ ಅಧ್ಯಯನ ಮಾಡಿರುವ ಉದ್ಧರಣಗಳಿಗೆ ಸಂಬಂಧಿಸಿದಂತೆ ಹಲವಾರು ಅಭ್ಯಾಸಗಳನ್ನು ಕೆಳಗೆ ಕೊಡಲಾಗಿದೆ. ನಿಮ್ಮ ಗುಂಪಿನಲ್ಲಿ ವಾಕ್ಯವೃಂದಗಳ ಮಹತ್ವದ ಬಗ್ಗೆ ಇನ್ನು ಹೆಚ್ಚಾಗಿ ಪ್ರತಿಫಲಿಸವಂತೆ ಸಹಾಯ ಮಾಡಲು ಅವು ಉದ್ದೇಶಿಸಿವೆ ಮತ್ತು ಇದನ್ನು ಯಾಂತ್ರಿಕವಾಗಿ ಮಾಡಬಾರದು. ಪ್ರತಿ ಅಭ್ಯಾಸಕ್ಕೂ ಹೆಚ್ಚಿನ ಚರ್ಚೆಯ ಅಗತ್ಯವಿದೆ ಎಂದು ಇದರ ಅರ್ಥವಲ್ಲ. ಅಭ್ಯಾಸವು ಸವಾಲಾಗಿದ್ದರೆ, ಆಗ ನಿಮ್ಮ ಗುಂಪಿನ ಶಿಕ್ಷಕರು, ಅದನ್ನು ಚೆನ್ನಾಗಿ ಪರಿಶೀಲಿಸಲು ಸಹಾಯ ಮಾಡುವರು.

1. "ಶ್ಲಾಘನೀಯ" ಎಂದರೆ ಅದು ಹೊಗಳಿಕೆಗೆ ತಕ್ಕುದಾದುದು. ಈ ಕೆಳಗಿನವುಗಳಲ್ಲಿ ಶ್ಲಾಘನೀಯವಾಗಿರುವುದು ಯಾವುದು

   _______ ಉತ್ತಮ ಕೆಲಸಗಾರನಾಗಿರುವುದು

   _______ ಇತರರನ್ನು ಗೌರವಿಸುವುದು

   _______ ಓದುವುದರಲ್ಲಿ ಆಸಕ್ತಿಯುಳ್ಳವನಾಗಿರುವುದು

   _______ ಸುಳ್ಳುಗಾರನಾಗಿರುವುದು

   _______ ಆಲಸಿಯಾಗಿರುವುದು

   _______ ಇತರರ ಸೇವೆ ಮಾಡುವುದು

2. "ಲೆಕ್ಕ ನೀಡಲು ಕರೆ ಬರುವ ಮುನ್ನವೆ" ಎಂಬ ನುಡಿಗಟ್ಟಿನ ಅರ್ಥವೇನು?_______________

   _______________________________________________________________

3. ಈ ಕೆಳಗಿನ ಹೇಳಿಕೆಗಳಲ್ಲಿ ಯಾವು ನಿಜ?

   _______ ತಮ್ಮ ಕೃತಿಗಳಿಂದ ಏನೂ ಪರಿಣಾಮ ಬೀರದೆ ಇರುವ ಕೆಲವೇ ಒಳ್ಳೆಯ ವ್ಯಕ್ತಿಗಳು ಪ್ರಪಂಚದಲ್ಲಿದ್ದಾರೆ.

   _______ ಯಾವುದಾದರೂ, ಇತರರ ಅಭಿಪ್ರಾಯಕ್ಕೆ ಸರಿಹೊಂದುವಂತಿದ್ದರೆ ಸರಿ ಇರಲೇಬೇಕು.

   _______ ಯಾವುದಾದರೂ, ದೇವರ ಬೋಧನೆಗೆ ಸರಿ ಹೊಂದುವಂತಿದ್ದರೆ ಅದು ಸರಿ ಇರಲೇಬೇಕು.

4. ಈ ಕೆಳಗಿನವುಗಳಲ್ಲಿ ಪರಿಶುದ್ಧ ಮತ್ತು ಉತ್ತಮವಾದ ಕೃತಿಗಳು ಯಾವುವು?

   _______ ಮಕ್ಕಳ ಆರೈಕೆ ಮಾಡುವುದು ಮತ್ತು ಅವರಿಗೆ ಶಿಕ್ಷಣ ಕೊಡುವುದು

   _______ ಕದಿಯುವುದು

   _______ ಇತರರ ಅಭಿವೃದ್ಧಿಗಾಗಿ ಪ್ರಾರ್ಥಿಸುವುದು

   _______ ಕಷ್ಟದಿಂದ ತಪ್ಪಿಸಿಕೊಳ್ಳಲು ಒಂದು ಚಿಕ್ಕ ಸುಳ್ಳು ಹೇಳುವುದು

   _______ ಇತರರಿಗೆ ಸಹಾಯ ಮಾಡಿ ಪ್ರತಿಫಲ ಅಪೇಕ್ಷಿಸುವುದು

5. ಈ ಕೆಳಗಿನ ಯಾವ ಪರಿಸ್ಥಿತಿಗಳಲ್ಲಿ ಒಬ್ಬ ವ್ಯಕ್ತಿಯ ಮಾತುಗಳು ಆಕೆ ಅಥವ ಆತನ ಕೃತಿಗಿಂತ ಬಿನ್ನವಾಗಿವೆ?

   _______ ನಾವೆಲ್ಲರೂ ಒಗ್ಗಟ್ಟಾಗಿರಬೇಕು ಎಂದು ಒಬ್ಬರು ಪದೇಪದೇ ಹೇಳುವರು ಆದರೆ ಅವರು ಸಂಘರ್ಷ ಉಂಟಾಗುವ ರೀತಿಯಲ್ಲಿ ವರ್ತಿಸುವರು.

_______ ಸುಶೀಲ ಜೀವನದ ಮೌಲ್ಯವನ್ನು ಒಬ್ಬರು ಹೊಗಳುವರು ಆದರೆ ಅವರು ಮದುವೆಯ ಹೊರಗೆ ಲೈಂಗಿಕತೆ ಹೊಂದಿದ್ದಾರೆ.

_______ ಮಧ್ಯಪಾನ ನಿಷೇಧವಿರುವ ಧರ್ಮವನ್ನು ಅನುಸರಿಸುವೆನೆಂದು ಒಬ್ಬರು ಹೇಳಿಕೊಳ್ಳುವರು ಆದರೆ ಆಗಾಗ್ಗೆ ಮಧ್ಯ ಸೇವನೆಯನ್ನು ಮಾಡುವರು.

_______ ಒಬ್ಬರು ಸ್ತ್ರಿ ಪುರುಷರ ಸಮಾನತೆಯನ್ನು ಪ್ರಚಾರ ಮಾಡುವರು ಆದರೆ, ಒಬ್ಬ ಉದ್ಯೋಗದಾತನಾಗಿ ಹೆಣ್ಣುಮಕ್ಕಳಿಗೆ ಗಂಡು ಮಕ್ಕಳಿಗಿಂತ ಕಡಿಮೆ ಸಂಬಳವನ್ನು ಅದೇ ಕೆಲಸಕ್ಕಾಗಿ ಕೊಡುವರು.

6. ಒಬ್ಬ ಬಹಾಯಿಗೆ ಇನ್ನೊಬ್ಬನ ಮುಂದೆ ತಪ್ಪೊಪ್ಪಿಗೆಗೆ ಅನುಮತಿ ಇದೆಯೇ? _______________

7. ತಪ್ಪೊಪ್ಪಿಗೆಯ ಬದಲು ಆಕೆ ಅಥವ ಆತ ಏನು ಮಾಡಬೇಕು? ____________________________

____________________________________________________________

8. "ದಿವ್ಯ ವೈಭವದ ಸ್ವರ್ಗ" ಎಂಬ ನುಡಿಗಟ್ಟಿನ ಅರ್ಥವೇನು? ____________________________

____________________________________________________________

9. ಕೆಟ್ಟ ಕೃತಿಗಳ ಪರಿಣಾಮ ಪ್ರಪಂಚದ ಮೇಲೆ ಏನಾಗುತ್ತದೆ? ____________________________

____________________________________________________________

10. ತಪ್ಪು ಮಾಡುವವರ ಮೇಲೆ ಕೆಟ್ಟ ಕೃತಿಗಳ ಪರಿಣಾಮ ಏನಾಗುತ್ತದೆ? ____________________

____________________________________________________________

## ವಿಭಾಗ 3

ನೀವು ಈ ಮುಂಬರುವ ಪವಿತ್ರ ಬರಹಗಳಿಂದ ಕೊಟ್ಟಿರುವ ಉದ್ದರಣಗಳನ್ನು ಓದಲು ಹಾಗೂ ಅದರ ಬಗ್ಗೆ ಪ್ರತಿಫಲಿಸಲು ಕೇಳಿಕೊಳ್ಳಲಾಗಿದೆ. ನಂತರ ಅವುಗಳನ್ನು ಕಂಠಪಾಠ ಮಾಡಿ.

**"ಎಲ್ಲಾ ಮಾನವ ಗುಣಗಳ ಅಡಿಪಾಯವೇ ಸತ್ಯ ಸಂಧತೆ."**[6]

1. ಎಲ್ಲಾ ಮಾನವ ಗುಣಗಳ ಅಡಿಪಾಯ ಯಾವುದು? ____________________________________

____________________________________________________________

"**ಸತ್ಯ ಸಂಧತೆ ಇಲ್ಲದೆ ಯಾವುದೇ ಆತ್ಮಕ್ಕೆ ದೇವರ ಎಲ್ಲಾ ಲೋಕಗಳಲ್ಲೂ ಪ್ರಗತಿ ಮತ್ತು ಜಯ ಅಸಾಧ್ಯ**."[7]

2. ಸತ್ಯ ಸಂಧತೆ ಇಲ್ಲದಿದ್ದರೆ ಯಾವುದು ಅಸಾಧ್ಯ? ____________________________________

____________________________________________________________

"**ಓ ಜನರೇ**, **ಸತ್ಯ ಸಂಧತೆಯಿಂದ ನಿಮ್ಮ ನಾಲಿಗೆಗಳನ್ನು ಅಂದಗೊಳಿಸಿರಿ**, **ಮತ್ತು ನಿಮ್ಮ ಆತ್ಮಗಳನ್ನು ಪ್ರಾಮಾಣಿಕತೆ ಎಂಬ ಆಭರಣದಿಂದ ಅಲಂಕರಿಸಿ.**"[8]

3. ನಮ್ಮ ನಾಲಿಗೆಯನ್ನು ಯಾವುದರಿಂದ ಅಂದಗೊಳಿಸಬೇಕು? ______________________________

________________________________________________________________

4. ನಮ್ಮ ಆತ್ಮವನ್ನು ಯಾವುದರಿಂದ ಸಿಂಗರಿಸಬೇಕು? ______________________________

________________________________________________________________

**"ನಿಮ್ಮ ಕಣ್ಣುಗಳು ಪರಿಶುದ್ಧವಾಗಿರಲಿ, ನಿಮ್ಮ ಕೈಗಳು ನಿಷ್ಕರವಾಗಿರಲಿ, ನಿಮ್ಮ ನಾಲಿಗೆಗಳು ಸತ್ಯ ಸಂಧವಾಗಿರಲಿ, ನಿಮ್ಮ ಹೃದಯಗಳು ಪ್ರಜ್ವಲಿತವಾಗಿರಲಿ."**[9]

5. ನಮ್ಮ ಕಣ್ಣು ಹೇಗಿರಬೇಕು? ______________ ನಮ್ಮ ಕೈ? ______________________

ನಮ್ಮ ನಾಲಿಗೆ? __________________ ನಮ್ಮ ಹೃದಯ? ______________________

"**ದೈವೀ ಸಾಮ್ರಾಜ್ಯದಲ್ಲಿ ವಾಸಮಾಡುತ್ತಿರುವವರು ಹಾಗೂ ಅವಿನಾಶಿ ವೈಭವದ ಪೀಠಗಳಲ್ಲಿ ಆಸೀನರಾಗಿರುವವರು ತಾವು ಹಸಿವೆಯಿಂದ ಸಾಯುತ್ತಿದ್ದರೂ, ಆತ ಎಷ್ಟೇ ನೀಚ ಮತ್ತು ಅಯೋಗ್ಯನಾಗಿದ್ದರೂ ತಮ್ಮ ನೆರೆಹೊರೆಯವನ ಆಸ್ತಿಗಾಗಿ ಕಾನೂನುಬಾಹಿರವಾಗಿ ತಮ್ಮ ಕೈಗಳನ್ನು ಚಾಚಲಾರರು**."[10]

6. ನಾವು ಹಸಿವೆಯಿಂದ ಸಾಯುತ್ತಿದ್ದರೂ ಏನನ್ನು ಮಾಡಲು ತಿರಸ್ಕರಿಸಬೇಕು? ____________

________________________________________________________________

________________________________________________________________

## ವಿಭಾಗ 4

ನೀವು ವಿಭಾಗ ೨ ರಲ್ಲಿ ಗಮನಿಸಿದಂತೆ, ಕೆಲವು ಅಭ್ಯಾಸಗಳಿಗೆ ನಿಖರವಾದ ಉತ್ತರಗಳು ಬೇಕಾಗುವವು. ಅಂತಹ ಸಂದರ್ಭಗಳಲ್ಲಿ, ಉತ್ತರದಲ್ಲಿ ಏನಾದರೂ ಸಂದೇಹವಿದ್ದರೆ ನಿಮ್ಮ ಶಿಕ್ಷಕರು ನಿಮ್ಮ ಸಹ ಭಾಗವಹಿಸುವವರ ಸಹಾಯದಿಂದ ಒಮ್ಮತಕ್ಕೆ ಬರಲು ಸಹಾಯ ಮಾಡುವರು. ಉಳಿದ ಅಭ್ಯಾಸಗಳಿಗೆ ಚರ್ಚೆಯೇ ಮೌಲ್ಯಯುತವಾಗಿರುವುದು, ಮತ್ತು ಯಾವುದೇ ಒಂದು ನಿರ್ದಿಷ್ಟ ಉತ್ತರವನ್ನು ನಿರೀಕ್ಷಿಸಲಾಗುವುದಿಲ್ಲ. ಮುಂಬರುವ ೩ನೇ ಅಭ್ಯಾಸವು ಮೊದಲನೆಯ ರೀತಿಯದಾಗಿರುವುದು, ಅದೇ ವೇಳೆ ಅಭ್ಯಾಸ ೬ ಎರಡನೆಯ ವರ್ಗಕ್ಕೆ ಸೇರುವುದು.

1. ಎಲ್ಲಾ ಮಾನವ ಗುಣಗಳ ಅಡಿಪಾಯವೇ ಸತ್ಯ ಸಂಧತೆ, ಐದು ಗುಣಗಳನ್ನು ಪಟ್ಟಿ ಮಾಡಿರಿ:

________________________________________________________________

________________________________________________________________

2. ಈ ಗುಣಗಳನ್ನು ಸತ್ಯಸಂಧತೆ ಇಲ್ಲದಿದ್ದರೆ ಪಡೆಯಲು ಸಾಧ್ಯವೇ? ____________________

3. ಈ ಕೆಳಗಿನ ಹೇಳಿಕೆಗಳಲ್ಲಿ ಯಾವುದು ನಿಜ?

_______ ಸುಳ್ಳು ಹೇಳುತ್ತಿದ್ದರೂ ಒಬ್ಬನು ನ್ಯಾಯವಂತನಾಗಿರಬಹುದು.

_______ ಕಳ್ಳತನ ಮಾಡುವವನ ಕೈ ನಿಷ್ಕಳಂಕವಾಗಿದೆ.

_______ ತನ್ನದಲ್ಲದ್ದಕ್ಕೆ ಪ್ರಾಮಾಣಿಕ ಕೈ ಎಂದೂ ಚಾಚುವುದಿಲ್ಲ.

_______ ಅಶ್ಲೀಲ ಸಾಹಿತ್ಯ ಮತ್ತು ಪುಸ್ತಕಗಳನ್ನು ಓದುವುದು ಪರಿಶುದ್ಧ ಕಣ್ಣುಗಳಿರಬೇಕೆಂದು ಹೇಳುವ ಬಹಾಉಲ್ಲಾರವರ ಹಿತೋಕ್ತಿಗೆ ವಿರುದ್ಧವಾಗಿದೆ.

_______ ಸತ್ಯಸಂಧತೆ ಎಂದರೆ ಸುಳ್ಳು ಹೇಳದಿರುವುದು.

_______ ಪ್ರಾಮಾಣಿಕತೆಯು ಆತ್ಮದ ಆಭರಣವಾಗಿದೆ.

_______ ಸತ್ಯವಂತನಲ್ಲದ ವ್ಯಕ್ತಿ ಆಧ್ಯಾತ್ಮಿಕವಾಗಿ ಪ್ರಗತಿ ಹೊಂದಬಹುದು.

_______ ಆಗೊಮ್ಮೆ ಈಗೊಮ್ಮೆ ಸುಳ್ಳು ಹೇಳುವುದು ಸರಿ.

_______ ಹಸಿವೆ ಇದ್ದಾಗ ಕದಿಯುವುದನ್ನು ದೇವರು ಒಪ್ಪಿಕೊಳ್ಳುತ್ತಾನೆ.

_______ ಒಡೆಯನ ಅನುಮತಿ ಇಲ್ಲದೆ ಆತನ ವಸ್ತುಗಳನ್ನು ಮತ್ತೆ ಹಿಂದಿರುಗಿಸುತ್ತೇನೆಂದು ಯೋಚಿಸಿ ತೆಗೆದುಕೊಳ್ಳುವುದು ಕಳ್ಳತನವಲ್ಲ.

_______ ನಾವು ಪ್ರಾಮಾಣಿಕವಾಗಿ ನಡೆದುಕೊಂಡಾಗ ಮತ್ತು ನ್ಯಾಯ ಹಾಗೂ ಸತ್ಯವಂತರಾದಾಗ ನಮ್ಮ ಹೃದಯವು ಪ್ರಜ್ವಲಿತವಾಗುವುದು..

_______ ಒಂದು ಸ್ವಲ್ಪವೂ ಮೋಸ ಮಾಡದೆ ವ್ಯಾಪಾರದಲ್ಲಿ ಯಶಸ್ವಿಯಾಗುವುದು ಅಸಾಧ್ಯ.

4. ಒಬ್ಬನು ತನಗೆ ತಾನೇ ಸುಳ್ಳು ಹೇಳಿಕೊಳ್ಳಲು ಸಾಧ್ಯವೇ? _______________

5. ಸುಳ್ಳನ್ನು ಹೇಳಿದಾಗ ನಾವು ಏನನ್ನು ಕಳೆದುಕೊಳ್ಳುತ್ತೇವೆ? _______________

_______________________________

6. ನಾವೆಲ್ಲರೂ ಸತ್ಯಸಂಧರು ಮತ್ತು ಪ್ರಾಮಾಣಿಕರಾಗಿದ್ದಲ್ಲಿ ಈ ಪ್ರಪಂಚ ಹೇಗಿರುತ್ತಿತ್ತು? _____

_______________________________

_______________________________

## ವಿಭಾಗ 5

ಈ ಕೆಳಗಿನ ಉಧ್ದರಣಗಳನ್ನು ಅಧ್ಯಯನ ಮಾಡಿ ಮತ್ತು ಕಂಠಪಾಠ ಮಾಡಲು ಪ್ರಯತ್ನಿಸಿ. ಪವಿತ್ರ ಬರಹಗಳಿಂದ ಉಧ್ದರಣಗಳನ್ನು ಕಂಠಪಾಠ ಮಾಡುವುದು ಹೆಚ್ಚು ಲಾಭದಾಯಕ ಮತ್ತು ಅದಕ್ಕೆ ನೀವು ಎಲ್ಲಾ ಪ್ರಯತ್ನಗಳನ್ನು ಮಾಡಬೇಕು. ಖಂಡಿತವಾಗಿ, ಎಲ್ಲರಿಗೂ ಉದ್ಧರಣಗಳನ್ನು ಕಂಠಪಾಠ ಮಾಡುವುದು ಸರಳವಾಗಿರುವುದಿಲ್ಲ. ಪ್ರಯತ್ನ ಪಡುವುದರಿಂದ ವಿಚಾರಗಳನ್ನು ನಮ್ಮ ಹೃದಯ ಮತ್ತು ಮನಸ್ಸಿನ ಮೇಲೆ ಅಚ್ಚೊತ್ತಲು ಹಾಗೂ ಅವುಗಳನ್ನು ಸಾಧ್ಯವಾದಷ್ಟು ಮೂಲ ಪಠ್ಯಕ್ಕೆ ಹತ್ತಿರವಾಗಿರುವ ಪದಗಳಿಂದ ವ್ಯಕ್ತಪಡಿಸಲು ನಮಗೆ ಸಹಾಯ ಆಗುವುದು.

**"ದಯಾಪೂರ್ಣ ನಾಲಿಗೆಯು ಮಾನವ ಹೃದಯಗಳ ಆಯಸ್ಕಾಂತವಾಗಿರುವುದು. ಅದು ಆತ್ಮದ ಆಹಾರ, ಪದಗಳಿಗೆ ಅದು ಅರ್ಥವನ್ನು ಹೊದಿಸುತ್ತದೆ. ಅದು ವಿವೇಕ ಮತ್ತು ಅರಿವೆಂಬ ಪ್ರಕಾಶದ ಕಾರಂಜಿಯಾಗಿರುವುದು . . ."[11]**

1. ದಯಾಪೂರ್ಣ ನಾಲಿಗೆಯನ್ನು ಹೇಗೆ ವರ್ಣಿಸಬಹುದು? _______________

_______________________________

______________________________________________________________

______________________________________________________________

2. ದಯಾಪೂರ್ಣ ನಾಲಿಗೆಯು ಪದಗಳ ಮೇಲೆ ಯಾವ ಪರಿಣಾಮವನ್ನು ಬೀರುವುದು? _______

______________________________________________________________

"**ಓ ಪ್ರಭುವಿನ ಪ್ರೀತಿ ಪಾತ್ರರೇ! ಈ ಪವಿತ್ರ ದೈವ ವ್ಯವಸ್ಥೆಯಲ್ಲಿ, ಸಂಘರ್ಷ ಮತ್ತು ವಾದ ವಿವಾದಗಳಿಗೆ ಅನುಮತಿ ಇಲ್ಲವೇ ಇಲ್ಲ. ಪ್ರತಿಯೊಬ್ಬ ಆಕ್ರಮಣಕಾರನು ದೇವರ ಅನುಗ್ರಹದಿಂದ ವಂಚಿತನಾಗುವನು**."[12]

3. ಈ ಉಲ್ಲೇಖದ ಅನುಸಾರವಾಗಿ ಈ ವ್ಯವಸ್ಥೆಯಲ್ಲಿ ಯಾವುದಕ್ಕೆ ಅನುಮತಿ ಇಲ್ಲ? _________

______________________________________________________________

4. ಆಕ್ರಮಣಕಾರನು ತನಗೆ ತಾನೇ ಏನು ಮಾಡಿಕೊಳ್ಳುವನು? ___________________________

______________________________________________________________

**"ಈ ದಿನದಲ್ಲಿ ದೇವರ ಪ್ರೀತಿಪಾತ್ರರೊಳಗಿನ ಮನಸ್ತಾಪ ಮತ್ತು ವೈರತ್ವ, ವಾದ ವಿವಾದ, ಅಗಲಿಕೆ ಮತ್ತು ನಿರಾಸಕ್ತಿಗಿಂತ ದೊಡ್ಡ ಕೆಡುಕು ಈ ಧರ್ಮದ ಮೇಲೆ ಬೇರಾವುದೂ ಹೇರಲಾರದು."[13]**

5. ದೈವ ಧರ್ಮಕ್ಕೆ ಅತಿ ದೊಡ್ಡ ಕೆಡುಕುಂಟು ಮಾಡುವ ಪರಿಸ್ಥಿತಿಗಳು ಯಾವುವು? ___________

______________________________________________________________

______________________________________________________________

**"ಬರಿ ಬಾಯಿ ಮಾತಿನಲ್ಲೇ ಮಿತ್ರತ್ವವನ್ನು ತೋರಿಸುವುದರಲ್ಲಿ ತೃಪ್ತನಾಗದಿರು ನಿನ್ನ ಹಾದಿಯಲ್ಲಿ ಬರುವ ಪ್ರತಿಯೊಬ್ಬರಿಗಾಗಿಯೂ ನಿನ್ನ ಹೃದಯ ಪ್ರೇಮ ಭರಿತ ದಯೆಯಿಂದ ಹತ್ತಿ ಉರಿಯಲಿ."[14]**

6. ಯಾವ ತರದ ಮಿತ್ರತ್ವ ನಮ್ಮನ್ನು ತೃಪ್ತಿಪಡಿಸಬಾರದು? ___________________________

______________________________________________________________

7. ನಮ್ಮ ಹೃದಯದಲ್ಲಿ ಪ್ರಕಾಶಿತವಾಗಿ ಹತ್ತಿ ಉರಿಯಬೇಕಾದುದೇನು? ____________________

______________________________________________________________

**"ಯುದ್ಧದ ಆಲೋಚನೆಯು ಬಂದಾಗ ಶಾಂತಿಯ ಬಲವಾದ ಆಲೋಚನೆಯಿಂದ ಅದನ್ನು ವಿರೋಧಿಸು, ದ್ವೇಷದ ಆಲೋಚನೆಯನ್ನು ಪ್ರೇಮದ ಬಲಯುತವಾದ ಆಲೋಚನೆಯಿಂದ ನಾಶಗೊಳಿಸಬೇಕು."[15]**

8. ಯುದ್ಧದ ಆಲೋಚನೆಯನ್ನು ಯಾವುದು ವಿರೋಧಿಸಬೇಕು? _________________________

______________________________________________________________

9. ದ್ವೇಷದ ಆಲೋಚನೆಯನ್ನು ಯಾವುದು ನಾಶಗೊಳಿಸಬೇಕು?________________________

________________________________________________________________

## ವಿಭಾಗ 6

ಮೇಲಿನ ಉದ್ಧರಣಗಳನ್ನು ಮನಸ್ಸಿನಲ್ಲಿಟ್ಟುಕೊಂಡು, ಈ ಕೆಳಗಿನ ಅಭ್ಯಾಸಗಳನ್ನು ಪೂರ್ಣಗೊಳಿಸಿ:

1. "ಆಯಸ್ಕಾಂತ" ಎನ್ನುವುದು ಆಕರ್ಷಣೆಯ ಇನ್ನೊಂದು ಹೆಸರು. ಯಾವ ರೀತಿಯಲ್ಲಿ ದಯಾಪೂರ್ಣ ನಾಲಿಗೆಯು ಆಯಸ್ಕಾಂತದಂತೆ ಕೆಲಸ ಮಾಡುವುದು? ________________

________________________________________________________________

2. ಮುಂಬರುವ ವಾಕ್ಯಗಳಲ್ಲಿ ದಯಾಪೂರ್ಣ ನಾಲಿಗೆಯಿಂದ ಯಾವು ಹೊರಬರುವವು?

_______ "ನನಗೆ ತೊಂದರೆ ಕೊಡಬೇಡ!"

_______ "ಇದನ್ನು ನೀನು ಯಾಕೆ ಅರ್ಥ ಮಾಡಿಕೊಳ್ಳುವುದಿಲ್ಲ?"

_______ "ದಯವಿಟ್ಟು ಸ್ವಲ್ಪ ಕಾಯಬಲ್ಲಿರಾ?"

_______ "ಎಂಥ ಭಯಂಕರ ಮಕ್ಕಳು!"

_______ "ಕೃತಜ್ಞತೆಗಳು, ನೀವು ತುಂಬಾ ದಯಾಪೂರ್ಣರು."

_______ "ನನಗೆ ಈಗ ನಿನಗಾಗಿ ಯಾವ ಸಮಯವಿಲ್ಲ. ನಾನು ತುಂಬಾ ಕೆಲಸದಲ್ಲಿದ್ದೇನೆ."

3. ಈ ಮುಂಬರುವ ಯಾವ ಸಂದರ್ಭಗಳಲ್ಲಿ ಸಂಘರ್ಷಣೆ ಮತ್ತು ವಾದ ವಿವಾದವಿರುವುದು?

_______ಯಾವುದಾದರೂ ಸಮಾಲೋಚನೆಯಲ್ಲಿ ಇಬ್ಬರು ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸುವರು.

_______ ಸಮಾಲೋಚನೆಯ ಸಮಯದಲ್ಲಿ ಇಬ್ಬರು ಅಸಮಾಧಾನಗೊಳ್ಳುತ್ತಾರೆ ಮತ್ತು ಪರಸ್ಪರ ವಾದಿಸುತ್ತಾರೆ.

_______ ಇಬ್ಬರು ಪರಸ್ಪರ ಮಾತನಾಡುತ್ತಿಲ್ಲವೆಂಬ ಕಾರಣದಿಂದ, ಒಂದು ಸಾಪ್ತಾಹಿಕ ಭಕ್ತ್ಯಾತ್ಮಕ ಕೂಟದಲ್ಲಿ ಭಾಗವಹಿಸುವುದನ್ನು ನಿಲ್ಲಿಸುವರು.

_______ ಒಂದು ಯೋಜನೆಯಲ್ಲಿ ಸಹವರ್ತಿಗಳಾಗಿ ಕೆಲಸ ಮಾಡುತ್ತಿರುವ ಒಂದು ಗುಂಪಿನ ಜನರು, ಬೇರೆಯವರು ಕೆಲಸ ಮಾಡುವುದಿಲ್ಲವೆಂದು ಪದೇ ಪದೇ ದೂರು ಕೊಡುತ್ತಿರುತ್ತಾರೆ.

4. ಈ ಮುಂದೆ ಕೊಟ್ಟಿರುವ ಪರಿಸ್ಥಿತಿಗಳಲ್ಲಿ, ಯಾವು ಪರಕೀಯತೆಯನ್ನು ತೋರುವ ಲಕ್ಷಣಗಳು?

_______ ಇಬ್ಬರು ಮಿತ್ರರು, ಬೀದಿಯಲ್ಲಿ ಒಬ್ಬರನ್ನೊಬ್ಬರು ದಾಟಿ ಹೋದರೂ ಸಹ ಪರಸ್ಪರ ನಿರ್ಲಕ್ಷಿಸುವುದು.

_______ ಯಾರೋ ಒಬ್ಬಳು ಭಕ್ತಿ ಕೂಟಕ್ಕೆ ಬರುತ್ತಾಳೆ ಮತ್ತು ಅವಳನ್ನು ಎಲ್ಲರೂ ಪ್ರೀತಿಯಿಂದ ಸ್ವಾಗತಿಸುತ್ತಾರೆ.

_______ ಅವರು ಒಬ್ಬರಿಗೊಬ್ಬರು ಸಭ್ಯತೆಯಿಂದ ನಡೆದುಕೊಂಡರೂ, ಗುಂಪಿನ ಇಬ್ಬರು ಒಂದು ಯೋಜನೆಯಲ್ಲಿ ಒಟ್ಟಾಗಿ ಭಾಗವಹಿಸಲು ಹಿಂಜರಿಯುತ್ತಾರೆ.

5. ಈ ಕೆಳಗಿನ ಹೇಳಿಕೆಗಳು ಸರಿಯೇ ಎಂದು ನಿರ್ಧರಿಸಿರಿ:

_______ ಇನ್ನೊಬ್ಬರ ಕುರಿತಾಗಿನ ತಮ್ಮ ಭಾವನೆಗಳನ್ನು ನಿಖರವಾಗಿ ಒಬ್ಬನು ತನಗೆ ತೋಚಿದಂತೆ ಅದು ಇನ್ನೊಬ್ಬನ ಮನಸ್ಸಿಗೆ ನೋವಾಗುವಂತಿದ್ದರೂ ಹೇಳಬೇಕು.

_______ ಸಂಘರ್ಷ ತಪ್ಪಿಸಲಿಕ್ಕಾಗಿ ಸುಳ್ಳು ಹೇಳುವುದು ಸಮ್ಮತ.

_______ ಪ್ರೀತಿ ಮತ್ತು ದಯೆಯಿಂದ ಸಂಘರ್ಷವನ್ನು ಜಯಿಸಬಹುದು.

_______ ಪ್ರೀತಿಯಿಂದ ಹೇಳುವ ಮಾತುಗಳಿಗೆ ಹೆಚ್ಚು ಪರಿಣಾಮವಿರುವುದು.

_______ ಜಗಳ ಶುರುಮಾಡಿದವನ ಜೊತೆ ಜಗಳವಾಡುವುದು ಸರಿ.

_______ ಒಬ್ಬನು ಜಿಗುಪ್ಸೆಯಲ್ಲಿದ್ದಾಗ ಅಥವಾ ದುಃಖದಲ್ಲಿದ್ದಾಗ ಇತರರ ಮೇಲೆ ಕಟುವಾಗಿರುವ ಹಕ್ಕು ಆತನಿಗಿದೆ.

_______ ಇತರರು ತಪ್ಪು ಮಾಡಿದಾಗ ಅವರನ್ನು ನೋಡಿ ನಗುವುದು ನಿರ್ದಯ.

_______ ಮಿತ್ರರೊಳಗೆ ವಿರಸವಿದ್ದಾಗ ಪ್ರತಿಯೊಬ್ಬನೂ ಇನ್ನೊಬ್ಬನಿಗೆ ಹತ್ತಿರವಾಗುವಂತಹ ವಿಶೇಷ ಪ್ರಯತ್ನ ಮಾಡಬೇಕು.

_______ ಮಿತ್ರರೊಳಗೆ ವಿರಸವಿದ್ದಾಗ ಪ್ರತಿಯೊಬ್ಬನೂ ಇನ್ನೊಬ್ಬನು ಅವನಿಗೆ ಹತ್ತಿರವಾಗುವಂತಹ ಪ್ರಯತ್ನ ಮಾಡುವ ತನಕ ಕಾಯಬೇಕು.

## ವಿಭಾಗ 7

ಕೆಳಗೆ ಕೊಟ್ಟಿರುವ ಉದ್ಧರಣಗಳನ್ನು ಅಧ್ಯಯನ ಮಾಡಿ ಮತ್ತು ಅವುಗಳನ್ನು ಕಂಠಪಾಠ ಮಾಡಿ.

**"...ಚಾಡಿ ಹೇಳುವುದು ಹೃದಯದ ಬೆಳಕನ್ನು ನಂದಿಸುತ್ತದೆ, ಮತ್ತು ಆತ್ಮದ ಜೀವನವನ್ನು ಆರಿಸುತ್ತದೆ."[16]**

**"ನೀನೇ ಸ್ವಯಂ ಪಾಪಿಯಾಗಿರುವಾಗ ಅನ್ಯರ ಪಾಪಗಳನ್ನು ಕುರಿತು ಮಾತನಾಡದಿರು."[17]**

**"ನಿನಗಾರೂ ಕೆಟ್ಟದು ಮಾತನಾಡುವುದನ್ನು ಕೇಳಬಾರದೆಂದಿದ್ದರೆ ಕೆಟ್ಟದ್ದನ್ನು ನೀನು ಆಡಬೇಡ, ಹಾಗೂ ನಿನ್ನ ದೋಷಗಳು ದೊಡ್ಡದಾಗಿ ಕಾಣಬಾರದೆಂದಿದ್ದರೆ ಇತರರ ದೋಷಗಳನ್ನು ದೊಡ್ಡದಾಗಿಸಬೇಡ."[18]**

**"ಓ ಜೀವಗುವರ; ನಿನ್ನ ದೋಷಗಳನ್ನು ಮರೆತು ನೀನು ಹೇಗೆ ಅನ್ಯರ ದೋಷಗಣನೆಯಲ್ಲಿ ವೇಳೆಗಳೆಯುವೆ?"[19]**

1. ಚಾಡಿ ಹೇಳುವುದು ಚಾಡಿ ಹೇಳುವವನ ಮೇಲೆ ಯಾವ ಪರಿಣಾಮ ಬೀರುವುದು? __________

_______________________________________________

2. ಇತರರ ಪಾಪಗಳ ಬಗ್ಗೆ ಯೋಚಿಸುವ ಮೊದಲು ನಾವು ಏನನ್ನು ಅರಿತವರಾಗಿರಬೇಕು? _____

_______________________________________________

3. ಇತರರ ದೋಷಗಳನ್ನು ನಾವು ದೊಡ್ಡದನ್ನಾಗಿಸಿದರೆ ನಮಗೇನಾಗುತ್ತದೆ? _______________

_______________________________________________

4. ಇತರರ ದೋಷಗಳನ್ನು ಯೋಚಿಸುವಾಗ ನಾವು ಏನನ್ನು ನೆನಪಿನಲ್ಲಿಡಬೇಕು? ___________

______________________________________________________________

## ವಿಭಾಗ 8

ಮೇಲಿನ ಉದ್ಧರಣಗಳನ್ನು ಮನಸ್ಸಿನಲ್ಲಿಟ್ಟುಕೊಂಡು, ಮುಂಬರುವ ಅಭ್ಯಾಸಗಳನ್ನು ಪೂರ್ಣಗೊಳಿಸಿ:

1. ಇತರರ ದೋಷಗಳತ್ತ ತನ್ನ ಗಮನವನ್ನು ಕೇಂದ್ರಿಕರಿಸುವವನ ಆತ್ಮದ ಪ್ರಗತಿಗೇನಾಗುತ್ತದೆ?_

______________________________________________________________

2. ಚಾಡಿ ಹೇಳುವುದರಿಂದ ಒಂದು ಸಮುದಾಯದ ಮೇಲೆ ಯಾವ ಪರಿಣಾಮವಾಗುತ್ತದೆ?_____

______________________________________________________________

3. ಒಬ್ಬ ಮಿತ್ರನು ಇನ್ನೊಬ್ಬನ ದೋಷಗಳ ಕುರಿತು ಮಾತನಾಡುವಾಗ ನೀವೇನು ಮಾಡುತ್ತೀರಿ?

______________________________________________________________

4. ಈ ಕೆಳಗಿನ ಹೇಳಿಕೆಗಳು ಸರಿಯೇ ಎಂದು ನಿರ್ಧರಿಸಿ:

_______ ಇನ್ನೊಬ್ಬರ ನಿಜವಾದ ತಪ್ಪುಗಳನ್ನು ಎತ್ತಿ ತೋರಿಸಿದರೆ ಅದು ಚಾಡಿ ಹೇಳಿದಂತೆ ಅಲ್ಲ.

_______ ಒಬ್ಬನ ಒಳ್ಳೆ ಗುಣಗಳ ಬಗ್ಗೆ ಮತ್ತು ಅದೇ ವೇಳೆ ತಪ್ಪುಗಳ ಬಗ್ಗೆಯೂ ಮಾತನಾಡಿದರೆ ಅದು ಚಾಡಿ ಹೇಳಿದಂತಾಗುವುದಿಲ್ಲ.

_______ ನಮ್ಮ ಸಮಾಜದಲ್ಲಿ ಚಾಡಿ ಹೇಳುವುದೊಂದು ರೂಢಿಯಾಗಿ ಹೋಗಿದೆ, ನಾವು ಇದನ್ನು ತೊಲಗಿಸುವ ಶಿಸ್ತನ್ನು ಬೆಳೆಸಬೇಕು.

_______ ಬೇರೆಯವರ ಬಗ್ಗೆ ನಾವು ಹೇಳಿದ್ದನ್ನು ಕೇಳುವವನು ಇತರರಿಗೆ ತಿಳಿಸುವುದಿಲ್ಲವೆಂದು ಮಾತುಕೊಟ್ಟರೆ ಅದು ಚಾಡಿ ಹೇಳಿದಂತಾಗುವುದಿಲ್ಲ.

_______ ಐಕ್ಯತೆಯ ಮಹಾ ವಿರೋಧಿಯೇ ಚಾಡಿ ಮಾತನಾಡುವುದಾಗಿದೆ.

_______ ಇತರರ ಬಗ್ಗೆ ಎಲ್ಲಾ ಸಮಯದಲ್ಲೂ ನಾವು ಮಾತನಾಡುವ ಕ್ರಮ ರೂಢಿಸಿಕೊಂಡಾಗ ಚಾಡಿಹೇಳುವ ಅಪಾಯಕ್ಕೆ ನಾವು ಸಿಲುಕಿಕೊಳ್ಳುತ್ತೇವೆ.

_______ ಆಧ್ಯಾತ್ಮಿಕ ಸಭೆಯಲ್ಲಿ ಇತರರಿಗೆ ನಿರ್ದಿಷ್ಟ ಜವಾಬ್ದಾರಿ ವಹಿಸಿಕೊಡಲು ಮಿತ್ರರ ಯೋಗ್ಯತೆಯ ಬಗ್ಗೆ ಚರ್ಚೆ ನಡೆಯುವಾಗ ಅದು ಚಾಡಿ ಹೇಳಿದಂತಾಗುತ್ತದೆ.

_______ ಚಾಡಿ ಮಾತನಾಡುವ ಅಗತ್ಯ ಕಂಡಾಗ ನಾವು ನಮ್ಮದೇ ದೋಷಗಳನ್ನು ಜ್ಞಾಪಿಸಿಕೊಳ್ಳಬೇಕು.

_______ ಧರ್ಮಕ್ಕೆ ಅಥವಾ ಸಮುದಾಯಕ್ಕೆ ಒಬ್ಬನು ಕೆಡುಕನ್ನು ಮಾಡುತ್ತಾನೆಂದು ತಿಳಿದಾಗ ಅದನ್ನು ಇತರ ಬಹಾಯಿಗಳ ಜೊತೆ ನಾವು ಸಮಾಲೋಚಿಸಬೇಕು.

_______ ಧರ್ಮಕ್ಕೆ ಅಥವಾ ಸಮುದಾಯಕ್ಕೆ ಒಬ್ಬನು ಕೆಡುಕನ್ನು ಮಾಡುತ್ತಾನೆಂದು ತಿಳಿದಾಗ ಅದನ್ನು ನಾವು ಸ್ಥಳೀಯ ಆಧ್ಯಾತ್ಮಿಕ ಸಭೆಗೆ ಮಾತ್ರ ತಿಳಿಸಬೇಕು.

_______ ದಂಪತಿಗಳು ಇತರರ ತಪ್ಪುಗಳನ್ನು ಕುರಿತು ಮಾತನಾಡಬಹುದು ಯಾಕೆಂದರೆ ಅವರಲ್ಲಿಯಾವುದೇ ತರಹದ ಗುಟ್ಟು ಇರಬಾರದು.

# ವಿಭಾಗ 9

ಆರಂಭದಲ್ಲಿ ತಿಳಿಸಿದಂತೆ ಈ ಘಟಕದ ಉದ್ದೇಶವು, ಭಾಗವಹಿಸುವವರು ಪ್ರತಿದಿನ ಪವಿತ್ರ ಬರಹಗಳಿಂದ ಉದ್ಧರಣಗಳನ್ನು ಓದುವ ಮತ್ತು ಅವುಗಳ ಅರ್ಥವನ್ನು ಪ್ರತಿಫಲಿಸುವ ಅಭ್ಯಾಸವನ್ನು ಅಭಿವೃದ್ಧಿಪಡಿಸುವ ಮತ್ತು ಬಲಪಡಿಸುವ ಪ್ರಯತ್ನಗಳಲ್ಲಿ ಸಹಾಯ ಮಾಡುವುದು. ಪ್ರತಿದಿನ ಬೆಳಗ್ಗೆ ಮತ್ತು ಸಂಜೆ ದೇವರ ವಚನಗಳನ್ನು ಓದುವುದು ನಮ್ಮ ಆಧ್ಯಾತ್ಮಿಕ ಬೆಳವಣಿಗೆಗೆ ಅನುಕೂಲಕರವೆಂಬುದು ಬಹಾಉಲ್ಲಾರವರ ಬೋಧನೆಯಾಗಿದೆ. ಈ ಭಾಧ್ಯತೆಯನ್ನು ಈಡೇರಿಸುವುದರಿಂದ ನಾವು ಪಡೆಯುವ ಕೊಡುಗೆಗಳ ಬಗ್ಗೆ ಮುಂಬರುವ ವಾಕ್ಯ ವೃಂದಗಳು ಜ್ಞಾಪಿಸುತ್ತವೆ, ಮತ್ತು ಅದನ್ನು ಕಂಠಪಾಠ ಮಾಡಲು ಪ್ರೋತ್ಸಾಹಿಸಲಾಗಿದೆ:

> **"ನನ್ನ ನುಡಿಗಳ ಸಾಗರದಲ್ಲಿ ಮುಳುಗು ಹಾಕಿ, ಇದರಿಂದ ನೀವು ಅದರ ರಹಸ್ಯಗಳನ್ನು ಹೊರ ತೆಗೆಯಬಹುದು, ಮತ್ತು ಅದರ ಆಳಗಳಲ್ಲಿ ಹುದುಗಿರುವ ವಿವೇಕದ ಮುತ್ತುಗಳನ್ನು ಕಂಡುಕೊಳ್ಳಬಹುದು."**[20]

ಈ ಘಟಕವನ್ನು ಪೂರ್ಣಗೊಳಿಸಿದ ನಂತರ, ಬಹಾಉಲ್ಲಾರವರ ಬರವಣಿಗೆಗಳ ಒಂದು ಪುಸ್ತಕವನ್ನು ಪಡೆಯಲು ಮತ್ತು ಅದರಿಂದ ಪ್ರತಿದಿನ ಓದಲು ಇಚ್ಛಿಸಬಹುದು. ಗುಹ್ಯವಚನಗಳು ಉತ್ತಮವಾದ ಮೊದಲ ಆಯ್ಕೆಯಾಗಿದೆ.

# REFERENCES


1. Bahá'u'lláh, cited by Shoghi Effendi, *The Advent of Divine Justice* (Wilmette: Bahá'í Publishing Trust, 2006, 2018 printing), par. 39, pp. 36–37.

2. *Gleanings from the Writings of Bahá'u'lláh* (Wilmette: Bahá'í Publishing Trust, 1983, 2017 printing), CXXXIX, par. 8, p. 345.

3. Bahá'u'lláh, *The Hidden Words* (Wilmette: Bahá'í Publishing Trust, 2003, 2012 printing), Arabic no. 31, p. 11.

4. Ibid., Persian no. 5, p. 24.

5. Ibid., Persian no. 69, p. 46.

6. 'Abdu'l-Bahá, cited by Shoghi Effendi, *The Advent of Divine Justice*, par. 40, p. 39.

7. Ibid.

8. *Gleanings from the Writings of Bahá'u'lláh*, CXXXVI, par. 6, p. 336.

9. *Tablets of Bahá'u'lláh Revealed after the Kitáb-i-Aqdas* (Wilmette: Bahá'í Publishing Trust, 1988, 2005 printing), no. 9.5, p. 138.

10. *Gleanings from the Writings of Bahá'u'lláh*, CXXXVII, par. 3, p. 338.

11. Ibid., CXXXII, par. 5, p. 327.

12. *Will and Testament of 'Abdu'l-Bahá*, (Wilmette: Bahá'í Publishing Trust, 1944, 2013 printing), p. 26.

13. *Gleanings from the Writings of Bahá'u'lláh*, V, par. 5, p. 8.

14. From a talk given on 16 and 17 October 1911, published in *Paris Talks: Addresses Given by 'Abdu'l-Bahá in 1911* (Wilmette: Bahá'í Publishing, 2006, 2016 printing), no. 1.7, p. 6.

15. From a talk given by 'Abdu'l-Bahá on 21 October 1911, ibid., no. 6.7, p. 22.

16. *Gleanings from the Writings of Bahá'u'lláh*, CXXV, par. 3, p. 300.

17. *The Hidden Words*, Arabic no. 27, p. 10.

18. Ibid., Persian no. 44, p. 37.

19. Ibid., Arabic no. 26, p. 10.

20. *Gleanings from the Writings of Bahá'u'lláh*, LXX, par. 2, p. 154.



# ಪ್ರಾರ್ಥನೆ

## ಉದ್ದೇಶ

ಪ್ರಾರ್ಥನೆಯ ಮಹತ್ವದ ಮೇಲೆ ಪ್ರತಿಫಲನೆ ಮಾಡುವುದು ಮತ್ತು ನಿಯಮಿತವಾಗಿ ಪ್ರಾರ್ಥಿಸುವ ಅಭ್ಯಾಸವನ್ನು ಬಲಪಡಿಸುವುದು.

# ವಿಭಾಗ 1

ರೂಹಿ ಸಂಸ್ಥೆಯ ಪಠ್ಯಾನುಕ್ರಮಗಳು ಭಾಗವಹಿಸುವವರಿಗೆ ಸೇವೆಯ ಹಾದಿಯಲ್ಲಿ ನಡೆಯಲು ಸಹಾಯ ಮಾಡಲು ಉದ್ದೇಶಿಸಲಾಗಿದೆ. ದ್ವಿಮುಖ ಉದ್ದೇಶದ ಪ್ರಜ್ಞೆಯಿಂದ ಪ್ರೇರೇಪಿಸಲ್ಪಟ್ಟ ಈ ಹಾದಿಯಲ್ಲಿ ನಾವು ನಡೆಯುತ್ತೇವೆ — ಆಧ್ಯಾತ್ಮಿಕವಾಗಿ ಮತ್ತು ಬೌದ್ಧಿಕವಾಗಿ ಬೆಳೆಯುವುದು ಮತ್ತು ಸಮಾಜದ ಪರಿವರ್ತನೆಗೆ ಕೊಡುಗೆ ನೀಡುವುದು. ನಮ್ಮ ಉದ್ದೇಶದ ಈ ಎರಡು ಅಂಶಗಳು ಪರಸ್ಪರ ಬೇರ್ಪಡಿಸಲಾಗದವು. ಬಹಾವುಲ್ಲಾರವರು ಒಂದು ವಾಕ್ಯದಲ್ಲಿ ನಮಗೆ ಉಪದೇಶಿಸುತ್ತಿದ್ದಾರೆ:

> **"ನಿಮ್ಮ ಸ್ವಂತ ವಿಷಯಗಳಲ್ಲೇ ಕಾಳಜಿ ಹೊಂದದಿರಿ ;ನಿಮ್ಮ ಆಲೋಚನೆಗಳು ಮಾನವ ಕುಲದ ಸೌಭಾಗ್ಯವನ್ನು ಪುನಃಶ್ಚೇತನಗೊಳಿಸುವಲ್ಲಿ ಮತ್ತು ಮಾನವರ ಹೃದಯ ಮತ್ತು ಆತ್ಮಗಳನ್ನು ಪವಿತ್ರಗೊಳಿಸುವ ವಿಷಯಗಳ ಮೇಲೆ ಸ್ಥಿರವಾಗಿರಲಿ."[1]**

ಮತ್ತೊಂದು ವಾಕ್ಯವೃಂದದಲ್ಲಿ , ಅವರು ಹೀಗೆ ಸ್ಪಷ್ಟ ಪಡಿಸಿದ್ದಾರೆ:

> **"...ಕಡು ಶೂನ್ಯತೆಯಿಂದ, ಮರ್ತ್ಯ ಮಾನವರು ಅಸ್ತಿತ್ವದ ಕ್ಷೇತ್ರದ ಕಡೆಗೆ ಹೆಜ್ಜೆ ಇರಿಸಿರುವ ಉದ್ದೇಶ, ಅವರು ಪ್ರಪಂಚದ ಸುಧಾರಣೆಗೆ ಕೆಲಸ ಮಾಡಲಿ ಮತ್ತು ಐಕ್ಯತೆ ಹಾಗೂ ಸಾಮರಸ್ಯದಿಂದ ಬದುಕಲಿ ಎಂದು."[2]**

ನಮ್ಮ ಆಂತರಿಕ ಸ್ಥಿತಿಗೆ ಸಂಬAಧಿಸಿದAತೆ, ಅವರು ಹೀಗೆ ಪ್ರಕಟಿಸಿದ್ದಾರೆ:

> **"ಒಂದು ಶುದ್ಧ ಹೃದಯವು ಕನ್ನಡಿಯಂತೆ; ಅದನ್ನುದೇವರನ್ನು ಹೊರತು ಮಿಕ್ಕ ಎಲ್ಲಾ ವಸ್ತುಗಳ ಮೇಲಿನ ಪ್ರೀತಿ ಮತ್ತು ನಿರ್ಲಿಪ್ತತೆಯಿಂದ ಪ್ರಕಾಶಿತವಾಗಿ ಸ್ವಚ್ಛಗೊಳಿಸಿರಿ. ಇದರಿಂದ ನೈಜ ಸೂರ್ಯನು ಅಲ್ಲಿ ಶಾಶ್ವತ ಶುಭೋದಯದಂತೆ ಪ್ರಕಾಶಿಸಲ್ಪಡುವನು."[3]**

ಮತ್ತು ಅಬ್ದುಲ್ ಬಹಾ ನಮಗೆ ಹೇಳುತ್ತಾರೆ:

> **"ನೀವು ದಿವ್ಯ ಅನುಗ್ರಹಗಳನ್ನು ಸ್ವೀಕರಿಸಲಿಚ್ಛಿಸುವಿರಾದರೆ ನಿಮ್ಮ ಹೃದಯಗಳು ಪರಿಶುದ್ಧವಾಗಿರಬೇಕು ಮತ್ತು ನಿಮ್ಮ ಉದ್ದೇಶ ನಿಷ್ಕಪಟವಾಗಿರಬೇಕು."[4]**

1. ನಮ್ಮ ಆಲೋಚನೆಗಳ ಮತ್ತು ಕಾಳಜಿಗಳ ಗಮನ ಯಾವುದಾಗಿರಬೇಕು? ________________

   ________________________________________________

   ________________________________________________

2. ಯಾವ ಉದ್ದೇಶಕ್ಕಾಗಿ ನಾವು ಕಡು ಶೂನ್ಯತೆಯಿಂದ ಅಸ್ತಿತ್ವದ ಕ್ಷೇತ್ರದ ಕಡೆಗೆ ಹೆಜ್ಜೆಯಿಟ್ಟಿದ್ದೇವೆ?

   ________________________________________________

   ________________________________________________

   ________________________________________________

3. ನಮ್ಮ ಹೃದಯದ ಕನ್ನಡಿಯನ್ನು ನಾವು ಯಾವುದರಿಂದ ಸ್ವಚ್ಛ ಗೊಳಿಸಬೇಕು? __________

   ________________________________________________

4. ದಿವ್ಯ ಅನುಗ್ರಹಗಳನ್ನು ಆಕರ್ಷಿಸುವ ಕೆಲವು ಪರಿಸ್ಥಿತಿಗಳು ಯಾವುವು? ________________

   ________________________________________________

5. ಈ ಕೆಳಗಿನವುಗಳಲ್ಲಿ ಯಾವುದಾದರೂ ನಿಜವೇ?

- ಮೊದಲು ನಿನ್ನನ್ನು ನೀನು ನೋಡಿಕೊಳ್ಳಬೇಕು, ಮತ್ತು ನಂತರ ಇತರರನ್ನು ನೋಡಿಕೊಳ್ಳಬಹುದು.
- ನೀನು ಯಾವಾಗಲೂ ಬೇರೆಯವರಿಗೇ ಸಹಾಯ ಮಾಡುತ್ತಿದ್ದರೆ, ನಿನ್ನ ಸ್ವಂತ ಗುರಿಯಿಂದ ನೀನು ದೃಷ್ಟಿ ಕಳೆದುಕೊಳ್ಳುವೆ.
- ನೀನೇ ನಿನ್ನ ಆಪ್ತ ಮಿತ್ರ.
- ನಿನಗೆ ಯಾವುದು ಸಂತೋಷವನ್ನುಂಟು ಮಾಡುವುದು ಎಂಬುದನ್ನು ಕಂಡುಕೊಳ್ಳುವುದು ಬಹಳ ಮುಖ್ಯ.
- ನಿನ್ನ ಕನಸನ್ನು ಹಿಂಬಾಲಿಸು, ಅದು ನಿನನ್ನ್ನು ಸಂತೋಷದತ್ತ ಕರೆದೊಯ್ಯುತ್ತದೆ.
- ನೀನು ಬೇರೆಯವರಿಗೆ ನೋವುಂಟು ಮಾಡದಿರುವತನಕ, ನೀನು ಏನನ್ನು ಬೇಕಾದರೂ ಮಾಡಬಹುದು.
- ನೀನು ಸ್ವಲ್ಪ ಒಳ್ಳೆಯದನ್ನು ಮಾಡುವವರೆಗೂ, ನಿನ್ನ ಉದ್ದೇಶಗಳು ಸ್ವಾರ್ಥವಾಗಿರುವುದು ಸರಿಯಾಗಿದೆ.

# ವಿಭಾಗ 2

ನಮ್ಮ ದ್ವಿಮುಖ ಉದ್ದೇಶದ ಕೇಂದ್ರಬಿಂದುವೆಂದರೆ, ನಾವೆಲ್ಲರೂ ಉದಾತ್ತರಾಗಿ

ಸೃಷ್ಟಿಸಲ್ಪಟ್ಟಿದ್ದೇವೆ. ಬಹಾಉಲ್ಲಾರವರು ಹೇಳುತ್ತಾರೆ:

**"ಓ ಚೈತನ್ಯದ ಪುತ್ರನೇ! ನಾನು ನಿನ್ನನ್ನು ಸಿರಿವಂತನಾಗಿ ಸೃಷ್ಟಿಸಿರುವೆ, ನೀನೇಕೆ ನಿನ್ನನ್ನು ಬಡತನಕ್ಕೆ ಇಳಿಸಿಕೊಂಡಿರುವೆ? ಉದಾತ್ತನಾಗಿ ನಾನು ನಿನ್ನನ್ನು ಮಾಡಿರುವೆ, ಯಾವ ಕಾರಣಕ್ಕಾಗಿ ನೀನು ನಿನ್ನನ್ನು ತಗ್ಗಿಸಿಕೊಂಡಿರುವೆ? ಜ್ಞಾನದ ಸಾರದಿಂದ ನಿನ್ನನ್ನು ಅಸ್ತಿತ್ವಕ್ಕೆ ತಂದೆ, ನನ್ನನ್ನು ಬಿಟ್ಟು ಬೇರೆ ಯಾರಲ್ಲಿ ನೀನು ಜ್ಞಾನೋದಯವನ್ನು ಹುಡುಕುತ್ತಿರುವೆ? ಪ್ರೀತಿಯ ಮಣ್ಣಿನಿಂದ ನಿನ್ನನ್ನು ರೂಪಿಸಿರುವೆ, ಬೇರೆಯವರೊಂದಿಗೆ ನೀನು ಹೇಗೆ ನಿರತನಾಗುವೆ? ನಿನ್ನ ದೃಷ್ಟಿಯನ್ನು ನಿನ್ನೊಳಗೆ ತಿರುಗಿಸು, ಆಗ ನಿನ್ನೊಳಗೆ ನಾನು ಬಲಿಷ್ಟ, ಶಕ್ತಿಯುತ ಮತ್ತು ಸ್ವಯಂ ಪರಿಪೂರ್ಣನಾಗಿ ನಿಂತಿರುವುದನ್ನು ನೀನು ಕಂಡು ಕೊಳ್ಳುವೆ."[5]**

ಕೆಳಗೆ ಕೊಟ್ಟಿರುವ ಖಾಲಿ ಜಾಗವನ್ನು ತುಂಬುವುದರಿಂದ ಈ ವಾಕ್ಯವೃಂದದ ಮೇಲೆ ಪ್ರತಿಫಲಿಸಲು ಸಹಾಯವಾಗಬಹುದು.

"ಓ ಚೈತನ್ಯದ ಪುತ್ರನೇ! ನಾನು ನಿನ್ನನ್ನು ____________ ಸೃಷ್ಟಿಸಿರುವೆ, ನೀನೇಕೆ ನಿನ್ನನ್ನು __________ ___________ ? _________ ನಾನು ನಿನ್ನನ್ನು _______ , ಯಾವ ಕಾರಣಕ್ಕಾಗಿ ನೀನು ನಿನ್ನನ್ನು _________ ? _________ __________ ನಿನ್ನನ್ನು ಅಸ್ತಿತ್ವಕ್ಕೆ ತಂದೆ, _________ ಬಿಟ್ಟು ಬೇರೆ ಯಾರಲ್ಲಿ ________ ___________ _______ ? __________ ಮಣ್ಣಿನಿಂದ ನಿನ್ನನ್ನು ನಾನು ________ , ____________ ನೀನು ಹೇಗೆ __________ ? ನಿನ್ನ _________ _________

ತಿರುಗಿಸು, ಆಗ ನಿನ್ನೊಳಗೆ ___________ _________ , ____________ ಮತ್ತು ____________ ನಿಂತಿರುವುದನ್ನು ನೀನು ಕಂಡು ಕೊಳ್ಳುವೆ."

ನಮ್ಮ ಆತ್ಮಗಳ ಉದಾತ್ತತೆಯನ್ನು ಸತ್ಯವಾಗಿಸಲು, ನಮ್ಮ ಅಸ್ತಿತ್ವದ ಮೂಲದತ್ತ ನಾವು ತಿರುಗಬೇಕು ಮತ್ತು ಆತನಿಂದ ಜ್ಞಾನೋದಯವನ್ನು ಪಡೆಯಬೇಕು. ಇದನ್ನು ಸಾಧಿಸುವ ಅತ್ಯಂತ ಬಲವಾದ ಮಾರ್ಗವೆಂದರೆ ಪ್ರಾರ್ಥನೆ. ಧರ್ಮ ರಕ್ಷಕರಾದ ಶೋಘಿ ಎಫೆಂಡಿಯವರು "ಅದರ ಮುಖ್ಯ ಗುರಿ, ಆಧ್ಯಾತ್ಮಿಕ ಗುಣಗಳು ಮತ್ತು ಶಕ್ತಿಗಳನ್ನು ಪಡೆಯುವ ಮೂಲಕ ವ್ಯಕ್ತಿ ಮತ್ತು ಸಮಾಜದ ಬೆಳವಣಿಗೆ ಎಂದು ನಮಗೆ ಹೇಳುತ್ತಾರೆ. ಮಾನವನ ಆತ್ಮಕ್ಕೆ ಮೊದಲು ಆಹಾರ ನೀಡಬೇಕು. ಮತ್ತು ಈ ಆಧ್ಯಾತ್ಮಿಕ ಪೋಷಣೆಯನ್ನು ಪ್ರಾರ್ಥನೆಯು ಅತ್ಯುತ್ತಮವಾಗಿ ಒದಗಿಸುತ್ತದೆ."[6]

# ವಿಭಾಗ 3

ದೇವರು ಸರ್ವಜ್ಞ, ಸರ್ವ ವಿವೇಕಿ. ಆತನು ನಮ್ಮನ್ನು ಸೃಷ್ಟಿಸಿದ್ದಾನೆ ಮತ್ತು ನಮ್ಮ ಹೃದಯಗಳಲ್ಲಿ ಏನಿದೆ ಎಂಬುದನ್ನು ತಿಳಿದುಕೊಂಡಿದ್ದಾನೆ ಹಾಗು ನಮಗೆ ಯಾವುದು ಉತ್ತಮವೆಂದು ತಿಳಿದಿದ್ದಾನೆ. ಆತನಿಗೆ ನಮ್ಮ ಪ್ರಾರ್ಥನೆಯ ಅಗತ್ಯವಿಲ್ಲ. ಹಾಗಾದರೆ ನಾವು ಏಕೆ ಪ್ರಾರ್ಥನೆಯನ್ನು ಮಾಡಬೇಕು?

ಅಬ್ದುಲ್ ಬಹಾರವರು ಹೇಳುತ್ತಾರೆ:

**"ಅತ್ಯುನ್ನತ ಪ್ರಾರ್ಥನೆಯಲ್ಲಿ ಮನುಷ್ಯರು ದೇವರ ಮೇಲಿನ ಪ್ರೀತಿಗೋಸ್ಕರವಾಗಿ ಪ್ರಾರ್ಥನೆ ಮಾಡುತ್ತಾರೆ. ದೇವರ ಅಥವಾ ನರಕದ ಭಯದಿಂದಲ್ಲ, ಅಥವ ಅನುಗ್ರಹ ಅಥವ ಸ್ವರ್ಗವನ್ನು ಪಡೆಯುವ ಆಶೆಯಿಂದಲೂ ಅಲ್ಲ... ಒಬ್ಬ ಮನುಷ್ಯನು ಒಂದು ವ್ಯಕ್ತಿಯನ್ನು ಪ್ರೀತಿಸತೊಡಗಿದಾಗ, ಆ ತನ್ನ ಪ್ರಿಯಕರನ ಹೆಸರನ್ನು ಹೇಳದಿರಲು ಸಾಧ್ಯವೇ ಇರುವುದಿಲ್ಲ. ಹಾಗಿರುವಾಗ ದೇವರನ್ನು ಪ್ರೀತಿಸಲು ಒಬ್ಬನು ಪ್ರಾರಂಭ ಮಾಡಿದಾಗ ಆತನ ಹೆಸರನ್ನು ಉಚ್ಚರಿಸದೇ ಇರುವುದು ಇನ್ನೆಷ್ಟು ಕಷ್ಟಕರವಾಗಿರಬಹುದು... ಆಧ್ಯಾತ್ಮಿಕ ವ್ಯಕ್ತಿಯು, ದೇವರ ನಾಮವನ್ನು ಸ್ಮರಣೆ ಮಾಡುವುದರ ವಿನಃ ಇತರ ಯಾವುದರಲ್ಲೂ ಸಂತೋಷ ಕಾಣಲಾರ."[7]**

ಒಂದು ಪ್ರಶ್ನೆಗೆ ಉತ್ತರಿಸುತ್ತಾ, ಅವರು ಹೀಗೆ ವಿವರಿಸಿದ್ದಾರೆ:

**"ಒಬ್ಬ ಮಿತ್ರನು ಇನ್ನೊಬ್ಬನನ್ನು ಪ್ರೀತಿಸುತ್ತಿರುವಾಗ ಹಾಗೆಂದು ಹೇಳಲು ಆಶಿಸುವುದು ಸಹಜ ತಾನೇ? ಮಿತ್ರನಿಗೆ ತನ್ನ ಪ್ರೀತಿಯ ಅರಿವು ಇರುವುದನ್ನು ತಾನು ತಿಳಿದಿದ್ದರೂ ಕೂಡ ಅದರ ಕುರಿತು ಆತನು ಹೇಳಲು ಬಯಸಲಾರನೇ? ಎಲ್ಲಾ ಹೃದಯಗಳ ಬಯಕೆಯನ್ನು ದೇವರು ತಿಳಿದಿದ್ದಾನೆ ನಿಜ; ಆದರೂ ದೇವರಿಗಾಗಿ ಮನುಷ್ಯನಲ್ಲಿ ಪುಟಿಯುತ್ತಿರುವ ಪ್ರೀತಿಯಿಂದ, ಪ್ರಾರ್ಥನೆ ಮಾಡಬೇಕೆಂಬ ಪ್ರೇರಣೆಯು ಸ್ವಾಭಾವಿಕವಾದುದಾಗಿದೆ."[8]**

1. ಕೆಳಗೆ ಕೊಟ್ಟಿರುವ ವಾಕ್ಯಗಳನ್ನು ಪೂರ್ಣ ಗೊಳಿಸಿ:

   a. ____________ ಪ್ರಾರ್ಥನೆಯಲ್ಲಿ ನಾವು ________ ________ ________ ವಾಗಿ ________ ಮಾಡುತ್ತೇವೆ, ದೇವರ ಅಥವ ________ ಭಯದಿಂದಲ್ಲ, ಅಥವ ________ ಅಥವ ________ ಪಡೆಯುವ ಆಶೆಯಿಂದಲೂ ಅಲ್ಲ.

b. ನಾವು ಒಂದು ವ್ಯಕ್ತಿಯನ್ನು ________ ನಮಗೆ ನಮ್ಮ _________ ಹೇಳದಿರಲು __________ . ಹಾಗಿರುವಾಗ ದೇವರನ್ನು _________ ಒಬ್ಬನು ಪ್ರಾರಂಭ ಮಾಡಿದಾಗ ಆತನ ಹೆಸರನ್ನು _______ ಇರುವುದು ಇನ್ನೆಷ್ಟು _________ .

c. ಒಬ್ಬ ಧಾರ್ಮಿಕ ವ್ಯಕ್ತಿಯು, _______ _______ _________ ಮಾಡುವುದರ ವಿನಃ ಇತರ ಯಾವುದರಲ್ಲೂ _________ ಕಾಣಲಾರ.

2. ನಾವೇಕೆ ಪ್ರಾರ್ಥಿಸುವೆವು? ____________________________________________

____________________________________________

3. "ದೇವರ ಸ್ಮರಣೆ" ಎಂಬ ಈ ನುಡಿಗಟ್ಟಿನ ಅರ್ಥವೇನು? ______________________________

____________________________________________

4. ಇನ್ನೊಬ್ಬನನ್ನು ಪ್ರೀತಿಸುವವನ ಕಳಕಳಿಯ ಬಯಕೆ ಏನಾಗಿರುವುದು? _________________

____________________________________________

5. ಪ್ರಾರ್ಥನೆ ಮಾಡಬೇಕೆಂಬ ಪ್ರೇರಣೆಯು ಎಲ್ಲಿಂದ ಪುಟಿಯುತ್ತದೆ? ______________________

____________________________________________

## ವಿಭಾಗ 4

ಬಹಾಉಲ್ಲಾರವರಿಂದ ಪ್ರಕಟಿಸಲ್ಪಟ್ಟ ಒಂದು ಪ್ರಾರ್ಥನೆಯು ಹೀಗಿದೆ:

**"ನಿನ್ನಲ್ಲಿ ನಾನು ಯಾಚಿಸುವೆ . . . ನನ್ನ ಪ್ರಾರ್ಥನೆಯನ್ನು ನಿನ್ನ ಸೌಂದರ್ಯದಿಂದ ನನ್ನನ್ನು ಮರೆಮಾಡಿದ ಪರದೆಗಳನ್ನು ದಹಿಸುವಂತಹ ಬೆಂಕಿಯಂತೆಯೂ ನಿನ್ನ ಸಮ್ಮುಖದ ಸಾಗರದ ಬಳಿಗೆ ಕರೆದೊಯ್ಯುವ ಪ್ರಕಾಶದಂತೆಯೂ ಮಾಡು."[9]**

ಅದೇ ಪ್ರಾರ್ಥನೆಯಲ್ಲಿ ದೇವರನ್ನು ನಾವು ಹೀಗೆ ಕೇಳಿಕೊಳ್ಳುವೆವು:

**"ಓ ನನ್ನ ಪ್ರಭುವೇ, ನನ್ನ ಪ್ರಾರ್ಥನೆಯನ್ನು ನಿನ್ನ ಸಾಮ್ರಾಜ್ಯವಿರುವ ತನಕ ನಾನು ಬಾಳಬಹುದಾದ ಮತ್ತು ನಿನ್ನ ಪ್ರಪಂಚಗಳ ಪ್ರತಿಯೊಂದು ಪ್ರಪಂಚದಲ್ಲೂ ನಿನ್ನ ಹೆಸರನ್ನು ಉಚ್ಚರಿಸಬಹುದಾದ ಜೀವ ಜಲದ ಕಾರಂಜಿಯತೆ ಮಾಡು."[10]**

1. ಪ್ರಾರ್ಥನೆಯು ಬೆಂಕಿಯತೆ ಇರಬಹುದೇ? ಅದು ಏನನ್ನು ದಹಿಸುತ್ತದೆ? _________________

____________________________________________

2. ದೇವರಿಂದ ನಮ್ಮನ್ನು ಮರೆಮಾಚುವಂತಹ ಪರದೆಗಳಲ್ಲಿ ಕೆಲವನ್ನು ಹೆಸರಿಸಿ: ___________

____________________________________________

____________________________________________

3. ಪ್ರಾರ್ಥನೆಯು ಬೆಳಕಿನಂತೆ ಇರಬಹುದೇ? ಅದು ನಮ್ಮನ್ನು ಎಲ್ಲಿಗೆ ಕೊಂಡೊಯ್ಯುತ್ತದೆ? ___

4. ಪ್ರಾರ್ಥನೆಯು ಜೀವ ಜಲದ ಕಾರಂಜಿಯಂತೆ ಇರಬಹುದೇ? ಅದು ನಮ್ಮ ಆತ್ಮಗಳಿಗೆ ಏನನ್ನು ಅನುಗ್ರಹಿಸುತ್ತದೆ? ___

## ವಿಭಾಗ 5

ಅಬ್ದುಲ್ ಬಹಾರವರ ಈ ಕೆಳಗಿನ ನುಡಿಗಳನ್ನು ಓದಿ ಮತ್ತು ಅದರ ಬಗ್ಗೆ ಪ್ರತಿಫಲಿಸಿ:

**"ಅಸ್ತಿತ್ವದ ಪ್ರಪಂಚದಲ್ಲಿ ಪ್ರಾರ್ಥನೆಗಿಂತ ಸಿಹಿಯಾದ ವಸ್ತು ಇನ್ನೊಂದಿಲ್ಲ. ಪ್ರಾರ್ಥನಾ ಸ್ಥಿತಿಯಲ್ಲಿ ಮಾನವ ಜೀವನವನ್ನು ನಡೆಸಬೇಕು. ಪ್ರಾರ್ಥನಾ ಮತ್ತು ಯಾಚನಾ ಸ್ಥಿತಿಯು ಅತಿ ಅನುಗ್ರಹಿತ ಸ್ಥಿತಿಯಾಗಿರುವುದು. ಪ್ರಾರ್ಥನೆಯು ದೇವರ ಜೊತೆ ನಡೆಸುವ ಸಂಭಾಷಣೆಯಾಗಿದೆ. ದೇವರೊಡನೆ ಸಂಭಾಷಣೆಯ ಸ್ಥಿತಿಯು ಮಹತ್ತರವಾದ ಸಾಧನೆ, ಅಥವಾ ಅತಿ ಮಧುರವಾದ ಸ್ಥಿತಿಯಾಗಿರುವುದು. ಅದು ಆಧ್ಯಾತ್ಮಿಕತೆಯನ್ನುಂಟು ಮಾಡುತ್ತದೆ, ಮನೋಜಾಗೃತಿ ಮತ್ತು ಅಲೌಕಿಕ ಭಾವನೆಯನ್ನು ಸೃಷ್ಟಿಸುತ್ತದೆ. ದೈವೀ ಸಾಮ್ರಾಜ್ಯದ ಕಡೆ ಹೊಸ ಆಕರ್ಷಣೆಯನ್ನುಂಟು ಮಾಡುತ್ತದೆ ಮತ್ತು ಉನ್ನತ ಜ್ಞಾನದ ಪ್ರಭಾವಗಳಿಗೆ ಒಳಗಾಗುತ್ತದೆ."[11]**

1. ಅಸ್ಥಿತ್ವದ ಪ್ರಪಂಚದಲ್ಲಿ ಅತೀ ಮಧುರವಾದ ಸ್ಥಿತಿ ಯಾವುದು? ___

2. "ಪ್ರಾರ್ಥನಾ ಸ್ಥಿತಿ" ಎಂಬ ನುಡಿಗಟ್ಟಿನ ಅರ್ಥವೇನು? ___

3. ಪ್ರಾರ್ಥನೆಯು ಸೃಷ್ಟಿಸಿರುವ ಕೆಲವು ಸ್ಥಿತಿಗಳನ್ನು ಹೆಸರಿಸಿ: ___

4. ಈ ಕೆಲವು ವಿಭಾಗಗಳಲ್ಲಿ ನೀವು ಅಧ್ಯಯನ ಮಾಡಿದ ಉದ್ಧರಣಗಳನ್ನು ಪರಿಶೀಲಿಸಿ ಮತ್ತು ಪ್ರಾರ್ಥನೆಯ ಗುಣಲಕ್ಷಣಗಳ ಬಗ್ಗೆ ಐದು ನುಡಿಗಟ್ಟುಗಳನ್ನು ಬರೆಯಿರಿ.

   – ಪ್ರಾರ್ಥನೆಯು ___
   – ಪ್ರಾರ್ಥನೆಯು ___
   – ಪ್ರಾರ್ಥನೆಯು ___

– ಪ್ರಾರ್ಥನೆಯು ______________________________________________

– ಪ್ರಾರ್ಥನೆಯು ______________________________________________

## ವಿಭಾಗ 6

ಬಹಾಉಲ್ಲಾರವರ ಈ ನುಡಿಗಳನ್ನು ಓದಿ ಮತ್ತು ಅವುಗಳ ಮೇಲೆ ಧ್ಯಾನ ಮಾಡಿ:

**"ಓ ನನ್ನ ಕಿಂಕರನೇ, ನಿನ್ನ ಸ್ತುತ್ತಿಯ ಮಾಧುರ್ಯ ನಿನ್ನದೇ ಆತ್ಮದ ಬೆಳಕನ್ನು ಹೊತ್ತಿಸುವಂತೆಯೂ ಎಲ್ಲರ ಹೃದಯಗಳನ್ನು ಸೆಳೆಯುವಂತೆಯೂ ದೇವರತ್ತ ಆಕರ್ಷಿಕತರಾದವರು ಪಠಿಸಿದಂತೆ ನೀನು ಪಡೆದಿರುವ ದೇವರ ಸಂಕೀರ್ತನೆಗಳನ್ನು ಹಾಡು. ತಮ್ಮ ಏಕಾಂತದಲ್ಲಿ ದೇವ ಸ್ಫೂರ್ತಿತ ಕೀರ್ತನೆಗಳನ್ನು, ಯಾರೇ ಹಾಡಲಿ, ಅವರ ಬಾಯಿಂದ ಹೊರಬಿದ್ದ ಪುಣ್ಯ ನುಡಿಗಳ ಪರಿಮಳವನ್ನು ಎಲ್ಲೆಡೆ ಸಂಚರಿಸುವ ದೇವತೆಗಳು ಲೋಕಕ್ಕೆಲ್ಲಾ ಹರಡುವರು ಮತ್ತು ಪ್ರತಿಯೊಬ್ಬ ಧರ್ಮಶೀಲನ ಹೃದಯವನ್ನು ಸ್ಪಂದಿಸುವತೆ ಮಾಡುವರು. ಮೊದಲಿಗೆ, ಆತ ಅದರ ಪರಿಣಾಮವನ್ನು ಅರಿಯದಿದ್ದರೂ, ಆತನಿಗೆ ಅನುಗ್ರಹಿಸಿದ ಕೃಪೆಯ ಮೂಲಕವಾಗಿ ತಕ್ಷಣವೇ ಅಥವಾ ತಡವಾಗಿಯಾದರೂ ಆತನ ಆತ್ಮದ ಮೇಲೆ ಪ್ರಭಾವ ಬೀರುವುದು. ಈ ರೀತಿಯಾಗಿ ಶಕ್ತಿ ಮತ್ತು ವಿವೇಕಗಳ ಮೂಲನಾದ ಆತನ ಇಚ್ಛಾನುಸಾರ ದೈವೀ ದರ್ಶನದ ನಿಗೂಢತೆಯು ವಿಧಿತವಾಗಿದೆ."[12]**

1. "ರಾಗವಾಗಿ ಪಠಿಸು" ಎಂಬ ಪದದ ಅರ್ಥವೇನು? ______________________________

   ______________________________________________

2. ದೇವರ ವಚನಗಳನ್ನು ನಾವು ಯಾವ ರೀತಿ ಮಧುರವಾಗಿ ಪಠಿಸಬೇಕು? ______________

   ______________________________________________

   ______________________________________________

   ______________________________________________

3. "ಪಠಿಸು" ಎಂಬುದರ ಅರ್ಥವೇನು? ______________________________________

   ______________________________________________

4. "ಪಸರಿಸುವುದು" ಎಂಬುದರ ಅರ್ಥವೇನು? ________________________________

   ______________________________________________

5. ನಮ್ಮದೇ ಆತ್ಮಗಳ ಮೇಲೆ ನಮ್ಮ ಸುಮಧುರ ಸ್ವರದ ಪರಿಣಾಮ ಯಾವ ರೀತಿಯಾಗುತ್ತದೆ? _

   ______________________________________________

6. ನಮ್ಮ ಸುಮಧುರ ಸ್ವರದ ಪರಿಣಾಮ ಎಲ್ಲಾ ಮಾನವ ಹೃದಯಗಳ ಮೇಲೆ ಹೇಗೆ ಬೀರುತ್ತದೆ?

   ______________________________________________

   ______________________________________________

## ವಿಭಾಗ 7

ಬಹಾಉಲ್ಲಾರವರಿಂದ ಪ್ರಕಟಿಸಲ್ಪಟ್ಟ ಈ ಎರಡು ಪ್ರಾರ್ಥನೆಗಳನ್ನು ಕಂಠಪಾಠ ಮಾಡಲು ನೀವು ಬಯಸಬಹುದು:

> **"ಓ ದೇವರೇ ನನ್ನ ದೇವರೇ, ನನ್ನ ಬಯಕೆ ಮತ್ತು ನಾನು ಮಾಡುತ್ತಿರುವುದರತ್ತ ನೋಡಬೇಡ. ಅದರ ಬದಲು ಭೂ ಸ್ವರ್ಗಗಳನ್ನಾವರಿಸಿದ ನಿನ್ನ ಇಚ್ಛೆ ಏನಿದೆಯೋ ಅದರತ್ತ ನೋಡು. ನಿನ್ನ ಮಹಾ ನಾಮದ ಹೆಸರಲ್ಲಿ ಎಲ್ಲಾ ದೇಶಗಳ ಓ ಪ್ರಭುವೇ, ನೀನು ಇಚ್ಛಿಸಿದುದನ್ನು ಮಾತ್ರ ನಾನು ಪ್ರೀತಿಸುವೆ."[13]**

> **"ನಿನ್ನ ಸಾಮಿಪ್ಯದ ಸ್ವರ್ಗಕ್ಕೆ ಏರಿ ಬಳಿ ಬಂದವರ ಹೊಗಳಿಕೆಗಳಿಗಿಂತಲೂ ಅಥವಾ ನಿನ್ನ ದ್ವಾರದ ಮುಂಬಾಗಿಲ ಪ್ರವೇಶವನ್ನು ಪಡೆಯಲು ನಿಷ್ಠಾವಂತರಾಗಿರುವ ಹೃದಯ ಪಕ್ಷಿಗಳಿಗಿಂತಲೂ ನೀನು ಉನ್ನತನಾಗಿದ್ದೀಯೇ, ನೀನು ಎಲ್ಲಾ ಗುಣಗಳಿಗಿಂತಲೂ ಮೇಲಾಗಿ ಪೂಜ್ಯನಾಗಿದ್ದೀಯೇ ಮತ್ತು ಎಲ್ಲಾ ನಾಮಗಳಿಗಿಂತಲೂ ಪವಿತ್ರನಾಗಿದ್ದೀಯೇ ಎಂದು ನಾನು ಪ್ರಮಾಣ ಮಾಡುತ್ತೇನೆ. ಮಹೋನ್ನತವಾದ, ಸರ್ವ ವೈಭವನಾದ ನಿನ್ನ ಹೊರತು ಬೇರೆ ದೇವರಿಲ್ಲ."[14]**

## ವಿಭಾಗ 8

ಅಬ್ದುಲ್ ಬಹಾರವರು ಹೇಳುತ್ತಾರೆ:

> **"ದೇವರಲ್ಲಿ ಪ್ರಾರ್ಥಿಸುವುದು ಮತ್ತು ಸಹಾಯವನ್ನು ಪಡೆಯುವುದು, ಮತ್ತು ಬೇಡಿಕೊಳ್ಳುವುದು ಹಾಗು ಆತನ ಸಹಾಯಕ್ಕಾಗಿ ಯಾಚಿಸುವುದು ಆತನಿಗೆ ಯುಕ್ತವಾದುದು. ಸೇವೆಯ ಶ್ರೇಣಿಯು ಯಾವ ಮಟ್ಟದ್ದಾಗುವುದೆಂದರೆ ಒಡೆಯನು ತಾನು ಇಚ್ಛಿಸಿದ್ದನ್ನು ತನ್ನ ಪೂರ್ಣ ವಿವೇಕದನುಸಾರವಾಗಿ ಆಜ್ಞಾಪಿಸುವನು."[15]**

ಮತ್ತು ಅವರು ಹೀಗೆ ವಿವರಿಸಿದ್ದಾರೆ:

> **"ಚೈತನ್ಯಕ್ಕೆ ಪ್ರಭಾವವಿದೆ. ಪ್ರಾರ್ಥನೆಗೆ ಆಧ್ಯಾತ್ಮಿಕ ಪ್ರಭಾವಿದೆ. ಆದುದರಿಂದ, ನಾವು 'ಓ ದೇವರೇ! ಈ ರೋಗಿಯನ್ನು ಗುಣಪಡಿಸು!' ಎಂದು ಪ್ರಾರ್ಥಿಸುತ್ತೇವೆ. ಬಹುಶಃ ದೇವರು ಉತ್ತರಿಸಬಹುದು. ಯಾರು ಪ್ರಾರ್ಥಿಸುತ್ತಾರೆ ಎಂಬುದು ಮುಖ್ಯವೇ? ಪ್ರಾರ್ಥನೆ ಜರೂರಿನದ್ದಾಗಿದ್ದರೆ ದೇವರು ಪ್ರತಿಯೊಬ್ಬ ಸೇವಕನ ಪ್ರಾರ್ಥನೆಯನ್ನೂ ಉತ್ತರಿಸುತ್ತಾನೆ. ಈ ಗಿಡದ ಪ್ರಾರ್ಥನೆಯನ್ನೂ ಆತನು ಉತ್ತರಿಸುತ್ತಾನೆ. ಆ ಗಿಡವು ಸುಪ್ತವಾಗಿ ಪ್ರಾರ್ಥಿಸುತ್ತದೆ. 'ಓ ದೇವರೇ! ನನಗೆ ಮಳೆಯನ್ನು ಕಳುಹಿಸಿಕೊಡು!' ದೇವರು ಪ್ರಾರ್ಥನೆಗೆ ಉತ್ತರಕೊಡುತ್ತಾನೆ ಮತ್ತು ಗಿಡವು ಬೆಳೆಯುತ್ತದೆ. ಯಾವೊಬ್ಬನಿಗಾದರೂ ದೇವರು ಉತ್ತರ ಕೊಡುತ್ತಾನೆ."[16]**

ನಮ್ಮ ಪ್ರಾರ್ಥನೆಯಲ್ಲಿ ನಾವು ನಮ್ಮ ಅಗತ್ಯಗಳನ್ನು ಪೂರೈಸಲು ದೇವರನ್ನು ಕೇಳಿಕೊಳ್ಳುವುದು ಸಹಜ. ಹೀಗೆ ನಾವು ನಮ್ಮ ಆರೋಗ್ಯ ಮತ್ತು ನಮ್ಮ ಪ್ರೀತಿಪಾತ್ರರ ಆರೋಗ್ಯಕ್ಕಾಗಿ ಪ್ರಾರ್ಥಿಸುತ್ತೇವೆ, ನಮ್ಮ ಕುಟುಂಬಗಳ ಆಧ್ಯಾತ್ಮಿಕ ಮತ್ತು ಭೌತಿಕ ಪ್ರಗತಿಗಾಗಿ ನಾವು ಪ್ರಾರ್ಥಿಸುತ್ತೇವೆ ಮತ್ತು ನಾವು ಮಾರ್ಗದರ್ಶನಕ್ಕಾಗಿ ಪ್ರಾರ್ಥಿಸುತ್ತೇವೆ. ನಾವು ಶಕ್ತಿಗಾಗಿ, ನಂಬಿಕೆಗಾಗಿ ಮತ್ತು ಸೇವೆಯ ಪಥದಲ್ಲಿ ಧೃಢೀಕರಣಕ್ಕಾಗಿ ಕೇಳಿಕೊಳ್ಳುತ್ತೇವೆ. ದೇವರಲ್ಲಿ ಪ್ರಾರ್ಥಿಸುವಾಗ, ನಾವು ನಮ್ಮ ಇಚ್ಛೆಯನ್ನು ಆತನ ಇಚ್ಛೆಯೊಂದಿಗೆ ಜೋಡಿಸುವುದು ನಮ್ಮ ಜೀವನದ ಗುರಿಯೆಂಬುದನ್ನು ಖಂಡಿತವಾಗಿ ಜ್ಞಾಪಿಸಿಕೊಳ್ಳಬೇಕು. ಆದುದರಿಂದ ನಾವು ಆತನ ಇಚ್ಛೆಯು ನೆರವೇರಬೇಕೆಂದು ಪ್ರಾರ್ಥಿಸಬೇಕು ಮತ್ತು ಅದಕ್ಕೆ ಸಮರ್ಪಿಸಿಕೊಳ್ಳಲು ಸಿದ್ದರಾಗಿರಬೇಕು. ನೀವು ಅಬ್ದುಲ್ ಬಹಾರವರ ಈ ಕೆಳಗಿನ ನುಡಿಗಳನ್ನು

ಜ್ಞಾಪಿಸಿಕೊಳ್ಳುತ್ತಿದ್ದರೆ, ಅವು ನಿಮಗೆ ಅನುಗಾಲವು ಆನಂದ ಮತ್ತು ಭರವಸೆಯ ಮೂಲವಾಗಿ ಕಾರ್ಯನಿರ್ವಹಿಸುತ್ತವೆ:

> **"ದೇವರತ್ತ ಮುಖವನ್ನು ತಿರುಗಿಸಿರುವವನೇ! ನಿನ್ನ ಕಣ್ಣುಗಳನ್ನು ಎಲ್ಲದಕ್ಕೂ ಮುಚ್ಚು ಮತ್ತು ಸರ್ವೋತ್ತಮನ ಕ್ಷೇತ್ರಕ್ಕೆ ಮಾತ್ರ ಅವುಗಳನ್ನು ತೆರೆ. ನಿನ್ನ ಎಲ್ಲಾ ಬಯಕೆಗಳನ್ನು ಅವನಲ್ಲಿ ಮಾತ್ರ ಕೇಳು; ನೀನು ಏನನ್ನು ಹುಡುಕುವೆಯೋ ಅದನ್ನು ಅವನ ದೆಸೆಯಿಂದ ಮಾತ್ರ ಹುಡುಕು. ಒಂದು ನೋಟದಿಂದ ನೂರು ಸಾವಿರ ಆಶಯಗಳನ್ನು ಈಡೇರಿಸುವನು, ಒಂದು ನೋಟದಿಂದ ಅವನು ಗುಣವಾಗಲಾರದ ನೂರು ಸಾವಿರ ಖಾಯಿಲೆಗಳನ್ನು ಗುಣಪಡಿಸುವನು, ಶಿರವನ್ನೊಮ್ಮೆ ಆಡಿಸುವುದರಿಂದಲೇ ಪ್ರತಿಯೊಂದು ಗಾಯದ ಮೇಲೂ ಮುಲಾಮು ಹಚ್ಚುವನು, ಒಂದು ನೋಟದಿಂದಲೇ ಅವನು ಹೃದಯಗಳನ್ನು ದುಃಖದ ಸಂಕೋಲೆಗಳಿಂದ ಮುಕ್ತಗೊಳಿಸುವನು, ಅವನಿಗೇನು ಬೇಕೋ ಅದನ್ನು ಮಾಡುವನು, ನಮಗ್ಯಾವ ದಾರಿ ಇದೆ? ಅವನು ತನ್ನ ಚಿತ್ತ ಬಯಸಿದ್ದನ್ನು ನಿರ್ವಹಿಸುವನು. ತನ್ನ ಸಂತೋಷವಿದ್ದಂತೆ ಅವನು ಆಜ್ಞಾಪಿಸುವನು. ಅದಕ್ಕೋಸ್ಕರ ನಿನ್ನ ತಲೆಯನ್ನು ಶರಣಾರ್ಥಿಯಾಗಿ ಬಾಗಿಸುವುದು ಮತ್ತು ನಿನ್ನ ನಂಬಿಕೆಯನ್ನು ಕರುಣಾಮಯಿ ಕರ್ತನ ಮೇಲೆ ಇಡುವುದು ಉತ್ತಮ."[17]**

## ವಿಭಾಗ 9

ನಾವು ಇಲ್ಲಿಯವರೆಗೆ ಕಲಿತಿರುವುದರಿಂದ , ದೇವರ ಕಡೆ ಪ್ರಾರ್ಥನೆಗೆ ತಿರುಗುವುದು ಆಧ್ಯಾತ್ಮಿಕ ಜೀವನದ ಪ್ರಮುಖ ಅವಶ್ಯಕತೆ ಎಂಬುದು ಸ್ಪಷ್ಟವಾಗಿದೆ. ವಿಶೇಷವಾಗಿ, ಬೆಳಗ್ಗೆ ಎದ್ದ ತಕ್ಷಣ ಮತ್ತು ರಾತ್ರಿ ಮಲಗುವ ಮುನ್ನ ದೇವರಿಗೆ ಪ್ರಾರ್ಥನೆ ಮಾಡುವುದು ಬಹಳ ಮಧುರವಾಗಿರುವುದು. ಪ್ರಾರ್ಥನೆಯಲ್ಲಿ ನಾವು ಕಳೆಯುವ ಸಮಯ, ಮತ್ತು ನಾವು ಹೇಳಬಹುದಾದ ಪ್ರಾರ್ಥನೆಗಳ ಸಂಖ್ಯೆ ನಮ್ಮ ಅಗತ್ಯ ಮತ್ತು ಆಧ್ಯಾತ್ಮಿಕ ದಾಹವನ್ನು ಹೊಂದಿಕೊಂಡಿದೆ. ಪ್ರತಿಯೊಂದು ಸಂದರ್ಭದಲ್ಲೂ ನಾವು ಪ್ರಾರ್ಥನೆಗಳನ್ನು ಬಾಬ್, ಬಹಾಉಲ್ಲಾ ಮತ್ತು ಅಬ್ದುಲ್ ಬಹಾರವರು ಪ್ರಕಟಿಸಿದವುಗಳಿಂದ ಆಯ್ದುಕೊಳ್ಳಬಹುದು. ಆದಾಗ್ಯೂ ಬಹಾಉಲ್ಲಾರವರು ಮೂರು ಅನಿವಾರ್ಯ ಪ್ರಾರ್ಥನೆಗಳನ್ನು ಪ್ರಕಟಿಸಿದ್ದಾರೆ. ಶೋಘಿ ಎಫೆಂಡಿಯವರು ಹೇಳುತ್ತಾರೆ:

> **"ದಿನ ನಿತ್ಯದ ಅನಿವಾರ್ಯ ಪ್ರಾರ್ಥನೆಗಳು ಮೂರು ಇವೆ. ಇದರಲ್ಲಿ ಅತಿ ಚಿಕ್ಕ ಪ್ರಾರ್ಥನೆಯು ಒಂದೇ ಒಂದು ಚರಣವನ್ನು ಹೊಂದಿದ್ದು, ಇದನ್ನು ಇಪತ್ತನಾಲ್ಕು ಗಂಟೆಯಲ್ಲಿ ಮಧ್ಯಾಹ್ನ ಒಂದು ಬಾರಿ ಪಠಿಸತಕ್ಕ ಅನಿವಾರ್ಯ ಪ್ರಾರ್ಥನೆ. ಮಧ್ಯಮದ್ದು ಈ ನುಡಿಗಳಿಂದ ಪ್ರಾರಂಭವಾಗುತ್ತದೆ, 'ಒಡೆಯನೇ ಸಾಕ್ಷಿ, ಅವನಲ್ಲದೆ ಬೇರೆ ದೇವರಿಲ್ಲ ಎಂಬುದಕ್ಕೆ', ಮಧ್ಯಮದನ್ನು (ಪ್ರಾರ್ಥನೆಯನ್ನು) ದಿನಕ್ಕೆ ಮೂರು ಬಾರಿ, ಬೆಳಿಗ್ಗೆ, ಮಧ್ಯಾಹ್ನ ಮತ್ತು ಸಂಜೆ ಪಠಿಸತಕ್ಕದ್ದು. ಈ ಪ್ರಾರ್ಥನೆಯು ಕೆಲವು ಶಾರೀರಿಕ ಚಟುವಟಿಕೆ ಮತ್ತು ಸಂಜ್ಞೆಗಳೊಂದಿಗೆ ಇರುತ್ತದೆ. ಈ ದೀರ್ಘ ಪ್ರಾರ್ಥನೆ, ಮೂರರಲ್ಲಿ ಅದೇ ದೀರ್ಘವಾಗಿದ್ದು, ಇಪ್ಪತ್ತನಾಲ್ಕು ಗಂಟೆಯಲ್ಲೊಂದು ಬಾರಿ ಒಬ್ಬ ವ್ಯಕ್ತಿಗೆ ಯಾವಾಗ ಹೇಳಬೇಕೆನ್ನಿಸುತ್ತದೊ ಆಗ ಪಠಿಸತಕ್ಕದ್ದು.**
>
> **"ಈ ಮೂರು ಪ್ರಾರ್ಥನೆಗಳಲ್ಲಿ ಯಾವುದನ್ನಾದರೂ ಆಯ್ದುಕೊಳ್ಳುವ ಸ್ವಾತಂತ್ರ ನಂಬಿಕಸ್ಥನಿಗೆ ಇರುವುದು. ಆದರೆ ಅವುಗಳಲ್ಲಿ ಯಾವುದಾದರೊಂದನ್ನು ಪಠಿಸುವ ನಿಬಂಧನೆಗೆ ಒಳ ಪಡುತ್ತಾನೆ ಮತ್ತು ಅವುಗಳನ್ನು ಪಠಿಸುವಲ್ಲಿ ಅನುಸರಿಬೇಕಾದ ಸೂಚನೆಗಳಿಗೆ ಬದ್ಧನಾಗಿರುತ್ತಾನೆ."[18]**

ಮತ್ತು ಅವರು ಮುಂದುವರೆದು ಹೇಳಿದ್ದಾರೆ:

**“ದೈನಿಕ ಅನಿವಾರ್ಯ ಪ್ರಾರ್ಥನೆಗಳು, ಮುಂತಾದ ಕೆಲವು ನಿರ್ದಿಷ್ಟ ಪ್ರಾರ್ಥನೆಗಳ ಜೊತೆಗೆ, ಗುಣಕಾರಿ ಪ್ರಾರ್ಥನೆ ಮತ್ತು ಅಹಮ್ಮದರ ಶಾಸನಗಳನ್ನು, ವಿಶೇಷ ಸಾಮರ್ಥ್ಯ ಮತ್ತು ಮಹತ್ವದೊಂದಿಗೆ ಬಹಾಉಲ್ಲಾರವರು ನೀಡಿದ್ದಾರೆ. ಆದ್ದರಿಂದ ಅವುಗಳನ್ನು ಹಾಗೆಯೇ, ಸ್ವೀಕರಿಸಿ, ಅವುಗಳ ಮೂಲಕ ದೇವರಿಗೆ ಸಮೀಪವಾಗಿ ಭಾವೈಕ್ಯ ಹೊಂದುವಂತೆಯೂ, ಆತನ ನಿಯಮ ಮತ್ತು ಉಪದೇಶಗಳನ್ನು ಹೆಚ್ಚಿನ ರೀತಿಯಲ್ಲಿ ಗುರುತಿಸುವಂತೆಯೂ ನಂಬಿಕಸ್ಥರು ಪ್ರಶ್ನಾತೀತ ನಂಬಿಕೆ ಮತ್ತು ಆತ್ಮವಿಶ್ವಾಸದೊಂದಿಗೆ ಪಠಿಸತಕ್ಕದ್ದು.”[19]**

ಬಹಾಉಲ್ಲಾರವರು ಪ್ರಕಟಿಸಿರುವ ಮೂರು ಅನಿವಾರ್ಯ ಪ್ರಾರ್ಥನೆಗಳನ್ನು ನಾವು ಒಬ್ಬಂಟಿಗರಾಗಿ ದೇವರ ಜೊತೆ ಸಂವಹನ ಮಾಡುವಾಗ ಹೇಳಬೇಕು. ಒಬ್ಬನು ಅನಿವಾರ್ಯ ಪ್ರಾರ್ಥನೆಯನ್ನು ಕೆಲವು ಆಚರಣೆಯಂತೆ ಪಠಿಸುತ್ತಿದ್ದು, ಉಳಿದವರು ಸಾಮೂಹಿಕವಾಗಿ ಅದನ್ನು ಉಚ್ಚರಿಸುವಂತಹ ಕ್ರಮ ಬಹಾಯಿ ಧರ್ಮದಲ್ಲಿ ಇಲ್ಲ. ಸತ್ತವರಿಗಾಗಿರುವ ಪ್ರಾರ್ಥನೆ ಮಾತ್ರ ಬಹಾಯಿ ನಿಯಮದಲ್ಲಿರುವ ಸಾಮೂಹಿಕ ಪ್ರಾರ್ಥನೆ. ಅದನ್ನು ಅಲ್ಲಿ ಹಾಜರಿರುವ ಒಬ್ಬನು ಪಠಿಸುವನು, ಅದೇ ಸಮಯದಲ್ಲಿ ಉಳಿದವರು ನಿಶ್ಶಬ್ದವಾಗಿ ನಿಲ್ಲುವರು.

1. “ಅನಿವಾರ್ಯ” ಎಂಬ ಪದದ ಅರ್ಥವೇನು? ____________________

   ____________________

2. ಬಹಾಉಲ್ಲಾರವರು ಎಷ್ಟು ಅನಿವಾರ್ಯ ಪ್ರಾರ್ಥನೆಗಳನ್ನು ಪ್ರಕಟಿಸಿದ್ದಾರೆ? ____________________

   ____________________

3. ಪ್ರತಿದಿನ ಎಲ್ಲಾ ಮೂರು ಪ್ರಾರ್ಥನೆಗಳನ್ನು ನಾವು ಪಠಿಸಬೇಕೇ? ____________________

4. ದೊಡ್ಡ ಅನಿವಾರ್ಯ ಪ್ರಾರ್ಥನೆಯನ್ನು ನಾವು ಆಯ್ದುಕೊಂಡಲ್ಲಿ ಪ್ರತಿದಿನ ಅದನ್ನು ಎಷ್ಟು ಬಾರಿ ಹೇಳಬೇಕಾಗುವುದು? ____________________

5. ಮಧ್ಯಮ ಅನಿವಾರ್ಯ ಪ್ರಾರ್ಥನೆಯನ್ನು ಆಯ್ದುಕೊಂಡಲ್ಲಿ ಎಷ್ಟು ಬಾರಿ ಪಠಿಸಬೇಕು? ___

   ____________________

6. ಚಿಕ್ಕ ಅನಿವಾರ್ಯ ಪ್ರಾರ್ಥನೆಯನ್ನು ಆಯ್ದುಕೊಂಡಲ್ಲಿ ಎಷ್ಟು ಬಾರಿ ಪಠಿಸಬೇಕು? ______

   ____________________

7. ವಿಶೇಷ ಶಕ್ತಿ ಇರುವ ಕೆಲವು ಪ್ರಾರ್ಥನೆಗಳನ್ನು ಹೆಸರಿಸಿರಿ: ____________________

   ____________________

   ____________________

8. ಚಿಕ್ಕ ಅನಿವಾರ್ಯ ಪ್ರಾರ್ಥನೆಯನ್ನು ನೀವು ಇನ್ನೂ ಕಂಠಪಾಠ ಮಾಡಿಲ್ಲದಿದ್ದರೆ ಈಗ ಮಾಡಿ:

**“ಓ ಭಗವಂತ, ನಿನ್ನನ್ನು ಅರಿಯಲು ಹಾಗೂ ಆರಾಧಿಸಲು ನನ್ನನ್ನು ನೀನು ಸೃಷ್ಟಿಸಿದೆ, ಅದಕ್ಕೆ ನಾನೇ ಸಾಕ್ಷಿ. ನಾನು ಬಲಹೀನ, ನೀನು ಬಲಶಾಲಿ, ನಾನು ಬಡವ, ನೀನು ಸಿರಿವಂತ, ಇದನ್ನು ನಾನು ಸಾರಿ ಹೇಳುತ್ತೇನೆ.**

**“ನೀನಲ್ಲದೆ ಬೇರೆ ದೇವರಿಲ್ಲ, ಆಪತ್ತಿನಲ್ಲಿ ನೀನೇ ರಕ್ಷಕ, ಸ್ವಯಂ ಪರಿಪೂರ್ಣ.”[20]**

9. ಈ ಪ್ರಾರ್ಥನೆಯಲ್ಲಿ ನೀನು ಏನನ್ನು ಸಾಕ್ಷಿ ಹೇಳುತ್ತೀಯೇ? ____________________

____________________________________________

____________________________________________

____________________________________________

## ವಿಭಾಗ 10

ಕಡ್ಡಾಯ ಪ್ರಾರ್ಥನೆಯ ನಿಯಮವನ್ನು ಪಾಲಿಸುವುದರಿಂದ ನಾವು ಪಡೆಯುವ ಆಶೀರ್ವಾದ ಮತ್ತು ಇತರ ಪ್ರಾರ್ಥನೆಗಳನ್ನು ಪ್ರತ್ಯೇಕವಾಗಿ ಹೇಳುವುದರಿಂದ ನಾವು ಪಡೆಯುವ ಪೋಷಣೆಯ ಜೊತೆಗೆ, ದೊಡ್ಡ ಅಥವ ಸಣ್ಣ ಕೂಟಗಳಲ್ಲಿ ಪ್ರಾರ್ಥನೆಗಳನ್ನು ಪಠಿಸುವುದನ್ನು ಕೇಳಿದಾಗ ನಮ್ಮ ಆತ್ಮಗಳು ಉನ್ನತಿಹೊಂದುತ್ತವೆ ಎಂಬುದನ್ನು ನಾವು ನೆನಪಿನಲ್ಲಿಡಬೇಕು. ಬಹಾಉಲ್ಲಾರವರು ಹೇಳುತ್ತಾರೆ.

> **"ನೀವು ಅತ್ಯಂತ ಸಂತೋಷ ಮತ್ತು ಸಹಭಾಗಿತ್ವದೊಂದಿಗೆ ಒಟ್ಟು ಗೂಡಿ ಮತ್ತು ಕರುಣಾಮಯ ಒಡೆಯನು ಪ್ರಕಟಿಸಿದ ವಚನಗಳನ್ನು ಪಠಿಸಿ. ಹಾಗೆ ಮಾಡುವುದರಿಂದ ನಿಮ್ಮ ಆಂತರಿಕ ಅಸ್ತಿತ್ವದ ನಿಜವಾದ ಜ್ಞಾನದ ಬಾಗಿಲುಗಳು ತೆರೆದುಕೊಳ್ಳುತ್ತವೆ, ಮತ್ತು ಆಗ ನಿಮ್ಮ ಆತ್ಮಗಳು ಧೃಢತೆಯಿಂದ ಕೂಡಿರುವದನ್ನು ಮತ್ತು ಹೃದಯಗಳು ಕಾಂತಿಯುಕ್ತ ಸಂತೋಷದಿ ದ ತುಂಬಿರುವುದನ್ನು ನೀವು ಅನುಭವಿಸುತ್ತೀರಿ."[21]**

ಪ್ರಪಂಚದಾದ್ಯತ ಸ್ನೇಹಿತರು ಮತ್ತು ನೆರೆಹೊರೆಯವರು ದೇವರೊಂದಿಗೆ ಸಂವಹನ ನಡೆಸಲು ಒಗ್ಗೂಡಿಸುವ ಭಕ್ತ್ಯಾತ್ಮಕ ಕೂಟಗಳು ಸಾವಿರಾರು ಸಂಖ್ಯೆಯಲ್ಲಿ ಗುಣಿಸುತ್ತಿವೆ ಎಂಬ ಜ್ಞಾನದಿಂದ ನಾವೆಲ್ಲರೂ ಬಹಳ ಸಂತೋಷಪಟ್ಟಿದ್ದೇವೆ. ವಿಶ್ವ ನ್ಯಾಯ ಮಂದಿರವು ಹೀಗೆ ಬರೆಯುತ್ತಿದೆ:

> **"ಭಕ್ತ್ಯಾತ್ಮಕ ಕೂಟಗಳು ಯಾವುದೇ ಆತ್ಮವು ಪ್ರವೇಶಿಸಬಹುದಾದ, ಸ್ವರ್ಗೀಯ ಸುಗಂಧವನ್ನು ಅಘ್ರಾಣಿಸುವ, ಪ್ರಾರ್ಥನೆಯ ಮಾಧುರ್ಯವನ್ನು ಅನುಭವಿಸುವ, ಸೃಜನಾತ್ಮಕ ನುಡಿಯನ್ನು ಧ್ಯಾನಿಸುವ, ಚೇತನದ ರೆಕ್ಕೆಗಳ ಮೇಲೆ ಕರೆದೊಯ್ಯಲ್ಪಡುವ, ಮತ್ತು ಪ್ರೀತಿ ಪಾತ್ರನೊಬ್ಬನೊಡನೆ ಸಂವಹನ ಮಾಡುವ ಸಂದರ್ಭಗಳಾಗಿವೆ. ಸಹಭಾಗಿತ್ವ ಮತ್ತು ಸಾಮಾನ್ಯ ಧ್ಯೇಯದ ಭಾವನೆಗಳು ಉತ್ಪತ್ತಿಯಾಗುತ್ತವೆ, ವಿಶೇಷವಾಗಿ ಆಧ್ಯಾತ್ಮಿಕವಾಗಿ ಉತ್ತುಂಗಕ್ಕೇರಿರುವ ಸಂಭಾಷಣೆಗಳು, ಅವು ಅಂತಹ ಸಂದರ್ಭಗಳಲ್ಲಿ ಸಹಜವಾಗಿ ಸಂಭವಿಸುತ್ತವೆ ಮತ್ತು ಅದರಿಂದ 'ಮಾನವನ ಹೃದಯದ ನಗರ' ವು ತೆರೆಯಬಹುದಾಗಿರುತ್ತದೆ."[22]**

ನಮಗೆ ಪ್ರಾರ್ಥನೆ ಮಾಡಬೇಕೆಂದು ಮನಸ್ಸಿಗೆ ಬಂದಾಗ, ಈ ಪ್ರಪಂಚದ ವಿಷಯಗಳಿಂದ ನಮ್ಮ ಮನಸ್ಸನ್ನು ಶುದ್ಧೀಕರಿಸುವ ಸಲುವಾಗಿ ನಾವು ಒಂದು ಕ್ಷಣ ಮೌನವಾಗಿ ಕಾಯುತ್ತೇವೆ. ಪ್ರಾರ್ಥಿಸುವಾಗ, ನಮ್ಮ ಆಲೋಚನೆಗಳನ್ನು ದೇವರ ಮೇಲೆ ಕೇಂದ್ರೀಕರಿಸುತ್ತೇವೆ. ನಾವು ಪ್ರಾರ್ಥನೆಗಳನ್ನು ಪಠಿಸಿದ ನಂತರ, ನಾವು ಸ್ವಲ್ಪ ಹೊತ್ತು ಮೌನವಾಗಿರುತ್ತೇವೆ ಮತ್ತು ಥಟ್ಟನೆ ಮತ್ತೊಂದು ಚಟುವಟಿಕೆಯತ್ತ ಸಾಗುವುದಿಲ್ಲ. ಒಂದು ಕೂಟದಲ್ಲಿ ಇತರರು ಮಾಡುವ ಪ್ರಾರ್ಥನೆಗಳನ್ನು ನಾವು ಕೇಳುವಾಗಲೂ ಇದು ನಿಜ. ಅಂತಹ ಸಂದರ್ಭದಲ್ಲಿ ಪ್ರಾರ್ಥನಾ ಮನೋಭಾವವನ್ನು ಕಾಪಾಡಿಕೊಳ್ಳುತ್ತೇವೆ ಮತ್ತು ನಾವೇ ಪಠಿಸುತ್ತಿದೆವೆಯೋ ಎನ್ನುವ ಹಾಗೆ ಪದಗಳನ್ನು ನಿಕಟವಾಗಿ ಅನುಸರಿಸುತ್ತೇವೆ.

1. ದೇವರ ವಚನಗಳನ್ನು ಪಠಿಸುವಾಗ ನಾವು ಯಾವ ಮನೋಭಾವದಿಂದ ಒಟ್ಟುಗೂಡಬೇಕು?

____________________________________________

2. ದೇವರ ವಚನಗಳನ್ನು ಪಠಿಸಲು ನಾವು ಒಟ್ಟಾಗಿ ಸೇರುವುದರ ಪರಿಣಾಮ ಏನು? __________

______________________________________________________________

______________________________________________________________

______________________________________________________________

3. ಭಕ್ತ್ಯಾತ್ಮಕ ಕೂಟಗಳು ಯಾವುದೇ ಆತ್ಮಕ್ಕೆ ಇವೆಲ್ಲವೂ ಸಾಧ್ಯವಾಗುವ ಸಂದರ್ಭಗಳು.

- ______________________ ,
- __________________________________________ ,
- __________________________________________ ,
- __________________________________________ ,
- ________________________________________________________ ,
- ________________________________________________________ .

4. ಭಕ್ತ್ಯಾತ್ಮಕ ಕೂಟಗಳಲ್ಲಿ ಯಾವ ಭಾವನೆಗಳು ಉತ್ಪತ್ತಿಯಾಗುತ್ತವೆ? ____________________

______________________________________________________________

5. ಭಕ್ತ್ಯಾತ್ಮಕ ಕೂಟಗಳಲ್ಲಿ ಸ್ವಾಭಾವಿಕವಾಗಿ ಉತ್ತುಂಗಕ್ಕೇರುವ ಆಧ್ಯಾತ್ಮಿಕ ಸಂಭಾಷಣೆಗಳ ಪರಿಣಾಮ ಏನು? ______________________________________________

______________________________________________________________

6. ಏಕಾಂಗಿಯಾಗಿ ಅಥವಾ ಕೂಟದಲ್ಲಿ ಪ್ರಾರ್ಥನೆ ಮಾಡುವಾಗ ನಾವು ತೋರಿಸಬೇಕಾದ ಗೌರವಯುತ ಮನೋಭಾವದ ಬಗ್ಗೆ ಕೆಲವು ಮಾತುಗಳನ್ನು ಬರೆಯಿರಿ.

______________________________________________________________

______________________________________________________________

______________________________________________________________

______________________________________________________________

______________________________________________________________

______________________________________________________________

# ವಿಭಾಗ 11

ಈ ಪುಸ್ತಕದ ಮೊದಲ ಘಟಕವು ಪ್ರತಿದಿನ ಬರಹಗಳಿಂದ ವಾಕ್ಯ ವೃಂದಗಳನ್ನು ಓದುವ ಮತ್ತು ಅವುಗಳ ಅರ್ಥವನ್ನು ಆಲೋಚಿಸುವ ಅಭ್ಯಾಸದ ಮೇಲೆ ಕೇಂದ್ರೀಕರಿಸಿದೆ. ಪ್ರಾರ್ಥನೆಯ ಮಹತ್ವದ

ಬಗ್ಗೆ ನೀವು ಇಲ್ಲಿ ಪ್ರತಿಫಲನೆ ಮಾಡಿರುವಿರಿ ಮತ್ತು ಇದರ ಪರಿಣಾಮವಾಗಿ ಪ್ರತಿದಿನ ಪ್ರಾರ್ಥನೆ ಮಾಡುವ ಅಭ್ಯಾಸವನ್ನು ಬಲಪಡಿಸಿದ್ದೀರಿ. ಹಿಂದಿನ ವಿಭಾಗವು ಸಮುದಾಯದ ಆರಾಧನೆಯ ಪ್ರಾಮುಖ್ಯತೆಯನ್ನು ನಿಮ್ಮ ಗಮನಕ್ಕೆ ತಂದಿದೆ. ನೀವು ಇಲ್ಲಿಯವರೆಗೆ ಅಧ್ಯಯನ ಮಾಡಿದ ಎಲ್ಲವೂ ಸೇವೆಯ ಹಾದಿಯ ಮೊದಲ ಕಾರ್ಯವನ್ನು ಕೈಗೊಳ್ಳಲು ನಿಮ್ಮನ್ನು ಸಿದ್ಧಪಡಿಸಿದೆ: ಅದು ಭಕ್ತ್ಯಾತ್ಮಕ ಕೂಟವನ್ನು ಆಯೋಜಿಸುವುದು.

ಒಂದು ಆರಂಭಿಕ ಹಂತವಾಗಿ, ನೀವು ಹಲವಾರು ಪ್ರಾರ್ಥನೆಗಳನ್ನು ಕಂಠಪಾಠಮಾಡ ಬಯಸಬಹುದು ಮತ್ತು ಅವುಗಳನ್ನು ಕೆಲವು ಸ್ನೇಹಿತರೊಂದಿಗೆ ಹಂಚಿಕೊಳ್ಳಲು ಅವಕಾಶವನ್ನು ಕಂಡುಕೊಳ್ಳಬಹುದು. ಅದೇ ಸಮಯದಲ್ಲಿ ನೀವು ನಿಮ್ಮ ಸಮುದಾಯದಲ್ಲಿ ಕನಿಷ್ಟ ಒಂದು ಭಕ್ತ್ಯಾತ್ಮಕ ಕೂಟಕ್ಕೆ ಹಾಜರಾಗುವುದನ್ನು ಮತ್ತು ಅದರ ಹುರುಪಿನ ಬೆಂಬಲಿಗರು ಎಂದು ಎಣಿಕೆಯಾಗಿರುವುದನ್ನು ಖಚಿತಪಡಿಸಿಕೊಳ್ಳಿ. ಅಂತಿಮವಾಗಿ, ಪ್ರಾರ್ಥನೆ ಮತ್ತು ಸ್ನೇಹಕ್ಕಾಗಿ ನಿಯಮಿತವಾಗಿ ನಿಮ್ಮ ಸ್ನೇಹಿತರು, ಕುಟುಂಬದ ಸದಸ್ಯರು ಮತ್ತು ನೆರೆಹೊರೆಯವರನ್ನು ಆಹ್ವಾನಿಸಿ, ಭಕ್ತ್ಯಾತ್ಮಕ ಕೂಟವನ್ನು ನೀವೇ ಆಯೋಜಿಸಲು ನಿರ್ಧರಿಸಬಹುದು. ಈ ಶಿಕ್ಷಣದ ಇಬ್ಬರು ಅಥವಾ ಮೂವರು ಭಾಗವಹಿಸುವವರು ಒಟ್ಟಾಗಿ ಇಂತಹ ಭಕ್ತ್ಯಾತ್ಮಕ ಕೂಟವನ್ನು ಪ್ರಾರಂಭಿಸುವುದು ಅಸಾಮಾನ್ಯ ಸಂಗತಿಯೇನಲ್ಲ.

ನೀವು ಕಲ್ಪಿಸಿಕೊಂಡಂತೆ, ಭಕ್ತ್ಯಾತ್ಮಕ ಕೂಟವನ್ನು ಆಯೋಜಿಸುವುದಕ್ಕೆ ಯಾವುದೇ ಸೂತ್ರಗಳಿಲ್ಲ. ಆದರೆ ಇದು ಸ್ಪಷ್ಟವಾಗಿ ಸ್ನೇಹಿತರ ಒಕ್ಕೂಟವಾಗಿದ್ದು, ಇದರಲ್ಲಿ ಪ್ರಾರ್ಥನೆಗಳನ್ನು ಸಲ್ಲಿಸಲಾಗುತ್ತದೆ, ಪವಿತ್ರ ಬರಹಗಳಿಂದ ವಾಕ್ಯವೃಂದಗಳನ್ನು ಓದಲಾಗುತ್ತದೆ ಮತ್ತು ಉನ್ನತಿಗೇರಿಸುವ ಸಂಭಾಷಣೆಗಳು ನಡೆಯುತ್ತವೆ — ಎಲ್ಲವೂ ಗಮನಾರ್ಹವಾದ ಆಧ್ಯಾತ್ಮಿಕ ವಾತಾವರಣದಲ್ಲಿರುತ್ತವೆ. ಭಕ್ತ್ಯಾತ್ಮಕ ಕೂಟವನ್ನು ಆಯೋಜಿಸುವ ಸಂದರ್ಭದಲ್ಲಿ ಈ ಕೆಳಗಿನ ಪ್ರತಿಯೊಂದು ವಿಚಾರಗಳ ಬಗ್ಗೆ ನೀವು ಕೆಲವು ಮಾತುಗಳನ್ನು ಹೇಳಬಹುದೇ?

ಆದರದ ಮತ್ತು ಪ್ರೀತಿಯ ಆಮಂತ್ರಣವನ್ನು ನೀಡುವುದು: ____________________________

______________________________________________________________

______________________________________________________________

______________________________________________________________

ಸ್ವಾಗತಾರ್ಹ ವಾತಾವರಣವನ್ನು ಸೃಷ್ಟಿಸುವುದು: ______________________________

______________________________________________________________

______________________________________________________________

______________________________________________________________

ಪೂಜ್ಯ ವಾತಾವರಣವನ್ನು ಕಾಪಾಡಿಕೊಂಡು ಬರುವುದು: ___________________________

______________________________________________________________

______________________________________________________________

______________________________________________________________

ಸಂತೋಷದಾಯಕ ಸಹಭಾಗಿತ್ವವನ್ನು ಉತ್ತೇಜಿಸುವುದು: ___________________________

______________________________________________________________

______________________________________________________________

ಆಧ್ಯಾತ್ಮಿಕವಾಗಿ ಉನ್ನತಿಗೇರಿಸುವ ಸಂಭಾಷಣೆಯನ್ನು ಉತ್ತೇಜಿಸುವುದು: ______________

______________________________________________________________

______________________________________________________________

# REFERENCES


1 *Gleanings from the Writings of Bahá'u'lláh* (Wilmette: Bahá'í Publishing Trust, 1983, 2017 printing), XLIII, par. 4, p. 105.

2. Bahá'u'lláh, in *Trustworthiness: A Compilation of Extracts from the Bahá'í Writings*, compiled by the Research Department of the Universal House of Justice (London: Bahá'í Publishing Trust, 1987), no. 21, p. 5.

3. *The Call of the Divine Beloved: Selected Mystical Works of Bahá'u'lláh* (Haifa: Bahá'í World Centre, 2018), no. 2.43, p. 31.

4. From a talk given on 5 May 1912, published in *The Promulgation of Universal Peace: Talks Delivered by 'Abdu'l-Bahá during His Visit to the United States and Canada in 1912* (Wilmette: Bahá'í Publishing, 2012), p. 127.

5. Bahá'u'lláh, *The Hidden Words* (Wilmette: Bahá'í Publishing Trust, 2003, 2012 printing), Arabic no. 13, pp. 6–7.

6. From a letter dated 8 December 1935 written on behalf of Shoghi Effendi, published in *Prayer and Devotional Life: A Compilation of Extracts from the Writings of Bahá'u'lláh, the Báb, and 'Abdu'l-Bahá and the Letters of Shoghi Effendi and the Universal House of Justice*, compiled by the Research Department of the Universal House of Justice (Wilmette: Bahá'í Publishing, 2019), no. 71, p. 31.

7. Words of 'Abdu'l-Bahá, cited by J. E. Esslemont, *Bahá'u'lláh and the New Era: An Introduction to the Bahá'í Faith* (Wilmette: Bahá'í Publishing, 2006, 2017 printing), p. 106.

8. Ibid.

9. Bahá'u'lláh, in *Bahá'í Prayers: A Selection of Prayers Revealed by Bahá'u'lláh, the Báb, and 'Abdu'l-Bahá* (Wilmette: Bahá'í Publishing Trust, 2002, 2017 printing), pp. 7–8.

10. Ibid., p. 9.

11. Words of 'Abdu'l-Bahá, cited in *Star of the West*, vol. 8, no. 4 (17 May 1917), p. 41.

12. *Gleanings from the Writings of Bahá'u'lláh*, CXXXVI, par. 2, p. 334; also in *Bahá'í Prayers*, p. iii.

13. Bahá'u'lláh, in *Bahá'í Prayers*, pp. 8–9.

14. Ibid., p. 12.

15. ‘Abdu’l-Bahá, in *Prayer and Devotional Life*, no. 24, p. 7.

16. From a talk given by ‘Abdu’l-Bahá on 5 August 1912, published in *The Promulgation of Universal Peace*, p. 345.

17. *Selections from the Writings of ‘Abdu’l-Bahá* (Wilmette: Bahá’í Publishing, 2010, 2015 printing), no. 22.1, pp. 75–76.

18. From a letter dated 10 January 1936 written on behalf of Shoghi Effendi, published in *Prayer and Devotional Life*, no. 61, p. 25.

19. From a letter dated 10 January 1936 written on behalf of Shoghi Effendi, quoted in *Bahá’í Prayers*, p. 301.

20. Bahá’u’lláh, in *Bahá’í Prayers*, p. 4.

21. Bahá’u’lláh, in *Prayer and Devotional Life*, no. 68, p. 29.

22. From a message dated 29 December 2015, published in *Framework for Action: Selected Messages of the Universal House of Justice and Supplementary Material, 2006–2016* (West Palm Beach: Palabra Publications, 2017), no. 35.49, p. 232.



# ಜೀವನ ಮತ್ತು ಮರಣ

## ಉದ್ದೇಶ

ಜೀವನವು ಕೇವಲ ಈ ಪ್ರಪಂಚದ ಬದಲಾವಣೆಗಳು ಮತ್ತು ಅವಕಾಶಗಳನ್ನು ಒಳಗೊಂಡಿರುವುದಿಲ್ಲ ಆದರೆ ಅದರ ನಿಜವಾದ ಮಹತ್ವವು ಆತ್ಮದ ಬೆಳವಣಿಗೆಯಲ್ಲಿರುವುದು ಎಂಬುದನ್ನು ಪ್ರಶಂಸಿಸುವುದು.

## ವಿಭಾಗ 1

ಮಾನವ ಆತ್ಮವು ವಸ್ತು ಮತ್ತು ಭೌತಿಕ ಪ್ರಪಂಚಕ್ಕಿತ ಮೇಲಿರುತ್ತದೆ. ಅಬ್ದುಲ್ ಬಹಾರವರು ತಮ್ಮ ಒಂದು ಭಾಷಣದಲ್ಲಿ ವಿವರಿಸುತ್ತಾರೆ:

> **"ಈ ಭೌತಿಕ ದೇಹಗಳು ಪರಮಾಣುಗಳಿಂದ ಕೂಡಿವೆ; ಈ ಪರಮಾಣುಗಳು ಪ್ರತ್ಯೇಕಿಸಲು ಪ್ರಾರಂಭಿಸಿದಾಗ ವಿಭಜನೆಯಾಗತೊಡಗುತ್ತವೆ, ನಂತರ ಬರುವುದನ್ನು ನಾವು ಸಾವು ಎಂದು ಕರೆಯುತ್ತೇವೆ. . . .**
>
> **"ಆತ್ಮದೊಂದಿಗೆ ಅದು ವಿಭಿನ್ನವಾಗಿರುತ್ತದೆ. ಆತ್ಮವು ಮೂಲ ಧಾತುಗಳ ಸಂಯೋಜನೆಯಲ್ಲ. ಅದು ಅನೇಕ ಪರಮಾಣುಗಳಿಂದ ಕೂಡಿಲ್ಲ, ಅದು ಅವಿಭಾಜ್ಯ ವಸ್ತುವಾಗಿದೆ ಮತ್ತು ಆದ್ದರಿಂದ ಶಾಶ್ವತವಾಗಿದೆ. ಅದು ಭೌತಿಕ ಸೃಷ್ಟಿಯ ವ್ಯವಸ್ಥೆಯಿಂದ ಸಂಪೂರ್ಣವಾಗಿ ಹೊರಗಿದೆ; ಅದು ಅಮರ!"[1]**

1. "ಕೂಡಿದೆ" ಎಂಬುದರ ಅರ್ಥವೇನು? ____________________

2. ಭೌತಿಕ ಶರೀರಗಳಂತೆ ಮಾನವ ಆತ್ಮವು ವಿವಿಧ ಅಂಶಗಳಿಂದ ಕೂಡಿದೆಯೇ? ____________

3. ಮಾನವ ಆತ್ಮವು ಭೌತಿಕ ಅಸ್ತಿತ್ವವೇ? ____________________

## ವಿಭಾಗ 2

ರಕ್ಷಕರ ಪರವಾಗಿ ಬರೆದ ಪತ್ರವೊಂದರಲ್ಲಿ "ಮನುಷ್ಯನ ಆತ್ಮವು ಗರ್ಭದಾರಣೆಯ ಕಾಲದಲ್ಲಿ ಅಸ್ತಿತ್ವಕ್ಕೆ ಬರುತ್ತದೆ."[2] "ಗರ್ಭಧಾರಣೆ" ಎಂಬ ಅರ್ಥದ ಪ್ರಶ್ನೆಗೆ ಉತ್ತರಿಸುತ್ತಾ ವಿಶ್ವ ನ್ಯಾಯ ಮಂದಿರವು ಹೀಗೆ ಹೇಳಿದೆ:

> **"ಬಹಾಯಿ ಬರವಣಿಗೆಗಳಿಂದ 'ಗರ್ಭಧಾರಣೆ' ಎಂದು ವಿವರಿಸಲಾದ ಘಟನೆಯ ಜೈವಿಕ ಕ್ಷಣ ಮತ್ತು ಸ್ವರೂಪವನ್ನು ನಿಖರವಾಗಿ ವ್ಯಾಖ್ಯಾನಿಸಿರುವುದು ಎಲ್ಲೂ ಕಂಡು ಬಂದಿಲ್ಲ. ವೈದ್ಯಕೀಯ ಸಂದರ್ಭದಲ್ಲಿ ಈ ಪದವನ್ನು ಬಳಸುವುದರಲ್ಲಿ ಸಹ ಯಾವ ನಿಖರತೆಯೂ ಇಲ್ಲ. ವಾಸ್ತವವಾಗಿ, ಗರ್ಭಧಾರಣೆಯ ಒಂದು ತಿಳುವಳಿಕೆ ಎಂದರೆ ಅದು ಫಲೀಕರಣದೊಂದಿಗೆ ಸೇರಿಕೊಳ್ಳುತ್ತದೆ; ಗರ್ಭಧಾರಣೆಯು, ಫಲೀಕರಣ ಮತ್ತು ಅಳವಡಿಕೆಯ ನಂತರ ಸಂಭವಿಸುತ್ತದೆ ಎಂಬುದು ಮತ್ತೊಂದು ವಿವರಣೆ. ಆದುದರಿಂದ ಭೌತಿಕ ರೂಪದೊಂದಿಗೆ ಆತ್ಮದ ಒಡನಾಟ ಯಾವಾಗ ಸಂಭವಿಸುತ್ತದೆ ಎಂದು ತಿಳಿಯಲು ಸಾಧ್ಯವಾಗದಿರಬಹುದು, ಮತ್ತು ಅಂತಹ ಪ್ರಶ್ನೆಗಳು ಆಲೋಚನೆ ಅಥವಾ ಅನ್ವೇಷಣೆಯಿಂದ ಪರಿಹಾರ ದೊರಕದಿರಬಹುದು ಏಕೆಂದರೆ ಅವು ಆಧ್ಯಾತ್ಮಿಕ ಪ್ರಪಂಚದ ರಹಸ್ಯಗಳು ಮತ್ತು ಆತ್ಮದ ಸ್ವರೂಪಕ್ಕೆ ಸಂಬಂಧಪಟ್ಟಿರುವುದಾಗಿದೆ."[3]**

1. ಮನುಷ್ಯನ ಆತ್ಮವು ಯಾವಾಗ ಅಸ್ತಿತ್ವಕ್ಕೆ ಬರುತ್ತದೆ? ____________________

   ________________________________________

2. "ಗರ್ಭಧಾರಣೆ"ಎಂಬ ಪದವು ನಿಖರವಾದ ಜೈವಿಕ ಕ್ಷಣವನ್ನು ವಿವರಿಸುತ್ತದೆಯೇ?

# ವಿಭಾಗ 3

ಆತ್ಮ ಮತ್ತು ದೇಹದ ನಡುವಿನ ಸಂಪರ್ಕ ಭೌತಿಕವಾದುದಲ್ಲ; ಆತ್ಮವು ದೇಹವನ್ನು ಪ್ರವೇಶಿಸುವುದಾಗಲಿ ಅಥವ ನಿರ್ಗಮಿಸುವುದಾಗಲಿ ಮಾಡುವುದಿಲ್ಲ ಮತ್ತು ಅದು ಭೌತಿಕ ಜಾಗವನ್ನೂ ಆವರಿಸುವುದಿಲ್ಲ. ಆತ್ಮ ಮತ್ತು ದೇಹದ ಒಡನಾಟವನ್ನು ಕನ್ನಡಿಗೆ ಬೆಳಕು ಬಿದ್ದು ಪ್ರತಿಫಲಿಸುವುದಕ್ಕೆ ಹೋಲಿಸಬಹುದು. ಕನ್ನಡಿಯಿಂದ ಮೂಡಿಬರುವ ಬೆಳಕು ಕನ್ನಡಿಯ ಒಳಗಿನಿಂದ ಬರುವಂತಹದ್ದಲ್ಲ; ಅದೇ ರೀತಿ, ಆತ್ಮವು ದೇಹದ ಒಳಗಿರುವುದಿಲ್ಲ. ಅಬ್ದುಲ್ ಬಹಾರವರು ಸೂಚಿಸುವಂತೆ,

> **"ತಾರ್ಕಿಕ ಆತ್ಮ ಅಥವಾ ಮಾನವ ಚೇತನವು ಈ ದೇಹದ ಮೂಲಕ ಅಂತಸ್ಥವಾಗಿ ಜೀವಿಸುವುದಿಲ್ಲ — ಅಂದರೆ ಆತ್ಮವು ಅದನ್ನು ಪ್ರವೇಶಿಸುವುದಿಲ್ಲ; ಏಕೆಂದರೆ ಅಂತಸ್ಥ ಮತ್ತು ಪ್ರವೇಶವು ದೇಹಗಳ ಗುಣಲಕ್ಷಣಗಳಾಗಿವೆ, ಮತ್ತು ತರ್ಕಬದ್ಧ ಆತ್ಮವು ಇದೆಲ್ಲವನ್ನು ಮೀರಿ ಪವಿತ್ರವಾಗಿದೆ. ಈ ದೇಹವನ್ನು ಬಿಟ್ಟ ನಂತರ ಅದಕ್ಕೆ ಒಂದು ವಾಸಸ್ಥಾನ ಬೇಕು ಎನ್ನಲು, ಮೊಟ್ಟ ಮೊದಲನೆಯದಾಗಿ ಅದು ಈ ದೇಹವನ್ನು ಎಂದೂ ಪ್ರವೇಶಿಸಿಯೇ ಇಲ್ಲ. ದೇಹದೊಂದಿಗೆ ಆತ್ಮದ ಸಂಪರ್ಕವು ಕನ್ನಡಿಯೊಂದಿಗೆ ಈ ದೀಪದ ಸಂಪರ್ಕದತೆ. ಕನ್ನಡಿಯನ್ನು ಹೊಳಪು ಗೊಳಿಸಿ ಪರಿಪೂರ್ಣಗೊಳಿಸಿದರೆ, ದೀಪದ ಬೆಳಕು ಅದರಲ್ಲಿ ಗೋಚರಿಸುತ್ತದೆ, ಮತ್ತು ಕನ್ನಡಿ ಒಡೆದು ಹೋದರೆ ಅಥವಾ ಧೂಳಿನಿಂದ ಮುಚ್ಚಲ್ಪಟ್ಟರೆ, ಬೆಳಕು ಮರೆಮಾಚಲ್ಪಡುತ್ತದೆ."[4]**

1. ಕೆಳಗೆ ಕೊಟ್ಟಿರುವ ವಾಕ್ಯಗಳಲ್ಲಿನ ಖಾಲಿ ಜಾಗವನ್ನು ತುಂಬಿ.

   a. ತಾರ್ಕಿಕ ಆತ್ಮ ಅಥವಾ ____________________ ಈ ದೇಹದ ಮೂಲಕ ಅಂತಸ್ಥವಾಗಿ ಜೀವಿಸುವುದಿಲ್ಲ — ಅಂದರೆ ಆತ್ಮವು __________________ .

   b. _______________ ಅಥವಾ ಮಾನವ ಚೇತನವು, ಆನುವಂಶಿಕತತೆಯಿಂದ ದೇಹವನ್ನು ಪ್ರವೇಶಿಸುವುದಿಲ್ಲ ಮತ್ತು ಪ್ರವೇಶವು ________________ , ಮತ್ತು ತರ್ಕ ಬದ್ಧ ಆತ್ಮವು __________________________________ .

   c. ಆತ್ಮವು ಈ ದೇಹವನ್ನು ______________________ ಎನ್ನಲು, ಮೊಟ್ಟ ಮೊದಲನೆಯದಾಗಿ ಅದು ಈ ದೇಹವನ್ನು _________________ .

   d. ದೇಹದೊಂದಿಗೆ ಆತ್ಮದ ಸಂಪರ್ಕವು ________________________________ .

   e. ಕನ್ನಡಿಯನ್ನು ಹೊಳಪು ಗೊಳಿಸಿ ಪರಿಪೂರ್ಣಗೊಳಿಸಿದರೆ, _______________________ .

   f. ಕನ್ನಡಿ ಒಡೆದು ಹೋದರೆ ಅಥವಾ ಧೂಳಿನಿಂದ ಮುಚ್ಚಲ್ಪಟ್ಟರೆ, ____________________ _____________________ .

2. ಇಲ್ಲಿಯವರೆಗೆ ನಾವು ಅಧ್ಯಯನ ಮಾಡಿರುವುದರ ಆಧಾರದ ಮೇಲೆ ಈ ಕೆಳಗಿನ ಹೇಳಿಕೆಗಳು ನಿಜವೇ , ಎಂದು ನಿರ್ಧರಿಸಿ:

   _______ ಆತ್ಮವು ಭೌತಿಕ ಪ್ರಪಂಚಕ್ಕೆ ಸೇರಿರುವುದಿಲ್ಲ.

   _______ ಆತ್ಮವು ದೇಹದ ಒಳಗೆ ಇದೆ.

   _______ ದೇಹವು ಆತ್ಮದ ಒಡೆಯನಾಗಿರುತ್ತದೆ.

   _______ ಆತ್ಮವು ಅಮರವಾದುದು.

   _______ ಆತ್ಮವು ಭ್ರೂಣದ ಜೊತೆ ಸಂಪರ್ಕಕ್ಕೆ ಬಂದಾಗ ವ್ಯಕ್ತಿಯ ಪ್ರಾರಂಭವಾಗುವುದು.

   _______ ವ್ಯಕ್ತಿಯು ಈ ಪ್ರಪಂಚದಲ್ಲಿ ಜನಿಸಿದಾಗ ಆತನ ಜೀವನವು ಪ್ರಾರಂಭವಾಗುವುದು.

_______ ವ್ಯಕ್ತಿಯ ಭೌತಿಕ ಅಸ್ತಿತ್ವವು ಮರಣದ ನಂತರವೂ ಮುಂದುವರಿಯುವುದು.

_______ ಪ್ರತಿ ದಿನ ನಮಗೆ ಆಗುವ ಘಟನೆಗಳಿಂದ ಜೀವನವು ಕೂಡಿರುತ್ತದೆ.

3. ಆತ್ಮ ಮತ್ತು ದೇಹದ ಸಂಬಂಧವನ್ನು ವಿವರಿಸಲು ಕನ್ನಡಿ ಮತ್ತು ಬೆಳಕಿನ ಚಿತ್ರಣವನ್ನು ಉಪಯೋಗಿಸಿ: ______________________________

______________________________

______________________________

______________________________

______________________________

## ವಿಭಾಗ 4

ದೇಹ ಮತ್ತು ಆತ್ಮದ ನಡುವೆ ವಿಶೇಷವಾದುದೊಂದು ಸಂಬಂಧವಿದೆ ಮತ್ತು ಅದು ಒಟ್ಟಾಗಿ ಮನುಷ್ಯನನ್ನು ರೂಪಿಸುತ್ತದೆ. ಈ ಸಂಬಂಧವು ಮರಣಾಂತಿಕ ಜೀವನದ ಅವಧಿಯನ್ನು ಮಾತ್ರ ಹೊಂದಿರುತ್ತದೆ. ಈ ಅವಧಿ ಮುಗಿದಾಗ ಪ್ರತಿಯೊಂದೂ ತನ್ನ ಮೂಲಸ್ಥಾನಕ್ಕೇ ಹಿಂತಿರುಗುವುದು — ದೇಹ ಮಣ್ಣಿನ ಪ್ರಪಂಚಕ್ಕೆ ಮತ್ತು ಆತ್ಮ ದೇವರ ಆಧ್ಯಾತ್ಮಿಕ ಪ್ರಪಂಚಕ್ಕೆ, ಅಲ್ಲಿ ಅದು ಪ್ರಗತಿ ಹೊಂದುತ್ತಾ ಹೋಗುವುದು. ಅಬ್ದುಲ್ ಬಹಾರವರು ಹೇಳುತ್ತಾರೆ:

**"ಮಾನವನ ಚೈತನ್ಯಕ್ಕೆ ಪ್ರಾರಂಭವೆಂಬುದು ಇರುವುದು ಆದರೆ ಅಂತ್ಯವಿಲ್ಲ: ಅದು ಎಂದೆಂದಿಗೂ ಇರುವುದು."[5]**

ಅವರು ತಮ್ಮ ಒಂದು ಮಾತಿನಲ್ಲಿ ಸ್ಪಷ್ಟ ಪಡಿಸಿದ್ದಾರೆ:

**"ಆತ್ಮಕ್ಕೆ ದೇಹ ಬೇಕಾಗಿಲ್ಲ, ಆದರೆ ದೇಹಕ್ಕೆ ಆತ್ಮ ಬೇಕು, ಇಲ್ಲವಾದರೆ ಅದು ಬದುಕಲು ಸಾಧ್ಯವಿಲ್ಲ. ಆತ್ಮವು ದೇಹವಿಲ್ಲದೆ ಬದುಕಬಲ್ಲದು, ಆದರೆ ಆತ್ಮವಿಲ್ಲದೆ ದೇಹವು ಸಾಯುತ್ತದೆ."[6]**

ರಕ್ಷಕರು ಹೀಗೆ ವಿವರಿಸಿದ್ದಾರೆ:

**"ಮನುಷ್ಯನ ಆತ್ಮಕ್ಕೆ ಸಂಬಂಧಿಸಿದತೆ: ಬಹಾಯಿ ಬೋಧನೆಗಳ ಪ್ರಕಾರ ಮನುಷ್ಯನ ಆತ್ಮವು ಮಾನವ ಭ್ರೂಣದ ರಚನೆಯೊಂದಿಗೆ ಪ್ರಾರಂಭವಾಗುತ್ತದೆ ಮತ್ತು ದೇಹದಿಂದ ಬೇರ್ಪಟ್ಟ ನಂತರ ಅಭಿವೃದ್ಧಿ ಹೊಂದುತ್ತಾ ಅಸ್ತಿತ್ವದ ಅಂತ್ಯವಿಲ್ಲದ ಹಂತಗಳನ್ನು ದಾಟಿ ಹೋಗುತ್ತದೆ ಮತ್ತು ಅದರ ಪ್ರಗತಿ ಹೀಗೆ ಅನಂತವಾಗಿದೆ."[7]**

1. ಈ ಮೇಲಿನ ಉದ್ಧರಣಗಳನ್ನು ಮನಸ್ಸಿನಲ್ಲಿಟ್ಟುಕೊಂಡು, ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ:

   a. ದೇಹಕ್ಕೆ ಒಂದು ಆತ್ಮದ ಅವಶ್ಯಕತೆ ಇದೆಯೇ? ______________________________

   b. ಆತ್ಮಕ್ಕೆ ಒಂದು ದೇಹದ ಅವಶ್ಯಕತೆ ಇದೆಯೇ? ______________________________

   c. ನಾವು ಸತ್ತಾಗ ದೇಹ ಮತ್ತು ಆತ್ಮದ ಸಂಬಂಧಕ್ಕೆ ಏನಾಗುತ್ತದೆ? ______________________________

   ______________________________

   d. ಸತ್ತ ನಂತರ ಆತ್ಮಕ್ಕೆ ಏನಾಗುತ್ತದೆ? ______________________________

   ______________________________

e. ಆತ್ಮದ ಪ್ರಗತಿಯು ಎಲ್ಲಿಯವರೆಗೆ ಇರುತ್ತದೆ? ____________________________________

____________________________________________________________

f. ಜೀವನ ಯಾವಾಗ ಮುಕ್ತಾಯಗೊಳ್ಳುತ್ತದೆ? ____________________________________

____________________________________________________________

2. ಈ ವಿಭಾಗಗಳಲ್ಲಿ ನಾವು ಅಧ್ಯಯನ ಮಾಡಿದ ಪ್ರಕಾರ ಈ ಕೆಳಗೆ ಕೊಟ್ಟಿರುವುದರಲ್ಲಿ ಯಾವುದು ಸ್ವೀಕೃತ ಎಂದು ನಿರ್ಧರಿಸಿ:

_______ ಸಾವು ಒಂದು ಶಿಕ್ಷೆ.

_______ ದೇಹ ಮತ್ತು ಆತ್ಮದ ಸಂಪರ್ಕವು ಮರಣಾಂತಿಕ ಜೀವನದ ಅವಧಿಯನ್ನು ಮಾತ್ರ ಹೊಂದಿರುತ್ತದೆ.

_______ ದೇಹವು ಶಾಶ್ವತ ಪ್ರಗತಿಗೆ ಸಮರ್ಥವಾಗಿದೆ.

_______ ಆತ್ಮವು ಎಂದೆಂದಿಗೂ ಪ್ರಗತಿ ಹೊಂದುತ್ತಿರುತ್ತದೆ.

_______ ಮರಣವು ಜೀವನದ ಮುಕ್ತಾಯ.

_______ ನಮ್ಮ ದೇಹವು ಮೇಲೇರುವ ತೀರ್ಪಿನ ದಿನ ಇರುತ್ತದೆ.

_______ ಸಾವಿನ ಸಮಯದಲ್ಲಿ, ಆತ್ಮವು ಮೊದಲಿಗಿಂತ ಹೆಚ್ಚು ಸ್ವಾತಂತ್ರವನ್ನು ಹೊಂದಿದೆ.

_______ ಜೀವನವು ಸಾವಿನೊಂದಿಗೆ ಕೊನೆಗೊಳ್ಳುತ್ತದೆ.

_______ ನಾವು ಸಾವಿಗೆ ಭಯ ಪಡಬೇಕು.

_______ ಆತ್ಮಕ್ಕೆ ಆಹಾರ, ಬಟ್ಟೆ, ವಿಶ್ರಾಂತಿ ಮತ್ತು ಮನರಂಜನೆಯ ಅಗತ್ಯವಿದೆ.

_______ ದೇಹವು ತನ್ನ ಶಕ್ತಿಯನ್ನು ಬಳಸುವುದರಿಂದ ಆತ್ಮವು ದಣಿಯುತ್ತದೆ.

_______ ಆತ್ಮವು ಅನಾರೋಗ್ಯದಿಂದ ಅಥವಾ ದೇಹದ ದೌರ್ಬಲ್ಯದಿಂದ ಪ್ರಭಾವಿತವಾಗುವುದಿಲ್ಲ.

_______ ಮನುಷ್ಯನಿಗೆ ಮರಣಾ ನಂತರವೂ ದೈಹಿಕ ಅಗತ್ಯಗಳು ಇರುತ್ತವೆ.

# ವಿಭಾಗ 5

ಆತ್ಮವು ಭೌತಿಕ ಜಾಗವನ್ನು ಆಕ್ರಮಿಸುವುದಿಲ್ಲ ಮತ್ತು ವಸ್ತು ಘಟಕಗಳಂತೆ ಪ್ರಕೃತಿಯ ನಿಯಮಗಳ ಪ್ರಕಾರ ಕಾರ್ಯನಿರ್ವಹಿಸುವುದಿಲ್ಲ ಎಂಬುದನ್ನು ನಾವು ನೋಡಿದ್ದೇವೆ. ದೇಹದ ಮುಖಾಂತರ ಆತ್ಮವು ಜಗತ್ತಿನಲ್ಲಿ ಪ್ರಭಾವ ಬೀರುತ್ತದೆ, ಆದರೆ ಆತ್ಮವು ತನ್ನ ಶಕ್ತಿಯನ್ನು ಚಲಾಯಿಸುವ ಏಕೈಕ ಸಾಧನವಲ್ಲ. ಬಹಾಉಲ್ಲಾರವರು ಘೋಷಿಸುತ್ತಾರೆ:

**“ಖಂಡಿತವಾಗಿಯೂ ನಾನು ಹೇಳುತ್ತೇನೆ, ಮಾನವ ಆತ್ಮವು, ಎಲ್ಲಾ ರೀತಿಯ ಪ್ರವೇಶ ಅಥವ ನಿರ್ಗಮನಕ್ಕೂ ಮೀರಿರುವುದು ಅದು ಅಚಲ, ಆದರೂ ಅದು ಹಾರಾಡುವುದು; ಅದು ಚಲಿಸುವುದು ಆದರೂ ಅದು ಸ್ತಬ್ಧ.”[8]**

ಮತ್ತು ಅಬ್ದುಲ್ ಬಹಾರವರು ಹೀಗೆ ಹೇಳುತಾರೆ:

**“ಮಾನವನ ಆತ್ಮದ ಪ್ರಭಾವ ಮತ್ತು ಗ್ರಹಿಕೆ ಎರಡು ರೀತಿಯದ್ದಾಗಿದೆ ಎಂದು ತಿಳಿಯಿರಿ; ಅಂದರೆ ಮನುಷ್ಯನ ಆತ್ಮವು ಕಾರ್ಯಾಚರಣೆ ಮತ್ತು ತಿಳುವಳಿಕೆಯ ಎರಡು ವಿಧಾನಗಳನ್ನು ಹೊಂದಿದೆ. ಒಂದು ವಿಧಾನವು ದೈಹಿಕ ಸಾಧನಗಳು ಮತ್ತು ಅಂಗಗಳ**

**ಮಧ್ಯಸ್ತಿಕೆಯ ಮೂಲಕವಾಗಿದೆ. ಹೀಗಾಗಿ ಅದು ಕಣ್ಣಿನಿಂದ ನೋಡುತ್ತದೆ, ಕಿವಿಯಿಂದ ಕೇಳುತ್ತದೆ, ನಾಲಿಗೆಯಿಂದ ಮಾತನಾಡುತ್ತದೆ. . . .**

**"ಮತ್ತೊಂದು ವಿಧಾನವೆಂದರೆ ಈ ದೈಹಿಕ ಸಾಧನಗಳು ಮತ್ತು ಅಂಗಗಳಿಲ್ಲದೆ ಆತ್ಮದ ಪ್ರಭಾವ ಮತ್ತು ಕ್ರಿಯೆಯು ನಡೆಯುವುದು."[9]**

1. ಕೆಳಗೆ ಕೊಟ್ಟಿರುವ ವಾಕ್ಯಗಳಲ್ಲಿರುವ ಖಾಲಿ ಜಾಗಗಳನ್ನು ತುಂಬಿ:

   a. ಮಾನವ ಆತ್ಮವು, ಎಲ್ಲಾ ರೀತಿಯ ____________ ಅಥವ ____________ ಮೀರಿರುವುದು.

   b. ಅದು ____________ , ಆದರೂ ಅದು ____________ .

   c. ಅದು ____________ , ಆದರೂ ಅದು ____________ .

2. ಮಾನವನ ಆತ್ಮದ ಎರಡು ರೀತಿಯ ಪ್ರಭಾವ ಮತ್ತು ಗ್ರಹಿಕೆಯನ್ನು ವಿವರಿಸಿ: ____________

   ________________________________________________

   ________________________________________________

   ________________________________________________

   ________________________________________________

3. ದೇಹದ ಸಾಧನಗಳಿಲ್ಲದೆ ಆತ್ಮದ ಪ್ರಭಾವ ಮತ್ತು ಕ್ರಿಯೆಯ ಬಗ್ಗೆ ಉದಾಹರಣೆಗಳನ್ನು ಕೊಡಬಲ್ಲಿರಾ? ________________________________

   ________________________________________________

   ________________________________________________

   ________________________________________________

## ವಿಭಾಗ 6

ಈಗ ಹಿಂದಿನ ವಿಭಾಗಗಳಲ್ಲಿನ ಚರ್ಚೆಯ ಬೆಳಕಿನಲ್ಲಿ ಬಹಾಯಿ ಬರಹಗಳಿಂದ ಈ ಕೆಳಗಿನ ಭಾಗವನ್ನು ಓದಿ:

**"ಮನುಷ್ಯನ ಆತ್ಮವು ಅತ್ಯುನ್ನತವಾಗಿದೆ ಮತ್ತು ದೇಹ ಅಥವಾ ಮನಸ್ಸಿನ ಎಲ್ಲಾ ದುರ್ಬಲತೆಗಳಿಂದ ಸ್ವತಂತ್ರವಾಗಿದೆ ಎಂದು ತಿಳಿಯಿರಿ. ಒಬ್ಬ ಅನಾರೋಗ್ಯದ ವ್ಯಕ್ತಿಯು ದೌರ್ಬಲ್ಯದ ಚಿಹ್ನೆಗಳನ್ನು ತೋರಿಸುವುದು ಅವನ ಆತ್ಮ ಮತ್ತು ಅವನ ದೇಹದ ನಡುವೆ ಅಡ್ಡಿಯಾಗುವ ಅಡಚಣೆಗಳಿಂದಾಗಿ, ಏಕೆಂದರೆ ಆತ್ಮವು ಯಾವುದೇ ದೈಹಿಕ ಖಾಯಿಲೆಗಳಿಂದ ಪ್ರಭಾವಿತವಾಗುವುದಿಲ್ಲ. ದೀಪದ ಬೆಳಕನ್ನು ಪರಿಗಣಿಸಿ. ಬಾಹ್ಯ ವಸ್ತುವೊಂದು ಅದರ ಕಾಂತಿಗೆ ಅಡ್ಡಿಯಾಗಬಹುದಾದರೂ, ಬೆಳಕು ತನ್ನಷ್ಟಕ್ಕೆ ಕುಂದದ ಬಲದೊಡನೆ ಹೊಳೆಯುತ್ತಲೇ ಇರುತ್ತದೆ. ಅದೇ ರೀತಿ, ಮನುಷ್ಯನ ದೇಹವನ್ನು ಬಾಧಿಸುವ ಪ್ರತಿಯೊಂದು ಖಾಯಿಲೆಯೂ, ಆತ್ಮವು ತನ್ನ ಅಂತರ್ಗತ ಶಕ್ತಿ ಮತ್ತು ಬಲ ಪ್ರಕಟಿಸುವುದನ್ನು ತಡೆಯುತ್ತದೆ. ಆದಾಗ್ಯೂ, ಅದು ದೇಹವನ್ನು ತೊರೆದಾಗ, ಎಂತಹ ಔನತ್ಯವನ್ನು ವ್ಯಕ್ತಪಡಿಸುತ್ತದೆ ಮತ್ತು ಎಂತಹ ಪ್ರಭಾವವನ್ನು ಪ್ರಕಟಿಸುತ್ತದೆ ಎಂದರೆ ಭೂಮಿಯ ಮೇಲಿನ ಯಾವ ಶಕ್ತಿಯು ಅದಕ್ಕೆ ಸಮನಾಗಿರುವುದಿಲ್ಲ. ಪ್ರತಿಯೊಂದು ಪರಿಶುದ್ಧ, ಪರಿಷ್ಕತ ಮತ್ತು ಪುಣ್ಯ ಆತ್ಮಕ್ಕೆ**

**ಅಪಾರ ಶಕ್ತಿಯು ದೊರೆಯುತ್ತದೆ ಮತ್ತು ಅದು ಅತಿಯಾದ ಸಂತೋಷದಿದ ನಲಿಯುತ್ತದೆ."[10]**

1. ದೇಹ ಮತ್ತು ಮನಸ್ಸಿನ ದುರ್ಬಲತೆಗಳಿಂದ ಆತ್ಮವು ಹೇಗೆ ಪರಿಣಾಮ ಬೀರುವುದಿಲ್ಲ ಮತ್ತು ದೇಹದಿಂದ ಬೇರ್ಪಟ್ಟ ನಂತರ ಏನು ಸ್ಪಷ್ಟವಾಗುವುದು? ಎಂಬುದನ್ನು ನಿಮ್ಮ ಮಾತಿನಲ್ಲಿ ವಿವರಿಸಿ.

________________________________________

________________________________________

________________________________________

________________________________________

________________________________________

________________________________________

________________________________________

________________________________________

2. ನಮ್ಮ ಭೌತಿಕ ದೇಹಗಳ ಮರಣದ ನಂತರ ನಾವು ನಮ್ಮ ಪ್ರತ್ಯೇಕತೆಯನ್ನು ಕಾಪಾಡಿಕೊಳ್ಳುತ್ತೇವೆಯೇ? ____________________________

# ವಿಭಾಗ 7

ಬಹಾಉಲ್ಲಾ ನಮಗೆ ಹೇಳುತ್ತಾರೆ:

**"ಮತ್ತೆ ಈಗ ಮನುಷ್ಯನ ಆತ್ಮ ಮತ್ತು ಮರಣಾನಂತರ ಅದರ ಅಸ್ತಿತ್ವದ ಬಗ್ಗೆ ನಿನ್ನ ಪ್ರಶ್ನೆ. ದೇಹದಿಂದ ಆತ್ಮವು ಬಿಡುಗಡೆ ಹೊಂದಿದ ಬಳಿಕ ದೇವರ ಸಮ್ಮುಖವನ್ನು ಪಡೆಯುವ ತನಕ, ಯುಗ ಅಥವಾ ಶತಮಾನಗಳಿಂದಾಗಲಿ, ಈ ಪ್ರಪಂಚದಲ್ಲಾಗುವ ಬದಲಾವಣೆ ಅಥವಾ ಅವಕಾಶಗಳಿಂದಾಗಲಿ ಬದಲಾಗದಂಥ ಸ್ಥಿತಿಯಲ್ಲಿ ಮುಂದುವರಿಯುತ್ತಾ ಹೋಗುವುದು. ದೇವರ ಸಾಮ್ರಾಜ್ಯ, ಆತನ ಸಾರ್ವಭೌಮತೆ, ಆತನ ಪ್ರಭುತ್ವ ಮತ್ತು ಶಕ್ತಿ ಇರುವ ತನಕ ಅದು ಇರುವುದು. ದೇವರ ಚಿಹ್ನೆ ಮತ್ತು ಗುಣಲಕ್ಷಣಗಳನ್ನು ಅದು ಬಿಂಬಿಸುವುದು ಮತ್ತು ಆತನ ಪ್ರೀತಿಪೂರ್ವಕ ದಯೆ ಮತ್ತು ಅನುಗ್ರಹವನ್ನು ಪ್ರಕಟಿಸುವುದು."[11]**

1. ಭೌತಿಕ ಮರಣದ ನಂತರ ಆತ್ಮವು ಎಲ್ಲಿಯ ತನಕ ಅಭಿವೃದ್ಧಿಗೊಳ್ಳುತ್ತದೆ? ____________

   ________________________________________

2. ಯಾವ ಸ್ಥಿತಿಯಲ್ಲಿ ಆತ್ಮ ದೇವರ ಸಮ್ಮುಖದತ್ತ ತನ್ನ ಎಂದೆಂದಿಗಿನ ಪಯಣವನ್ನು ಮುಂದುವರೆಸುವುದು? ____________________________

   ________________________________________

   ________________________________________

3. ಆ ಸ್ಥಿತಿಯಲ್ಲಿ ಆತ್ಮವು ಪ್ರಕಟಗೊಳಿಸುವ ಕೆಲವು ಗುಣಲಕ್ಷಣಗಳು ಮತ್ತು ಚಿಹ್ನೆಗಳು ಯಾವುವು? ______________________________

4. ನಾವು ಇಲ್ಲಿಯವರೆಗೆ ಅಧ್ಯಯನ ಮಾಡಿರುವುದರ ಆಧಾರದ ಮೇಲೆ , ಈ ಕೆಳಗಿನವು ನಿಜವೇ ನಿರ್ಧರಿಸಿ:

_______ ದೇವರ ಸಾಮ್ರಾಜ್ಯವು ಶಾಶ್ವತವಾಗಿ ಉಳಿಯುವುದು.

_______ ದೇವರ ಗುಣಲಕ್ಷಣಗಳನ್ನು ಪ್ರಕಟಿಸುವ ಸಾಮರ್ಥ್ಯ ಆತ್ಮಕ್ಕಿದೆ.

_______ ನಾವು ಅಗಲಿದವರಿಗಾಗಿ ಹೇಳುವ ಪ್ರಾರ್ಥನೆಗಳು ಅವರ ಆತ್ಮಗಳ ಪ್ರಗತಿಯ ಮೇಲೆ ಪರಿಣಾಮ ಬೀರುವುದಿಲ್ಲ.

_______ ಆತ್ಮವು ಅಸ್ತಿತ್ವದಲ್ಲಿರುವುದನ್ನು ಎಂದಿಗೂ ನಿಲ್ಲಿಸುವುದಿಲ್ಲ.

# ವಿಭಾಗ 8

ಬಹಾಉಲ್ಲಾ ಘೋಷಿತ್ತಾರೆ:

**"ಪ್ರತಿಯೊಂದು ಆಲಿಸುವ ಕಿವಿಯು, ಶುದ್ಧವಾಗಿಟ್ಟು ಮಲಿನಗೊಳಿಸದೇ ಇದ್ದಲ್ಲಿ ಎಲ್ಲಾ ಸಮಯದಲ್ಲೂ ಮತ್ತು ಪ್ರತಿಯೊಂದು ದಿಕ್ಕಿನಿಂದಲೂ ಈ ಕೆಳಗಿನ ಉಚ್ಚಾರಿತ ಪವಿತ್ರ ನುಡಿಗಳನ್ನು ಆಲಿಸುವುದು, ಇದನ್ನು ನೀವು ತಿಳಿದುಕೊಳ್ಳಿ: 'ನಿಜವಾಗಿಯೂ ನಾವು ದೇವರಿಗೆ ಸೇರಿದವರು ಮತ್ತು ಆತನಲ್ಲಿಗೇ ನಾವು ಹಿಂತಿರುಗುವೆವು'. ಮನುಷ್ಯನ ಭೌತಿಕ ಮರಣದ ಮತ್ತು ಆತನ ಹಿಂದಿರುಗುವಿಕೆಯ ನಿಗೂಢತೆಗಳನ್ನು ಇನ್ನೂ ಬಹಿರಂಗಗೊಳಿಸಲಾಗಿಲ್ಲ, ಮತ್ತು ಇನ್ನೂ ಅರಿಯಲಾರದೆ ಉಳಿದಿವೆ.**

**"ಆತ್ಮ ವಿಶ್ವಾಸ ತುಂಬಿದ ಬಹಾಯಿಗೆ ನಿಜವಾಗಿಯೂ ಸಾವು ಎಂಬುದು ಜೀವನದ ಬಟ್ಟಲು.ಅದು ಸಂತೋಷವನ್ನೀಯುತ್ತದೆ ಮತ್ತು ಆನಂದವನ್ನು ತಂದು ಕೊಡುವಂತಹುದಾಗಿದೆ ಅವಿನಾಶಿ ಜೀವನದ ಉಡುಗೊರೆಯನ್ನು ಅದು ಅನುಗ್ರಹಿಸುತ್ತದೆ.**

**"ಮನುಷ್ಯನ ಪ್ರಾಪಂಚಿಕ ಅಸ್ತಿತ್ವದ ಫಲದ ಸವಿಯನ್ನು ಕಂಡವನು – ಅದುವೇ ನಿಜವಾದ ಒಬ್ಬ ದೇವನನ್ನು ಗುರುತಿಸುವುದು – ಆತನ ಕೀರ್ತಿಯು ಬೆಳಗಲಿ, ಇಲ್ಲಿಂದ ನಂತರ ಅವರ ಜೀವನವನ್ನು ವರ್ಣಿಸಲು ಸಾಧ್ಯವಿಲ್ಲ. ಆ ಜ್ಞಾನವು ಇರುವುದು ಎಲ್ಲಾ ಪ್ರಪಂಚಗಳ ಒಡೆಯನಾದ ದೇವರೊಬ್ಬನ ಹತ್ತಿರ ಮಾತ್ರ."[12]**

**"ಓ ಪರಮಾಧಿಕಾರನ ಸುತನೇ! ನಾನು ಸಾವನ್ನು ನಿನಗೆ ಸಂತೋಷದ ಓಲೆಕಾರನನ್ನಾಗಿ ಮಾಡಿದ್ದೇನೆ. ನೀನು ಏಕೆ ದುಃಖಿಸುತ್ತೀಯೆ? ನಾನು ಅದರ ವೈಭವವನ್ನು ನಿನ್ನ ಮೇಲೆ ಬೀಳಿಸಲು ಬೆಳಕನ್ನು ಮಾಡಿದೆ. ಅದರಿಂದ ನೀನೇಕೆ ಮುಸುಕು ಹಾಕಿಕೊಂಡಿರುವೆ?"[13]**

1. ಈ ಕೆಳಗಿನ ಯಾವ ಹೇಳಿಕೆಗಳು ನಿಜವಾಗಿವೆ?

_______ ಮನುಷ್ಯನ ಆತ್ಮವು ದೇವರಿಂದ ಬಂದಿದೆ ಮತ್ತು ಅವನ ಬಳಿಗೆ ಹಿಂದಿರುಗುತ್ತದೆ.

_______ ಮರಣಾ ನಂತರದ ಜೀವನದ ಜ್ಞಾನವು ದೇವರ ಬಳಿ ಇದೆ.

_______ ಆತ್ಮ ವಿಶ್ವಾಸವುಳ್ಳ ನಂಬಿಕಸ್ಥನಿಗೆ ಸಾವು ಜೀವನವಾಗಿದೆ.

_______ ಸಾವು ಸಂತೋಷವನ್ನು ಹೊತ್ತ ದೂತ.

_______ ಸಾವಿನ ರಹಸ್ಯಗಳು ಎಲ್ಲರಿಗೂ ತಿಳಿದಿದೆ.

_______ ನಾವು ಜೀವನದ ಅನುಗ್ರಹಗಳನ್ನು ಅಮೂಲ್ಯವಾಗಿಟ್ಟುಕೊಳ್ಳಬೇಕು ಆದರೆ ಸಾವಿಗೆ ಹೆದರುವುದಲ್ಲ, ಏಕೆಂದರೆ ಅದು ಸಂತೋಷದ ಸಂದೇಶವಾಹಕ.

_______ ಮರಣಾನಂತರದ ಜೀವನದ ಬಗ್ಗೆ ನಮಗೆ ತಿಳಿದುಕೊಳ್ಳುವುದು ಮುಖ್ಯ.

2. ಈಗ, ಈ ವಿಭಾಗಗಳಲ್ಲಿ ನಾವು ಅಧ್ಯಯನ ಮಾಡಿರುವುದನ್ನು ಮನಸ್ಸಿನಲ್ಲಿಟ್ಟುಕೊಂಡು, ಜೀವನ, ಸಾವು, ದೇಹ ಮತ್ತು ಆತ್ಮದ ಬಗ್ಗೆ ಒಂದು ಚಿಕ್ಕ ಪ್ಯಾರಾ ಬರೆಯಿರಿ.

_______________________________________________

_______________________________________________

_______________________________________________

_______________________________________________

_______________________________________________

_______________________________________________

_______________________________________________

_______________________________________________

_______________________________________________

_______________________________________________

_______________________________________________

_______________________________________________

_______________________________________________

_______________________________________________

_______________________________________________

# ವಿಭಾಗ 9

ಅಬ್ದುಲ್ ಬಹಾರವರು ವಿವರಿಸುತ್ತಾರೆ:

**"ಮಾನವ ತನ್ನ ಜೀವನದ ಆರಂಭದಲ್ಲಿ ಪ್ರಪಂಚದ ಗರ್ಭಾವಸ್ಥೆಯಲ್ಲಿದ್ದನು. ಅಲ್ಲಿ ಅವನು ಮಾನವ ಅಸ್ತಿತ್ವದ ವಾಸ್ತವತೆಗೆ ಬೇಕಾದ ಸಾಮರ್ಥ್ಯ ಮತ್ತು ಯುಕ್ತ ಸಂಪನ್ನತೆಗಳನ್ನು ಪಡೆದನು. ಆ ಪರಿಮಿತ ಸ್ಥಿತಿಯಲ್ಲಿ, ಈ ಪ್ರಪಂಚಕ್ಕೆ ಅಗತ್ಯವುಳ್ಳ ಪ್ರೇರಣೆ ಮತ್ತು ಶಕ್ತಿಯನ್ನು ಆತನ ಮೇಲೆ ದಯಪಾಲಿಸಲಾಯಿತು. ಈ ಪ್ರಪಂಚದಲ್ಲಿ ಆತನಿಗೆ ಕಣ್ಣುಗಳು ಬೇಕಾಗಿದ್ದವು; ಅವುಗಳನ್ನು ಅಂತಸ್ಥವಾಗಿ ಆತನು ಇನ್ನೊಂದರಲ್ಲಿ ಪಡೆದ. ಆತನಿಗೆ ಕಿವಿಗಳು ಅಗತ್ಯವಿದ್ದವು; ಅವುಗಳನ್ನು ಥಟ್ಟನೆ ಅಲ್ಲಿ ಹೊಸ ಜೀವನಕ್ಕೆ ಪೂರಕವಾಗಿ ಪಡೆದ. ಗರ್ಭಾವಸ್ಥೆಯಲ್ಲಿ ಈ ಪ್ರಪಂಚಕ್ಕೆ ಅಗತ್ಯವುಳ್ಳ ಶಕ್ತಿಯನ್ನು ಆತನಿಗೆ ದಯಪಾಲಿಸಲಾಯಿತು. ಆ ಪ್ರಪಂಚದಲ್ಲಿ ಅವನು ಈ ಪ್ರಪಂಚಕ್ಕೆ ತಯಾರಿ ಮಾಡಿಕೊಂಡನು, ಮತ್ತು ಅವನು ಈ ಪ್ರಪಂಚವನ್ನು ಪ್ರವೇಶಿಸಿದಾಗ ಅವನಿಗೆ ಬೇಕಾದ ಎಲ್ಲಾ ಶಕ್ತಿಗಳು ಮತ್ತು ಎಲ್ಲಾ ಅಂಗಗಳನ್ನು ಹೊಂದಿದನು ಮತ್ತು ಈ ಪ್ರಪಂಚದಲ್ಲಿ ಈ ಜೀವನಕ್ಕೆ ಅಗತ್ಯವಾದ ಎಲ್ಲಾ ಅಂಗ ಮತ್ತು ಅಂಗಾಗಗಳನ್ನು ಸಂಪಾದಿಸಿಕೊಂಡಿರುವುದನ್ನು ನೋಡಿದ್ದಾನೆ. ಆದುದರಿಂದ ಈ ಪ್ರಪಂಚದಲ್ಲಿ ಆತನು ಮುಂದಿನ ಪ್ರಪಂಚದ ಜೀವನಕ್ಕೆ ಬೇಕಾದ ತಯಾರಿಯನ್ನು ಮಾಡಬೇಕಾಗುತ್ತದೆ.**

**ದೈವೀ ಸಾಮ್ರಾಜ್ಯಕ್ಕೆ ಅಗತ್ಯವುಳ್ಳದ್ದನ್ನು ಆತ ಇಲ್ಲೇ ಪಡೆಯಬೇಕು. ಈ ಪ್ರಪಂಚದಾವಸ್ಥೆಗೆ ಬೇಕಾದ ಶಕ್ತಿಗಳನ್ನು ಗರ್ಭಾವಸ್ಥೆಯ ಪ್ರಪಂಚದಲ್ಲಿ ಗಳಿಸಿಕೊಂಡ ಹಾಗೆ ದಿವ್ಯ ಸಾಮ್ರಾಜ್ಯಕ್ಕೆ ಅನಿವಾರ್ಯವಾಗಿರುವುದನ್ನು — ಎಲ್ಲಾ ದಿವ್ಯ ಶಕ್ತಿಯನ್ನು ಈ ಪ್ರಪಂಚದಲ್ಲೇ ಪಡೆಯಬೇಕು."[14]**

1. ಕೆಳಗಿನವು ನಿಜವೋ ಅಲ್ಲವೋ ಎಂದು ನಿರ್ಧರಿಸಿ**:**

   _______ ಈ ಪ್ರಪಂಚಕ್ಕೆ ಬೇಕಾದ ಎಲ್ಲಾ ಶಕ್ತಿಗಳನ್ನು ಗರ್ಭದ ಪ್ರಪಂಚದಲ್ಲಿ ಪಡೆದುಕೊಳ್ಳಲಾಗುತ್ತದೆ.

   _______ ಮುಂದಿನ ಪ್ರಪಂಚದ ಜೀವನಕ್ಕಾಗಿ ತಮ್ಮನ್ನು ತಾವು ಸಿದ್ಧ ಪಡಿಸಿಕೊಳ್ಳುವ ಅಗತ್ಯವಿಲ್ಲ.

   _______ (ದೇವರ) ಸಾಮ್ರಾಜ್ಯಕ್ಕೆ ಬೇಕಾದುದನ್ನು ಅಲ್ಲಿಯೇ ಪಡೆಯಬೇಕು.

   _______ ಮುಂದಿನ ಪ್ರಪಂಚದ ಜೀವನಕ್ಕೆ ಅಗತ್ಯವಾದ ಶಕ್ತಿಯನ್ನು ಪಡೆದುಕೊಳ್ಳುವುದು ಈ ಜೀವನದ ಉದ್ದೇಶ.

   _______ ಒಬ್ಬನು ಸತ್ತಾಗ ಮತ್ತು ದೈವೀ ಸಾಮ್ರಾಜ್ಯಕ್ಕೆ ಹೋದಾಗ ಅವನ ನಿಜವಾದ ಜೀವನ ಪ್ರಾರಂಭವಾಗುತ್ತದೆ.

   _______ ನಿಜವಾದ ಜೀವನವು ಈ ಪ್ರಪಂಚದಲ್ಲಿ ಪ್ರಾರಂಭವಾಗುತ್ತದೆ ಮತ್ತು ದೈಹಿಕ ಮರಣದ ನಂತರವೂ ಮುಂದುವರಿಯುತ್ತದೆ.

2. ಗರ್ಭದ ಪ್ರಪಂಚದಲ್ಲಿ ಮನುಷ್ಯನು ಪಡೆಯುವ ಕೆಲವು ಸಾಮರ್ಥ್ಯಗಳು ಯಾವುವು? ______

   ________________________________________________

   ________________________________________________

3. ಮರಣಾ ನಂತರದ ಜೀವನಕ್ಕಾಗಿ ಇಲ್ಲಿ ಪಡೆಯಬೇಕಾದ ಕೆಲವು ಉಡುಗೊರೆಗಳು (ಪ್ರತಿಭೆಗಳು) ಯಾವುವು?________________________________________

   ________________________________________________

   ________________________________________________

# ವಿಭಾಗ 10

ಬಹಾಉಲ್ಲಾರವರು ಘೋಷಿಸಿದ್ದಾರೆ:

"**ಈ ದಿನದಲ್ಲಿ ಮನುಷ್ಯನ ಕರ್ತವ್ಯವೇ ಆತನಿಗೆ ದೇವರು ಸುರಿಸುತ್ತಿರುವ ಅನುಗ್ರಹದ ಪ್ರವಾಹದಲ್ಲಿ ಪಾಲನ್ನು ಪಡೆಯುವುದಾಗಿದೆ. ಆದುದರಿಂದ ಯಾರ ಪಾತ್ರೆ ದೊಡ್ಡದು ಅಥವಾ ಚಿಕ್ಕದು ಎಂದು ಪರಿಗಣಿಸದಿರಲಿ. ಕೆಲವರ ಪಾಲು ಮನುಷ್ಯನ ಬೊಗಸೆಯಷ್ಟೇ ಇರಬಹುದು, ಇನ್ನೊಬ್ಬರ ಪಾಲು ಒಂದು ಪಾನ ಪಾತ್ರೆಯಷ್ಟು ಇರಬಹುದು, ಇನ್ನೂ ಕೆಲವರದು ಗ್ಯಾಲನ್‌ನಷ್ಟು ಅಳತೆ ಇರಬಹುದು.**"[15]

1. ಮೇಲಿನ ಉದ್ಧರಣದ ಬೆಳಕಿನಲ್ಲಿ, ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ:

   a. ಈ ದಿನದಲ್ಲಿ ಪ್ರತಿಯೊಬ್ಬ ಮನುಷ್ಯನ ಕರ್ತವ್ಯವೇನು? __________________________

   ________________________________________________

b. ದೇವರಿಂದ ನೀವು ಪಡೆದ ಕೆಲವು ಅನುಗ್ರಹಗಳು ಯಾವುವು? ______________________

________________________________________________________________

________________________________________________________________

c. ಮೇಲಿನ ಉದ್ಧರಣದಲ್ಲಿ "ಪಾತ್ರೆ" ಎಂಬ ಪದವು ಯಾವುದನ್ನು ಉಲ್ಲೇಖಿಸುತ್ತದೆ? ______

________________________________________________________________

d. ನಾವು ನಮಗೆ ಅನುಗ್ರಹಿಸಲ್ಪಟ್ಟ ಸಾಮರ್ಥ್ಯವನ್ನು "ದೊಡ್ಡದು ಅಥವಾ ಚಿಕ್ಕದು" ಎಂದು ಏಕೆ ಪರಿಗಣಿಸಬಾರದು? ________________________________________________

________________________________________________________________

________________________________________________________________

________________________________________________________________

e. ದೇವರ ಅನುಗ್ರಹ ನಮ್ಮ ಭಾಗವನ್ನು ಪಡೆಯುವಲ್ಲಿ ತಡೆಯುವ ಕೆಲವು ವಿಷಯಗಳು ಯಾವುವು? ________________________________________________________

________________________________________________________________

________________________________________________________________

________________________________________________________________

2. ಕೆಳಗೆ ಕೊಟ್ಟಿರುವುದರಲ್ಲಿ ಯಾವುವು ನಿಜ?

_______ ನಮ್ಮ ಸಾಮರ್ಥ್ಯದ "ದೊಡ್ಡತನ ಅಥವಾ ಸಣ್ಣತನ" ನಾವು ಎಷ್ಟು ಬುದ್ಧಿವಂತರೆಂದು ಸೂಚಿಸುತ್ತದೆ.

_______ ದೇವರ ಸೇವೆ ಮಾಡಲು, ನಾವು ನಮ್ಮ ದೌರ್ಬಲ್ಯಗಳನ್ನು ಮರೆತು ಆತನ ಮೇಲೆ ಸಂಪೂರ್ಣ ನಂಬಿಕೆಯನ್ನು ಇಡಬೇಕು.

_______ ಈ ಜಗತ್ತಿನಲ್ಲಿ ದೇವರು ನಮಗೆ ದಯಪಾಲಿಸಿದ ಸಾಮರ್ಥ್ಯಗಳನ್ನು ನಾವು ಅಭಿವೃದ್ಧಿ ಪಡಿಸದಿದ್ದರೆ, ನಾವು ಮುಂದಿನ ಜಗತ್ತಿಗೆ ಬಂದಾಗ ನಮ್ಮ ಆತ್ಮಗಳು ದುರ್ಬಲವಾಗುತ್ತವೆ.

# ವಿಭಾಗ 11

ಬಹಾಉಲ್ಲಾರವರು ಹೇಳುತ್ತಾರೆ:

**"ಆತ್ಮದ ಸ್ವಭಾವದ ಬಗ್ಗೆ ನನ್ನನ್ನು ನೀವು ಕೇಳಿದಿರಿ. ಆತ್ಮ ಎಂಬುದು ದೇವರ ಕುರುಹು, ಅದು ಸ್ವರ್ಗೀಯ ರತ್ನ, ಯಾವುದರ ನೈಜತೆಯನ್ನು ಮಾನವರಲ್ಲಿ ಅತಿ ಪಂಡಿತರಾದವರೂ ಅರಿಯಲು ವಿಫಲರಾಗಿರುವರು, ಅಲ್ಲದೆ ದೇವರ ನಿಗೂಢತೆಯನ್ನು ಯಾವ ಮತಿಯೂ, ಅದೆಷ್ಟೇ ತೀಕ್ಷ್ಣವಾಗಿದ್ದರೂ ಭೇಧಿಸಲು ಸಾಧ್ಯವಿಲ್ಲ ಎಂಬುದನ್ನು ನೀನು ನಿಜವಾಗಿಯೂ ತಿಳಿ. ಸೃಷ್ಟಿಯಾದವುಗಳಲ್ಲೆಲ್ಲಾ ಸೃಷ್ಟಿಕರ್ತನ ಶ್ರೇಷ್ಠತೆಯನ್ನು ಮೊದಲು ಘೋಷಿಸಿದುದೇ ಅದು, ಆತನ ವೈಭವವನ್ನು ಗುರುತಿಸಿರುವುದರಲ್ಲಿ ಅದೇ ಮೊದಲಿನದು. ಆತನ ಸತ್ಯಕ್ಕೆ ಅಂಟಿಕೊಂಡಿರುವದರಲ್ಲಿ ಮತ್ತು ಆತನೆದುರು ಉಪಾಸನಾ ಭಾವದಿಂದ ತಲೆಬಾಗಿರುವುದರಲ್ಲೆಲ್ಲಾ ಅದು ಮೊದಲಿನದು."**[16]

1. ಕೆಳಗಿನ ವಾಕ್ಯಗಳಲ್ಲಿ ಬಿಟ್ಟ ಸ್ಥಳಗಳನ್ನು ತುಂಬಿ:

a. ಆತ್ಮವು ದೇವರ ಒಂದು ____________________ .

b. ಆತ್ಮವು ಒಂದು ____________ , ಯಾವುದರ _________________________ ಅರಿಯಲು ವಿಫಲರಾಗಿರುವರು, ಅಲ್ಲದೆ ___________ ಯಾವ ಮತಿಯೂ, ಅದೆಷ್ಟೇ ತೀಕ್ಷ್ಣವಾಗಿದ್ದರೂ, _______________ .

c. ಸೃಷ್ಟಿಯಾದವುಗಳಲ್ಲೆಲ್ಲಾ ಸೃಷ್ಟಿಕರ್ತನ ______________ ಘೋಷಿಸಿದುದೇ ಆತ್ಮವು ಮತ್ತು ______________ ಘೋಷಿಸಿರುವುದು __________ .

d. ಆತನ ವೈಭವವನ್ನು ______________________ ಆತ್ಮ.

e. ಆತನ ಸತ್ಯಕ್ಕೆ ______________ ಮೊದಲಿನದು ಆತ್ಮ.

f. ಆತನೆದುರು ಉಪಾಸನಾ ಭಾವದಿಂದ ____________ ಅದು ಮೊದಲಿನದು.

2. ಕೆಳಗಿನವುಗಳಲ್ಲಿ ಯಾವು ನಿಜ?

_______ "ಬೇಧಿಸುವುದು" ಎಂದರೆ ಕಂಡುಹಿಡಿಯುವುದು.

_______ ಸೃಷ್ಟಿಯಾದ ಎಲ್ಲಾ ವಸ್ತುಗಳ ಪೈಕಿ, ದೇವರನ್ನು ಮೊದಲು ಗುರುತಿಸುವುದು ಮಾನವ ಮೆದುಳು.

_______ "ತೀಕ್ಷ್ಣ" ಎಂದರೆ ಚೂಪು.

_______ ಕಲಿತ ವ್ಯಕ್ತಿಯು ಆತ್ಮದ ರಹಸ್ಯವನ್ನು ಅರ್ಥಮಾಡಿಕೊಳ್ಳುತ್ತಾನೆ.

_______ ಮಹಾನ್ ದಾರ್ಶನಿಕರು ಮಾತ್ರ ದೇವರ ಶ್ರೇಷ್ಠತೆಯನ್ನು ಘೋಷಿಸಬಲ್ಲರು.

_______ ಆತ್ಮದ ಬಗ್ಗೆ ಯೋಚಿಸುವುದು ಅಗತ್ಯವಲ್ಲ ಏಕೆಂದರೆ ಅದನ್ನು ನಾವು ಎಂದಿಗೂ ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ.

# ವಿಭಾಗ 12

ಬಹಾಉಲ್ಲಾರವರು ಘೋಷಿಸಿದ್ದಾರೆ:

**"ತನ್ನ ಮಹಾ ರೆಕ್ಕೆಗಳ ತುಂಬು ಬಲದೊಡನೆ ಸಂಪೂರ್ಣ ಮತ್ತು ಸಂತೋಷದಾಯಕವೂ ಆದ ಆತ್ಮ ವಿಶ್ವಾಸದೊಂದಿಗೆ ಸ್ವರ್ಗದ ಅಗಾಧತೆಯಲ್ಲಿ ಹಾರಾಡುವ ಹಕ್ಕಿಯಂತಿದ್ದೀರಿ ನೀವು, ಆದರೆ ತನ್ನ ಹಸಿವನ್ನು ನೀಗಿಸಲು ಅದು ಹಿಂತಿರುಗಿ, ಕೆಳಗಿರುವ ನೀರು ಮಣ್ಣನ್ನೇ ಬಯಸಿ, ತನ್ನದೇ ಆಸೆ ಆಮಿಷಗಳ ಬಲೆಯಲ್ಲಿ ಸಿಕ್ಕು, ತಾನು ಬಂದೆತ್ತರದಲ್ಲಿ ಮತ್ತೆ ಹಾರಾಡಲು ಅಸಮರ್ಥವಾದುದನ್ನು ಕಂಡುಕೊಂಡಿತು. ಈ ತನಕ ಸ್ವರ್ಗೀಯ ನಿವಾಸಿಯಾಗಿದ್ದ ಆ ಹಕ್ಕಿ ತನ್ನ ಮಲಿನ ರೆಕ್ಕೆಗಳ ಮೇಲಿನ ಹೊರೆಯನ್ನು ಝಾಡಿಸಲಾರದೆ ಈಗ ಮಣ್ಣಿನಲ್ಲೇ ವಾಸ ಸ್ಥಳವನ್ನು ಹುಡುಕುವಂತಾಯಿತು. ಆದುದರಿಂದ, ಓ ನನ್ನ ಸೇವಕರೇ, ನನ್ನ ದಿವ್ಯ ಜ್ಞಾನದ ಸ್ವರ್ಗದಲ್ಲಿ ನಿಮ್ಮ ಹಾರಾಟಕ್ಕೆ ತಡೆಯಾಗುವಂತೆ ನಿಮ್ಮ ರೆಕ್ಕೆಗಳನ್ನು ಮೊಂಡುತನ ಮತ್ತು ನಿರರ್ಥಕ ಬಯಕೆಗಳ ಮಣ್ಣಿನಿಂದ ಮಲಿನಗೊಳಿಸದಿರಿ ಮತ್ತು ಅವುಗಳನ್ನು ದ್ವೇಷಾಸೂಯೆಗಳ ಧೂಳಿನಿಂದ ಕಲೆಯಾಗುವಂತೆ ಮಾಡದಿರಿ."**[17]

1. ಕೆಳಗಿನ ವಾಕ್ಯಗಳನ್ನು ಪೂರ್ಣಗೊಳಿಸಿ.

   a. ಬಹಾಉಲ್ಲಾರವರು ತಮ್ಮ ಉದ್ಧರಣದಲ್ಲಿ ಉಲ್ಲೇಖಿಸಿರುವ ಹಕ್ಕಿ ________________ .

   b. ಈ ಹಕ್ಕಿಯು ______________ ನಿವಾಸಿ.

   c. ಹಕ್ಕಿಯ ರೆಕ್ಕೆಗಳು ಮಲಿನಗೊಂಡರೆ ಅದು ತನ್ನ ಮನೆಯನ್ನು ____________ ಹುಡುಕುವಂತಾಯಿತು.

2. ಈಗ ಕೆಳಗಿರುವ ಪ್ರಶ್ನೆಗಳಿಗೆ ಉತ್ತರಿಸಿ:

   a. "ರೆಕ್ಕೆ" ಗಳು ಹೇಗೆ "ಮಲಿನ" ಗೊಳ್ಳುತ್ತವೆ? ______________________________
   ______________________________________________________
   ______________________________________________________

   b. ಹಕ್ಕಿಯ ರೆಕ್ಕೆಗಳ ಮೇಲೆ "ನೀರು ಮತ್ತು ಮಣ್ಣು" ಇವುಗಳಂತೆ ಹೊರೆಯಾಗಿ ಭಾರವಾಗುವ ವಸ್ತುಗಳು ಮತ್ತಿನ್ಯಾವು? ______________________________
   ______________________________________________________
   ______________________________________________________

   c. ದಿವ್ಯ ಜ್ಞಾನದ ಸ್ವರ್ಗದಲ್ಲಿ ಹಾರಾಡುವುದನ್ನು ತಡೆಗಟ್ಟುವ ಕೆಲವು ವಸ್ತುಗಳು ಯಾವುವು? ______________________________
   ______________________________________________________
   ______________________________________________________

   d. ಈ ಪ್ರಪಂಚದ ಧೂಳಿಗಾಗಿ ಸ್ವರ್ಗೀಯ ಮನೆಯನ್ನು ಒಂದು ಆತ್ಮ ಏಕೆ ವಿನಿಮಯ ಮಾಡಿಕೊಳ್ಳಬೇಕು? ______________________________
   ______________________________________________________
   ______________________________________________________

3. ಕೆಳಗಿನ ಹೇಳಿಕೆಗಳು ನಿಜವೇ ಎಂದು ನಿರ್ಧರಿಸಿ:

   ______ ಪ್ರಾಪಂಚಿಕ ವಸ್ತುಗಳಿಗೆ ಅಂಟಿಕೊಳ್ಳುವುದು ನಮ್ಮ ಆಧ್ಯಾತ್ಮಿಕ ಪ್ರಗತಿಗೆ ಅಡ್ಡಿಯಾಗುತ್ತವೆ.

   ______ ನಮ್ಮ ದಾರಿ ತಪ್ಪುವಿಕೆ ಮತ್ತು ವ್ಯರ್ಥವಾದ ಆಸೆಗಳು ದೈವಿಕ ಜ್ಞಾನದ ಸ್ವರ್ಗದಲ್ಲಿ ಹಾರುವುದನ್ನು ತಡೆಯುತ್ತದೆ.

   ______ ಅಸೂಯೆ ಮತ್ತು ದ್ವೇಷವು ಮನುಷ್ಯನ ಸ್ವಾಭಾವಿಕ ಲಕ್ಷಣಗಳು ಮತ್ತು ಆತ್ಮಕ್ಕೆ ಹೊರೆಯಾಗುವುದಿಲ್ಲ.

   ______ ಈ ಪ್ರಪಂಚದ ವಿಷಯಗಳಿಂದ ನಮ್ಮನ್ನು ನಾವು ಬೇರ್ಪಡಿಸುವ ಮೂಲಕ, ಸ್ವರ್ಗದ ವಿಶಾಲತೆಯಲ್ಲಿ ಹಾರಾಡುವುದನ್ನು ತಡೆಗಟ್ಟುವ ಹೊರೆಯಿಂದ ನಮ್ಮನ್ನು ನಾವು ದೂರವಿಡಬಹುದು.

   ______ ಆತ್ಮದ ಮನೆಯು ಈ ಪ್ರಪಂಚದಲ್ಲಿದೆ.

## ವಿಭಾಗ 13

ಬಹಾಉಲ್ಲಾರವರು ಹೇಳುತ್ತಾರೆ:

**“ಜಗತ್ತನ್ನು ಮತ್ತು ಅದರಲ್ಲಿರುವ ಎಲ್ಲ ಜೀವರಾಶಿಯನ್ನು ಹಾಗೂ ಚರಾಚರಗಳನ್ನು ಸೃಷ್ಟಿಸಿ, ತನ್ನ ಅನಿರ್ಭಂಧಿತ ಪರಮ ಇಚ್ಛಾಶಕ್ತಿಯ ನೇರ ಪ್ರಯೋಗದಿಂದ, ಆತನನ್ನು ಅರಿಯುವ ಮತ್ತು ಪ್ರೀತಿಸುವ ಅನನ್ಯವಾದ ಶ್ರೇಷ್ಠತೆ ಹಾಗೂ ಸಾಮರ್ಥ್ಯವನ್ನು ದಯಪಾಲಿಸಲು ಮಾನವನನ್ನು ಆಯ್ದು ಕೊಂಡನು — ಆ ಸಾಮರ್ಥ್ಯವು ಅಂತಃಪ್ರೇರಣೆಯನ್ನು ಉತ್ಪಾದಿಸುವ ಮತ್ತು ಇಡೀ ಸೃಷ್ಟಿಗೆ ಆಧಾರವಾಗಿರುವ ಪ್ರಾಥಮಿಕ ಉದ್ದೇಶವೆಂದು ಪರಿಗಣಿಸಬೇಕಾದ ಸಾಮರ್ಥ್ಯ.... ಪ್ರತಿಯೊಂದು ಸೃಷ್ಟಿಯ ಅಂತರಿಕ ನೈಜತೆಯ ಮೇಲೆ ಆತನು ತನ್ನ ಒಂದು ನಾಮದ ಬೆಳಕನ್ನು ಬೀರಿ ಒಂದು ಗುಣದ ವೈಭವವನ್ನು ಪಡೆಯುವಂತೆ ಮಾಡಿದನು. ಆದರೆ, ಆತನು ಮಾನವ ನೈಜತೆಯ ಮೇಲೆ ತನ್ನೆಲ್ಲಾ ನಾಮ ಹಾಗೂ ಗುಣಗಳ ತೇಜಸ್ಸನ್ನು ಕೇಂದ್ರೀಕರಿಸಿ ಸ್ವತಃ ತನ್ನ ಕನ್ನಡಿಯನ್ನಾಗಿ ಮಾಡಿದನು. ಸಮಸ್ತ ಸೃಷ್ಟಿಗಳಲ್ಲಿ ಮಾನವ ಮಾತ್ರ ಈ ಒಂದು ನಿರಂತರ ಅನುಗ್ರಹ ಮತ್ತು ಔದಾರ್ಯಕ್ಕಾಗಿ ಪ್ರತ್ಯೇಕಿಸಲ್ಪಟ್ಟಿರುವನು.”[18]**

1. ಕೆಳಗೆ ಖಾಲಿ ಬಿಟ್ಟ ಜಾಗವನ್ನು ತುಂಬಿ.

   a. ದೇವರು ಆತನನ್ನು ____________ ಮತ್ತು ___________ ಅನನ್ಯವಾದ ಶ್ರೇಷ್ಠತೆ ಹಾಗು ಸಾಮರ್ಥ್ಯವನ್ನು ದಯಪಾಲಿಸಲು ಮಾನವನನ್ನು ಆಯ್ದು ಕೊಂಡನು.

   b. _____________ ಸೃಷ್ಟಿಯ ಅಂತರಿಕ ನೈಜತೆಯ ಮೇಲೆ ಆತನು _______________ _________________________ ವೈಭವವನ್ನು ಪಡೆಯುವಂತೆ ಮಾಡಿದನು.

   c. ಆತನು ಮಾನವ ನೈಜತೆಯ ಮೇಲೆ ________________________ ________________________ ಸ್ವತಃ ತನ್ನ ಕನ್ನಡಿಯನ್ನಾಗಿ ಮಾಡಿದನು.

2. ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ:

   a. ದೇವರ ಕೆಲವು ಗುಣ ಲಕ್ಷಣಗಳನ್ನು ಹೆಸರಿಸಬಲ್ಲಿರಾ? ______________________________
   ________________________________________________________________________________
   ________________________________________________________________________________

   b. ದೇವರ ಯಾವ ಗುಣಲಕ್ಷಣಗಳನ್ನು ಮನುಷ್ಯನ ಆತ್ಮವು ಪ್ರತಿಬಿಂಬಿಸಬಹುದು? ______
   ________________________________________________________________________________
   ________________________________________________________________________________

   c. ಈ ಗುಣಲಕ್ಷಣಗಳನ್ನು ಹೇಗೆ ವ್ಯಕ್ತಗೊಳಿಸಬಹುದು? ______________________________
   ________________________________________________________________________________
   ________________________________________________________________________________

   d. ಯಾವ ವಿಶೇಷವಾದ ಅನುಗ್ರಹಕ್ಕೆ ಮನುಷ್ಯನನ್ನು ಪ್ರತ್ಯೇಕಿಸಲಾಗಿದೆ? ______________
   ________________________________________________________________________________
   ________________________________________________________________________________

3. ಕೆಳಗೆ ಕೊಟ್ಟಿರುವ ಇವುಗಳಲ್ಲಿ ಯಾವು ನಿಜ?

_______ ಮನುಷ್ಯನು ಮಿಕ್ಕೆಲ್ಲ ಸೃಷ್ಟಿಗಿಂತ ಭಿನ್ನವಾಗಿಲ್ಲ.

_______ ದೇವರನ್ನು ಅರಿಯುವ ಮತ್ತು ಪ್ರೀತಿಸುವ ಸಾಮರ್ಥ್ಯವು ಅಂತಃಪ್ರೇರಣೆಯನ್ನು ಉತ್ಪಾದಿಸುವ ಮತ್ತು ಇಡೀ ಸೃಷ್ಟಿಗೆ ಆಧಾರವಾಗಿರುವ ಪ್ರಾಥಮಿಕ ಉದ್ದೇಶ.

_______ ಸೃಷ್ಟಿಯಾದ ಪ್ರತಿಯೊಂದು ವಸ್ತುವಿನ ವಾಸ್ತವವೆಂದರೆ ದೇವರ ಒಂದು ಗುಣಲಕ್ಷಣವನ್ನು ಸ್ವೀಕರಿಸುವುದು.

_______ ಮಾನವ ಆತ್ಮವು ದೇವರ ಗುಣಲಕ್ಷಣಗಳನ್ನು ಪ್ರತಿಬಿಂಬಿಸಬಹುದು.

# ವಿಭಾಗ 14

ಬಹಾಉಲ್ಲಾರವರು ನಮಗೆ ಹೇಳುತ್ತಾರೆ:

**"ಮೊಂಬತ್ತಿಯಲ್ಲಿ ಬೆಳಕಿನ ಜ್ವಾಲೆಯು ಅಡಗಿರುವಂತೆ ಹಾಗೂ ದೀಪದಲ್ಲಿ ಅದರ ಬೆಳಕಿನ ಕಿರಣಗಳು ಸುಪ್ತವಾಗಿರುವಂತೆ, ದಿನ ನಕ್ಷತ್ರನ ದಿವ್ಯಾನುಗ್ರಹ ಮತ್ತು ಸ್ವರ್ಗೀಯ ಮಾರ್ಗದರ್ಶನವು ಮನುಷ್ಯನ ವಾಸ್ತವಿಕತೆಗೆ ದಯಪಾಲಿಸಿದ ಶಕ್ತಿಗಳು ಮಾನವನಲ್ಲಿ ಸುಪ್ತವಾಗಿವೆ. ಕನ್ನಡಿಯನ್ನು ಮುಚ್ಚಿದ ಧೂಳು ಮತ್ತು ಕಲ್ಮಶಗಳು ಸೂರ್ಯಕಿರಣಗಳ ಪ್ರತಿಫಲನವನ್ನು ಮರೆಮಾಡುವಂತೆ, ಪ್ರಾಪಂಚಿಕ ಬಯಕೆಗಳು ಈ ಶಕ್ತಿಯ ಕಾಂತಿಯನ್ನು ಮುಸುಕುಮಾಡಬಹುದು. ಮೊಂಬತ್ತಿಯಾಗಲಿ ಅಥವಾ ದೀಪವಾಗಲಿ ತಾವೇ ಸ್ವಂತವಾಗಿ ನೆರವಿಲ್ಲದೆ ಬೆಳಗಲಾರವು, ಅದೇ ರೀತಿ ಕನ್ನಡಿಯು ಸಹ ತನ್ನ ಮೇಲಿನ ಕೊಳೆಯಿಂದ ಸ್ವತಃ ಮುಕ್ತವಾಗಲಾರದು. ದೀಪಕ್ಕೆ ಕಿಡಿಯನ್ನು ಹಚ್ಚದಿದ್ದರೆ ದೀಪ ಎಂದೂ ಉರಿಯಲಾರದು ಮತ್ತು ಕನ್ನಡಿಯ ಮೇಲಿನ ಕೊಳೆಯನ್ನು ಒರೆಸದಿದ್ದರೆ ಅದು ಸೂರ್ಯ ಕಿರಣಗಳನ್ನು ಎಂದೂ ಪ್ರತಿಫಲಿಸಲಾರದು ಮತ್ತು ಅದರ ಪ್ರಕಾಶ ಮತ್ತು ವೈಭವವನ್ನು ಪ್ರತಿಬಿಂಬಿಸಲಾರದು ಎಂಬುದು ಅತಿ ಸ್ಪಷ್ಟ ಮತ್ತು ಪ್ರಾಮಾಣಿಕವಾಗಿದೆ."**[19]

1. "ಸುಪ್ತ" ಎಂಬ ಪದದ ಅರ್ಥವೇನು? ______________________________

______________________________

2. ಮಾನವನ ಆತ್ಮದಲ್ಲಿ ಯಾವ ಸಾಮರ್ಥ್ಯಗಳು ಸುಪ್ತವಾಗಿವೆ? ______________________________

______________________________

______________________________

3. ದೀಪಕ್ಕೆ ಯಾವ ಸಾಮರ್ಥ್ಯವಿದೆ? ______________________________

4. ಕನ್ನಡಿಗೆ ಯಾವ ಸಾಮರ್ಥ್ಯವಿದೆ? ______________________________

5. ದೀಪವು ಬೆಳಕನ್ನು ಕೊಡಬೇಕಾದರೆ ಅದಕ್ಕೆ ನಾವೇನು ಮಾಡಬೇಕು? ______________________________

______________________________

6. ಕನ್ನಡಿಯು ಬೆಳಕನ್ನು ಪ್ರತಿಬಿಂಬಿಸಬೇಕಾದರೆ ಅದಕ್ಕೆ ನಾವೇನು ಮಾಡಬೇಕು? ____________

________________________________________________________________

7. ದೀಪ ಮತ್ತು ಕನ್ನಡಿ ತನ್ನಿಂದ ತಾನೇ ತಮ್ಮ ಸಾಮರ್ಥ್ಯವನ್ನು ವ್ಯಕ್ತ ಪಡಿಸಬಹುದೇ? ______

________________________________________________________________

8. ಈ ಎರಡು ಉದಾಹರಣೆಗಳನ್ನು ಮಾನವನ ಆತ್ಮದ ಸ್ಥಿತಿಗೆ ಹೇಗೆ ಸಂಬ ಧಿಸಬಹುದು? ______

________________________________________________________________

________________________________________________________________

________________________________________________________________

9. ಮಾನವನ ಆತ್ಮವು ತನ್ನ ಸಾಮರ್ಥ್ಯವನ್ನು ವ್ಯಕ್ತಪಡಿಸುವಂತೆ ಯಾರು ಮಾಡಬಹುದು? ___

________________________________________________________________

________________________________________________________________

# ವಿಭಾಗ 15

ಬಹಾಉಲ್ಲಾ ಹೇಳುತ್ತಾರೆ:

**“ಪುರಾತನ ಜೀವಿಯ ಜ್ಞಾನದ ದ್ವಾರವು ಈ ಹಿಂದೆಯೂ, ಮುಂದೆಯೂ ಮಾನವರೆದುರು ಮುಚ್ಚಿರುತ್ತದೆ.ಆತನ ಪವಿತ್ರ ಸಾನ್ನಿಧ್ಯಕ್ಕೆ ಯಾವ ಮನುಷ್ಯನ ಅರಿವೂ ಪ್ರವೇಶ ಪಡೆಯಲಾರದು.ಆದರೆ ಆತನ ಕರುಣೆಯ ಸಂಕೇತವಾಗಿ ಹಾಗೂ ಆತನ ಪ್ರೇಮ ಪೂರ್ವಕ ದಯೆಯ ಪ್ರಮಾಣವಾಗಿ, ಆತನ ದಿವ್ಯ ಮಾರ್ಗದರ್ಶನದ ದಿನ ನಕ್ಷತ್ರಗಳನ್ನು, ಆತನ ದಿವ್ಯ ಐಕ್ಯತೆಯ ಚಿಹ್ನೆಗಳನ್ನು, ಮಾನವರಿಗಾಗಿ ಪ್ರಕಟಿಸಿ, ಈ ಪುಣ್ಯ ಜೀವಿಗಳ ಜ್ಞಾನವನ್ನು ಆತನದೇ ಜ್ಞಾನಕ್ಕೆ ತದ್ರೂಪವಾಗಿ ವಿಧಿಸಿರುವನು. ಯಾರು ಅವರನ್ನು ಗುರುತಿಸುತ್ತಾರೋ ಅವರು ದೇವರನ್ನು ಗುರುತಿಸಿದಂತೆ. ಅವರ ಕರೆಗೆ ಯಾರು ಕಿವಿಗೊಡುತ್ತಾರೋ ಅವರು ದೇವರ ಕರೆಗೆ ಕಿವಿ ಕೊಟ್ಟಂತೆ ಮತ್ತು ಅವರ ದಿವ್ಯ ದರ್ಶನದ ಸತ್ಯದ ಪ್ರತಿಪಾದನೆ ಯಾರು ಮಾಡುತ್ತಾರೋ ಅವರು ದೇವರ ಸತ್ಯಕ್ಕೇ ಪ್ರತಿಪಾದನೆ ಮಾಡಿದಂತೆ. ಅವರಿಂದ ಯಾರು ದೂರ ಸರಿಯುತ್ತಾರೋ ಅವರು ದೇವರಿಂದಲೇ ದೂರ ಸರಿದಂತೆ ಮತ್ತು ಯಾರು ಅವರಲ್ಲಿ ನಂಬಿಕೆ ಇಡುವುದಿಲ್ಲವೋ ಅವರು ದೇವರಲ್ಲಿ ನಂಬಿಕೆ ಇಡದವರಂತೆ ಆಗುವರು. ಅವರಲ್ಲಿ ಪ್ರತಿಯೊಬ್ಬರೂ ಈ ಪ್ರಪಂಚವನ್ನು ಮೇಲಿನ ಸಾಮ್ರಾಜ್ಯದೊಂದಿಗೆ ಸಂಪರ್ಕಿಸುವ ದೈವ ದಾರಿಯಂತೆ ಹಾಗೂ ಭೂಮಿ ಮತ್ತು ಸ್ವರ್ಗಗಳ ಆಧಿಪತ್ಯದಲ್ಲಿರುವ ಪ್ರತಿಯೊಬ್ಬರಿಗೂ ಆತನ ಸತ್ಯದ ಉತ್ಕ ಷ್ಟತೆಯ ಮಟ್ಟವಿದ್ದಂತೆ. ಮಾನವರ ಮಧ್ಯೆ ಅವರು ದೇವರ ಅವತಾರಗಳು, ಆತನ ಸತ್ಯದ ಪ್ರತಿಪಾದಕರು, ಆತನ ವೈಭವದ ಕುರುಹುಗಳಾಗಿರುವರು.”[20]**

1. ಮೇಲಿನ ಉದ್ಧರಣಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಮುಂಬರುವ ಪ್ರಶ್ನೆಗಳನ್ನು ಉತ್ತರಿಸಿ:

   a. ದೇವರನ್ನು ನೇರವಾಗಿ ಅರಿಯಲು ನಮಗೆ ಸಾಧ್ಯವಿದೆಯೇ? ________________________

   b. ಹಾಗಾದರೆ ನಾವು ದೇವರನ್ನು ಅರಿಯುವುದು ಹೇಗೆ? ____________________________

   ____________________________________________________________

c. ದಿವ್ಯ ಮಾರ್ಗದರ್ಶನದ ದಿನ ನಕ್ಷತ್ರಗಳಲ್ಲಿ ಕೆಲವನ್ನು ಹೆಸರಿಸಿ? ____________________
________________________________________________________________________

d. ದೇವರ ಅವತಾರಗಳು ಹೇಳಿದಂತೆ ಕೇಳಿದವರು ಯಾರ ಮಾತು ಕೇಳಿದಂತೆ? ___________
________________________________________________________________________

e. ದೇವರ ಅವತಾರಗಳ ಕರೆಗೆ ನಾವು ಕಿವಿಗೊಡದಿದ್ದರೆ ನಾವು ಯಾರಿಂದ ದೂರ ತಿರುಗಿದಂತೆ? ____________________________________________________________

2. ಕೆಳಗಿನ ವಾಕ್ಯಗಳನ್ನು ಪೂರ್ತಿಗೊಳಿಸಿರಿ:

a. ಪುರಾತನ ಜೀವಿಯ ಜ್ಞಾನದ ದ್ವಾರವು ಈ ಹಿಂದೆಯೂ ಮುಂದೆದಿಗೂ _______________ .

b. ___________________ ಯಾವ ಮನುಷ್ಯನ ಅರಿವೂ ಪ್ರವೇಶ ಪಡೆಯಲಾರದು.

c. ದೇವರು ತನ್ನ ಅವತಾರಗಳನ್ನು ಆತನ ________________________ ಸಂಕೇತವಾಗಿ ಕಳುಹಿಸಿಕೊಟ್ಟಿದ್ದಾನೆ.

d. ದೇವರ ಅವತಾರಗಳ ಜ್ಞಾನವು _______________________________________________ ಒಂದೇ ಆಗಿರುತ್ತದೆ.

e. ಯಾರು ಅವರನ್ನು ಗುರುತಿಸುತ್ತಾರೋ _______________________ .

f. ಯಾರು ಅವರ ಕರೆಗೆ ಕಿವಿಗೊಡುತ್ತಾರೋ ______________________________________
_______________________________________ .

g. ಅವರಲ್ಲಿ ಪ್ರತಿಯೊಬ್ಬರೂ ___________________________________________________
__________________________________________________________ ದೈವದಾರಿಯಂತೆ.

3. ಕೇಳಗೆ ಕೊಟ್ಟಿರುವುದರಲ್ಲಿ ಯಾವು ನಿಜ?

_______ ನಮ್ಮ ಪ್ರಯತ್ನಗಳ ಮೂಲಕ ಮಾತ್ರವೇ ನಾವು ಆಧ್ಯಾತ್ಮಿಕವಾಗಿ ಬೆಳೆಯಬಹುದು.

_______ ದೇವರು ನಮಗೆ ಒಂದು ಮನಸ್ಸನ್ನು ಕೊಟ್ಟಿದ್ದಾನೆ, ಮತ್ತು ಅದು ನಮ್ಮ ಪ್ರಗತಿಗೆ ಸಾಕು.

_______ ದೇವರ ಅವತಾರವನ್ನು ನಾವು ಗುರುತಿಸುವ ಮೂಲಕ ನಾವು ಆಧ್ಯಾತ್ಮಿಕವಾಗಿ ಪ್ರಗತಿಹೊಂದುತ್ತೇವೆ ಮತ್ತು ಹೆಚ್ಚಿನ ಪ್ರಯತ್ನವನ್ನು ಮಾಡಬೇಕಾಗಿಲ್ಲ.

_______ ದೇವರ ಅವತಾರವನ್ನು ಗುರುತಿಸುವುದರ ಮೂಲಕ ಮತ್ತು ಆತನ ಬೋಧನೆಗೆ ಅನುಗುಣವಾಗಿ ಬದುಕಲು ಪ್ರಯತ್ನಿಸುವ ಮೂಲಕ ನಾವು ಆಧ್ಯಾತ್ಮಿಕವಾಗಿ ಪ್ರಗತಿ ಹೊಂದುತ್ತೇವೆ.

_______ ನಾವು ದೇವರನ್ನು ನೇರವಾಗಿ ತಿಳಿದುಕೊಳ್ಳಬಹುದು.

_______ ಮನುಷ್ಯನು ದೇವರಂತೆಯೇ ಆಗಬಹುದು.

_______ ದೇವರು ಮಾನವನ ಗ್ರಹಿಕೆಗಿಂತ ಅತಿ ಎತ್ತರದಲ್ಲಿರುವನು.

_______ ಒಬ್ಬ ದೇವರ ಅವತಾರದ ನುಡಿಗಳನ್ನು ನಾವು ಕೇಳಿದಾಗ, ದೇವರ ಮಾತನ್ನು ಕೇಳಿದಂತಾಗುವುದು.

# ವಿಭಾಗ 16

ಬಹಾಉಲ್ಲಾರವರು ಘೋಷಿಸಿದ್ದಾರೆ:

**“ದೇವರ ಪ್ರವಾದಿಗಳು ಮತ್ತು ಸಂದೇಶವಾಹಕರನ್ನು ಮಾನವ ಕುಲವನ್ನು ಸತ್ಯದ ನೇರ ಹಾದಿಗೆ ಮಾರ್ಗದರ್ಶಿಸುವ ಏಕೈಕ ಉದ್ದೇಶಕ್ಕಾಗಿ ಕಳುಹಿಸಲಾಗಿದೆ. ಅವರ ಪ್ರಕಟಣೆಯ ಉದ್ದೇಶವು ಎಲ್ಲ ಮನುಷ್ಯರಿಗೆ ಶಿಕ್ಷಣ ನೀಡುವುದು, ಇದರಿಂದಾಗಿ ಮನುಷ್ಯರು ತಮ್ಮ ಸಾವಿನ ಸಮಯದಲ್ಲಿ, ಅತ್ಯಂತ ಶುದ್ಧತೆ ಮತ್ತು ಪಾವಿತ್ರ್ಯತೆಯಿಂದ ಹಾಗು ಸಂಪೂರ್ಣ ನಿರ್ಲಿಪ್ತತೆಯಿಂದ ಪರಮಾತ್ಮನ ಸಿಂಹಾಸನದತ್ತ ಸಾಗುವಂತಾಗಲಿ ಎಂದು.”[21]**

ಮತ್ತೊಂದು ವಾಕ್ಯವೃಂದದಲ್ಲಿ ಅವರು ಹೇಳುತ್ತಾರೆ:

**“ಮನುಷ್ಯನು ಪರಮ ತಾಯಿತವಿದ್ದಂತೆ. ಸರಿಯಾದ ವಿದ್ಯಭ್ಯಾಸದ ಕೊರತೆಯಿಂದಾಗಿ ಅಂತರ್ಗತವಾಗಿ ಆತನು ಏನನ್ನು ಪಡೆದುಕೊಂಡಿರುವನೋ ಅದರಿಂದ ವಂಚಿತನಾಗಿದ್ದಾನೆ. ದೇವರ ಮುಖದಿಂದ ಹೊರಟ ಒಂದು ಪದದಿಂದಾಗಿ ಆತನ ಸೃಷ್ಟಿಯಾಯಿತು; ಇನ್ನೊಂದು ಪದದಿಂದ ಆತನ ಶಿಕ್ಷಣದ ಮೂಲವನ್ನು ಗುರುತಿಸಲು ಮಾರ್ಗದರ್ಶನ ನೀಡಲಾಯಿತು; ಇನ್ನೊಂದು ಪದದಿಂದ ಆತನ ಸ್ಥಾನಮಾನ ಮತ್ತು ನಿರ್ದಿಷ್ಟ ಸ್ಥಾನವನ್ನು ಕಾಪಾಡಲಾಯಿತು. ಮಹಾ ಪುರುಷನು ಹೇಳುತ್ತಾನೆ: ಮನುಷ್ಯನನ್ನು ಬೆಲೆ ಕಟ್ಟಲಾರದ ವಜ್ರದ ಗಣಿಯಂತೆ ಪರಿಗಣಿಸಿ. ಶಿಕ್ಷಣವು ಮಾತ್ರ ಅದರ ನಿಧಿಯನ್ನು ಬಹಿರಂಗ ಪಡಿಸಲು ಕಾರಣವಾಗುವುದು, ಮತ್ತು ಮಾನವ ಜನಾಂಗ ಅದರಿಂದ ಪ್ರಯೋಜನ ಪಡೆಯುವಂತೆ ಮಾಡಬಲ್ಲದು. ಯಾರಾದರೂ ದೇವರ ದಿವ್ಯ ಇಚ್ಛಾನುಸಾರ ಪ್ರಕಟಿತ ಬರಹಗಳ ಕುರಿತು ಧ್ಯಾನ ಮಾಡಿದ್ದೇ ಆದರೆ, ಎಲ್ಲರೂ ಒಂದೇ ಆತ್ಮದವರಾಗಿರುವರೆಂದು ಪರಿಗಣಿಸಲ್ಪಡಲಿ ಅದರಿಂದ “ದೇವರದೇ ಸಾಮ್ರಾಜ್ಯ” ವೆಂಬ ಮುದ್ರೆಯು ಪ್ರತಿಯೊಂದು ಹೃದಯದ ಮೇಲೆ ಒತ್ತುವಂತಾಗಲೆದು ಮತ್ತು ದೈವಿಕ ಉದಾರತೆ, ಅನುಗ್ರಹ ಮತ್ತು ಕರುಣೆಗಳೆಂಬ ಬೆಳಕು ಮಾನವ ಜನಾಂಗವನ್ನು ಆವರಿಸುವಂತಾಗಲಿ ಎಂಬ ಅವರ ಉದ್ದೇಶವನ್ನು ಸುಲಭವಾಗಿ ಗುರುತಿಸುತ್ತಾನೆ.”[22]**

1. ಯಾವ ಉದ್ದೇಶಕ್ಕಾಗಿ ಪ್ರವಾದಿಗಳು ಮತ್ತು ಸಂದೇಶವಾಹಕರನ್ನು ಕಳುಹಿಸಲಾಯಿತು? ____

2. ಅವರ ಪ್ರಕಟಣೆಯ ಉದ್ದೇಶವೇನು? ____

3. “ತಾಯಿತ” ಎಂಬ ಪದದ ಅರ್ಥವೇನು? ____

4. ಸರಿಯಾದ ಶಿಕ್ಷಣದ ಕೊರತೆಯಿಂದ ಆದ ಪರಿಣಾಮವೇನು? ____

5. ಸರಿಯಾದ ಶಿಕ್ಷಣವು ಯಾವುದಕ್ಕೆ ಕಾರಣವಾಗಬಹುದು? ____

6. ನಮ್ಮ ಶಿಕ್ಷಣದ ಮೂಲ ಯಾವುದು? ________________________________

7. ನಮ್ಮ ಅಂತಿಮ ನಿರ್ಧಿಷ್ಟ ಸ್ಥಾನ ಯಾವುದು? ________________________________

________________________________________________

8. ಶಿಕ್ಷಣ ಪ್ರಕಟಪಡಿಸುವ ಕೆಲವು ರತ್ನಗಳು ಯಾವುವು? ________________________

________________________________________________

9. ಪವಿತ್ರ ಬರಹಗಳ ಮೇಲೆ ಧ್ಯಾನ ಮಾಡಿದಾಗ ನಾವು ಏನನ್ನು ಸುಲಭವಾಗಿ ಗುರುತಿಸುತ್ತೇವೆ?

________________________________________________

________________________________________________

________________________________________________

________________________________________________

# ವಿಭಾಗ 17

ಬಹಾಉಲ್ಲಾ ಹೇಳುತ್ತಾರೆ:

**"ದೇಹದಿಂದ ಆತ್ಮ ಬಿಡುಗಡೆಯಾದ ನಂತರದ ಆತ್ಮದ ಸ್ಥಿತಿಯ ಬಗ್ಗೆ ನನ್ನನ್ನು ನೀನು ಪ್ರಶ್ನೆ ಕೇಳಿದ್ದೀಯೆ. ಆತ್ಮವು ದೇವರ ಪಥದಲ್ಲಿಯೇ ನಡೆದಿರುವುದಾದರೆ ಅದು ನಿಶ್ಚಯವಾಗಿಯೂ ಹಿಂತಿರುಗಿ ಪ್ರೀತಿಪಾತ್ರರ ವೈಭವದಲ್ಲಿ ಸೇರುವುದೆಂಬ ಒಂದು ಸತ್ಯವನ್ನು ತಿಳಿಯುವವನಾಗು. ದೇವರ ಪ್ರಮಾಣವಾಗಿಯೂ, ಯಾವ ನಾಲಿಗೆಯೂ ವರ್ಣಿಸಲಾಗದ ಯಾವ ಲೇಖನಿಯೂ ವಿವರಿಸಲಾರದಂತಹ ಸ್ಥಾನವನ್ನು ಅದು ಪಡೆಯುವುದು. ದೇವರ ಧರ್ಮಕ್ಕೆ ವಿಧೇಯತೆ ತೋರಿದ ಮತ್ತು ಆತನ ಪಥದಲ್ಲಿ ಚಂಚಲತೆಯಿಲ್ಲದೆ ದೃಢತೆಯಿಂದಿದ್ದ ಆತ್ಮವು ಆತನ ಮರಣಾನಂತರ, ದೇವರು ಸೃಷ್ಟಿಸಿದ ಎಲ್ಲ ಪ್ರಪಂಚಗಳಲ್ಲೂ ಪ್ರಯೋಜನ ಪಡೆಯಬಹುದಾದಂತಹ ಶಕ್ತಿಯನ್ನು ಆತನ ಮೂಲಕ ಅದು ಪಡೆಯುವುದು."[23]**

1. ಈ ವಾಕ್ಯಗಳನ್ನು ಪೂರ್ತಿ ಮಾಡಿರಿ:

   a. ಮನುಷ್ಯನ ಆತ್ಮ ದೇವರ ಪಥದಲ್ಲಿಯೇ ನಡೆದುದಾದರೆ ಅದು ನಿಶ್ಚಯವಾಗಿಯೂ _____ ________________________________________ .

   b. ಅದು ಎಂತಹ ಸ್ಥಾನವನ್ನು ಪಡೆಯುವುದೆಂದರೆ ________________________ ________________________ .

   c. ________ ಧರ್ಮಕ್ಕೆ ____________ ತೋರಿದ ______ , ಮತ್ತು ಆತನ ______________ ____________ ಚಂಚಲತೆಯಿಲ್ಲದೆ _________ ಆತ್ಮವು ಆತನ _____________ ದೇವರು _______________ ಆತನ ಮೂಲಕ ಪಡೆಯಬಹುದಾದಂತಹ _______________ ಯನ್ನು ______________ ವುದು.

# ವಿಭಾಗ 18

ಬಹಾಉಲ್ಲಾ ಹೇಳುತ್ತಾರೆ:

**"ದೇಹವನ್ನು ಬಿಡುವಾಗ ಜಗತ್ತಿನ ವ್ಯರ್ಥ ಕಲ್ಪನೆಗಳೆಲ್ಲದರಿಂದಲೂ ಮುಕ್ತವಾಗಿ ಪರಿಶುದ್ಧವಾಗಿರುವ ಆತ್ಮವೇ ಧನ್ಯವಾದುದು. ಇಂತಹ ಆತ್ಮ ಸೃಷ್ಟಿಕರ್ತನ ಇಚ್ಛಾನುಸಾರವಾಗಿ ಬಾಳುತ್ತದೆ ಮತ್ತು ಚಲಿಸುತ್ತದೆ, ಮತ್ತು ಅತ್ಯುನ್ನತವಾದ ಸ್ವರ್ಗಲೋಕವನ್ನು ಸೇರುತ್ತದೆ. ಸ್ವರ್ಗೀಯ ಪರಿಚಾರಿಕೆಯರು, ಮಹೋನ್ನತ ಸೌಧದ ನಿವಾಸಿಗಳು, ಆ ಆತ್ಮದ ಸುತ್ತಲು ತಿರುಗುತ್ತಾರೆ, ಮತ್ತು ದೇವರ ಪ್ರವಾದಿಗಳು ಮತ್ತು ಆತನಿಂದ ಆರಿಸಲ್ಪಟ್ಟವರು ಅದರ ಒಡನಾಟವನ್ನು ಬಯಸುವರು. ಅವರೊಡನೆ ಆ ಆತ್ಮವು ಮುಕ್ತವಾಗಿ ಮಾತನಾಡುವುದು ಮತ್ತು ಎಲ್ಲಾ ಪ್ರಪಂಚಗಳ ಒಡೆಯನಾದ ದೇವರ ಹಾದಿಯಲ್ಲಿ ತಾನು ಅನುಭವಿಸಿದ ಕಷ್ಟಗಳನ್ನು ಅದು ಅವರಿಗೆ ತಿಳಿಸುವುದು."[24]**

**"ಪಾಪಿಯನ್ನು ಅವನು ಕ್ಷಮಿಸಬೇಕು ಮತ್ತು ಅವನ ಕೀಳ್ದೆಸೆಯ ಕುರಿತು ತುಚ್ಛವಾಗಿ ಕಾಣಬಾರದು, ಏಕೆಂದರೆ ತನ್ನ ಕೊನೆ ಯಾವ ರೀತಿಯಾಗಬಹುದೆಂದು ಯಾರಿಗೂ ತಿಳಿದಿಲ್ಲ. ಎಷ್ಟೊಂದು ಬಾರಿ ಪಾಪಿಯು ಸಾಯುವ ಗಳಿಗೆಯಲ್ಲಿ ನಂಬಿಗೆಯ ಸಾರವನ್ನೇ ಹೊಂದಿ ಅಮರತೆಯ ರಸವನ್ನು ಕುಡಿದು ಎತ್ತರದ ದೇವತಾ ಸಮೂಹದೆಡೆ ತನ್ನ ಹಾರಾಟವನ್ನು ನಡೆಸಿಲ್ಲ! ಮತ್ತು ಎಷ್ಟೊಂದು ಬಾರಿ ಪರಮ ಭಕ್ತನು ತನ್ನ ಆತ್ಮವು ಬಿಡುಗಡೆಗೊಂಡಾಗ ಅತಿ ನರಕಕ್ಕೆ ಬೀಳುವಂತೆ ಬದಲಾಯಿಸಿಲ್ಲ!"[25]**

1. ನಮ್ಮ ಆತ್ಮವು ದೇಹವನ್ನು ಬಿಡುವಾಗ ಯಾವ ಸ್ಥಿತಿಯಲ್ಲಿರಬೇಕು? ____________________

______________________________________________

2. ಕೆಲವು ವ್ಯರ್ಥವಾದ ಕಲ್ಪನೆಗಳು ಯಾವುವು? ______________________________

______________________________________________

______________________________________________

______________________________________________

3. ವ್ಯರ್ಥ ಕಲ್ಪನೆಗಳಿಂದ ಮುಕ್ತವಾದ ಆತ್ಮವು ಮರಣಾನಂತರ ಎಲ್ಲಿ ಇರುವುದು ಮತ್ತು ಎಲ್ಲಿಗೆ ಹೋಗುವುದು? ______________________________________

______________________________________________

______________________________________________

______________________________________________

4. ಈ ಆತ್ಮಗಳ ಒಡನಾಡಿಗಳು ಯಾರಾಗಿರುವರು? ______________________________

______________________________________________

5. ಈ ತರಹದ ಆತ್ಮ ದೇವರ ಪ್ರವಾದಿಗಳು ಮತ್ತು **ಆತ**ನಿಂದ ಆಯ್ಕೆಗೊಂಡವರ ಜೊತೆ ಮಾತನಾಡಬಹುದೇ? ______________________________________

6. ನಮ್ಮ ಜೀವನದ ಕೊನೆ ಹೇಗೆ ಮತ್ತು ಯಾವಾಗ ಆಗುತ್ತದೆ ಎಂದು ನಮಗೆ ಮೊದಲೇ ತಿಳಿದಿರುತ್ತದೆಯೇ? ______________________________________

7. ಶಾಶ್ವತ ಜೀವನವನ್ನು ಖಚಿತಪಡಿಸಿಕೊಳ್ಳಲು ಈಗ ನಾವೇನು ಮಾಡಬಹುದು? ___________

_______________________________________________________________

_______________________________________________________________

## ವಿಭಾಗ 19

ಅಬ್ದುಲ್ ಬಹಾರವರು ವಿವರಿಸಿದ್ದಾರೆ:

**"ಮನುಷ್ಯನ ಆತ್ಮಚೈತನ್ಯವು ಈ ಧಾತುರೂಪದ ಚೌಕಟ್ಟನ್ನು ಹೊರಹಾಕಿದ ನಂತರ ಶಾಶ್ವತವಾಗಿ ಜೀವಿಸುವುದರಿಂದ, ಇದು ಅಸ್ತಿತ್ವದ ಎಲ್ಲ ವಸ್ತುಗಳಂತೆ, ನಿಸ್ಸಂದೇಹವಾಗಿ ಪ್ರಗತಿಗೆ ಸಮರ್ಥವಾಗಿದೆ, ಮತ್ತು ಆದ್ದರಿಂದ ನಾವು ಅಗಲಿದ ಆತ್ಮದ ಮುನ್ನಡೆ, ಕ್ಷಮೆ, ದಿವ್ಯಾನುಗ್ರಹ, ಕರುಣೆ ಮತ್ತು ದೇವರ ಸ್ವೀಕಾರಕ್ಕೋಸ್ಕರ ಪ್ರಾರ್ಥಿಸಬಹುದು. ಅದಕ್ಕೋಸ್ಕರ ಬಹಾಉಲ್ಲಾರವರ ಪ್ರಾರ್ಥನೆಯಲ್ಲಿ, ಕ್ಷಮೆ ಮತ್ತು ದೇವರ ಕ್ಷಮೆಯನ್ನು ಮುಂದಿನ ಪ್ರಪಂಚಕ್ಕೆ ಏರಿ ಹೋದವರಿಗಾಗಿ ಪ್ರಾರ್ಥಿಸುತ್ತೇವೆ. ಇದಲ್ಲದೆ ಈ ಜಗತ್ತಿನಲ್ಲಿ ಜನರಿಗೆ ದೇವರ ಅವಶ್ಯಕತೆ ಇರುವಂತೆ, ಮುಂದಿನ ಪ್ರಪಂಚದಲ್ಲಿರುವವರಿಗೂ ಅವನ ಅವಶ್ಯಕತೆ ಇದೆ. ಸೃಷ್ಟಿಸಿದ ಪ್ರತಿಯೊಂದು ಜೀವಿಗಳಿಗೂ ಎಂದೆಂದಿಗೂ ದೇವರ ಅವಶ್ಯಕತೆ ಇರುವುದು, ಮತ್ತು ದೇವರು ಅವುಗಳಿಂದ ಸಂಪೂರ್ಣವಾಗಿ ಸ್ವತಂತ್ರನು, ಈ ಪ್ರಪಂಚದಲ್ಲಾಗಲಿ ಅಥವಾ ಮುಂಬರುವ ಪ್ರಪಂಚದಲ್ಲಾಗಲಿ."[26]**

ನಾವೇಕೆ ಅಗಲಿದ ಆತ್ಮಗಳಿಗಾಗಿ ಪ್ರಾರ್ಥಿಸಬೇಕು?

_______________________________________________________________

_______________________________________________________________

_______________________________________________________________

_______________________________________________________________

_______________________________________________________________

_______________________________________________________________

_______________________________________________________________

_______________________________________________________________

## ವಿಭಾಗ 20

ಅಬ್ದುಲ್ ಬಹಾರವರು ಬರೆಯುತ್ತಾರೆ:

**"ಮನುಷ್ಯನ ಆತ್ಮವು ಈ ಅಸ್ಥಿರವಾದ ಧೂಳಿನ ರಾಶಿಯಿಂದ ಮೇಲಕ್ಕೆ ದೇವರ ಜಗತ್ತಿಗೆ ಏರಿದಾಗ, ಮುಸುಕುಗಳು ಕಳಚಿ ಬೀಳುತ್ತವೆ, ಮತ್ತು ಸತ್ಯವು ಬೆಳಕಿಗೆ ಬರುತ್ತವೆ, ಮತ್ತು ಮೊದಲು ತಿಳಿದಿಲ್ಲದ ಎಲ್ಲಾ ವಿಷಯಗಳು ಸ್ಪಷ್ಟವಾಗುತ್ತವೆ ಮತ್ತು ಗುಪ್ತ ಸತ್ಯಗಳು ಅರ್ಥವಾಗುತ್ತವೆ.**

**"ಗರ್ಭಾಶಯದ ಜಗತ್ತಿನಲ್ಲಿ, ಕಿವಿ ಕಿವುಡು ಮತ್ತು ಕಣ್ಣಿನ ಕುರುಡು ಮತ್ತು ನಾಲಿಗೆಯ ಮೌನ ಇವೆಲ್ಲವನ್ನು ಪರಿಗಣಿಸಿ; ಅವನು ಎಲ್ಲಾ ಗ್ರಹಿಕೆಗಳನ್ನು ಕಳೆದುಕೊಂಡಿದ್ದನು.**

**ಆದರೆ ಒಮ್ಮೆ ಆ ಕತ್ತಲೆಯ ಪ್ರಪಂಚದಿದ, ಅವನು ಈ ಬೆಳಕಿನ ಜಗತ್ತಿಗೆ ಸಾಗಿ ಹೋದನು, ನಂತರ ಅವನ ಕಣ್ಣು ನೋಡಿತು, ಕಿವಿ ಕೇಳಿತು, ಅವನ ನಾಲಿಗೆ ಮಾತನಾಡಿತು.ಅದೇ ರೀತಿ, ಅವನು ಒಮ್ಮೆ, ಈ ಮರ್ತ್ಯ ಸ್ಥಳದಿಂದ ಓಡಿ ದೇವರ ರಾಜ್ಯಕ್ಕೆ ಕಾಲಿಟ್ಟಾಗ, ಅವನು ಆತ್ಮದಲ್ಲಿ ಜನಿಸುವನು; ಆಗ ಅವನ ಗ್ರಹಿಕೆಯ ಕಣ್ಣುಗಳು ತೆರೆಯುತ್ತವೆ, ಆತನ ಆತ್ಮದ ಕಿವಿಗಳು ಕೇಳುತ್ತವೆ, ಮತ್ತು ಅವನು ಮೊದಲು ತಿಳಿಯಲಾರದ ಎಲ್ಲಾ ಸತ್ಯಗಳು ಸರಳ ಮತ್ತು ಸ್ಪಷ್ಟವಾಗುತ್ತವೆ."[27]**

1. ಕೆಳಗಿರುವ ಬಿಟ್ಟ ಪದಗಳನ್ನು ತುಂಬಿ.

   a. ಮಾನವನ ಆತ್ಮವು ಈ ಪ್ರಪಂಚವನ್ನು ಬಿಟ್ಟಾಗ, ಆಗ

      – ಮುಸುಕುಗಳು ________________ ,

      – ಮತ್ತು ಸತ್ಯವು___________________ ,

      – ಮತ್ತು ಈ ಹಿಂದೆ ತಿಳಿದೆ ಇದ್ದವು _________________________ ,

      – ಮತ್ತು ಗುಪ್ತವಾದ ಸತ್ಯಗಳು ______________________ .

   b. ________ ಜಗತ್ತಿನಲ್ಲಿ, ನಮ್ಮ ಕಿವಿ ________ ಮತ್ತು ಕಣ್ಣು ________ ಮತ್ತು ನಾಲಿಗೆಯು ________ ವಾಗಿರುತ್ತದೆ.

   c. ಈ ಪ್ರಪಂಚದಲ್ಲಿ ನಾವು ಹುಟ್ಟಿದಾಗ, ಆಗ ನಮ್ಮ ಕಣ್ಣು _____________ , ನಮ್ಮ ಕಿವಿ _____________ ಮತ್ತು ನಾಲಿಗೆ ______________ .

   d. ಅದೇ ರೀತಿ ನಾವು ದೇವರ ರಾಜ್ಯಕ್ಕೆ ಹೋದಾಗ, ನಾವು _______________ ಜನಿಸುವೆವು.

   e. ಆಗ ಅವನ ________ ಕಣ್ಣುಗಳು __________ , ಆತನ ________ಕಿವಿಗಳು ಕೇಳುತ್ತವೆ, ಮತ್ತು ಅವನು ಮೊದಲು ತಿಳಿಯಲಾರದ ಎಲ್ಲಾ ಸತ್ಯಗಳನ್ನು ________ ಮತ್ತು ________ ಪಡಿಸಲಾಗುತ್ತದೆ.

2. ಈ ಕೆಳಗಿನ ಹೇಳಿಕೆಗಳು ನಿಜವೇ ನಿರ್ಧರಿಸಿ:

   _______ ನಾವು ಗರ್ಭಾಶಯದ ಜಗತ್ತಿನಲ್ಲಿ, ನಮಗೆ ಈ ಪ್ರಪಂಚದ ಬಗ್ಗೆ ತಿಳಿದಿರುತ್ತೇವೆ.

   _______ ಸಾವಿನ ನಂತರದ ಸ್ಥಿತಿಯು ಈ ಜೀವನದಲ್ಲಿ ನಮಗೆ ಬಚ್ಚಿಟ್ಟ ಸತ್ಯ.

   _______ ಸಂಪೂರ್ಣವಾಗಿ ಹೊಸದಾದ ದಿಗಂತ ಸಾವಿನ ನಂತರ ನಮ್ಮ ಮುಂದೆ ತೆರೆಯುತ್ತದೆ.

   _______ ನಾವು ಸತ್ತಾಗ, ಮತ್ತೆ ಹುಟ್ಟಲು ಈ ಜಗತ್ತಿಗೆ ಮರಳುತ್ತೇವೆ.

# ವಿಭಾಗ 21

ಬಹಾಉಲ್ಲಾರವರು ಹೇಳುತ್ತಾರೆ:

**"ಮನುಷ್ಯನ ಆತ್ಮಗಳು ದೇಹದಿಂದ ಬೇರ್ಪಟ್ಟ ನಂತರ ಪರಸ್ಪರ ಪ್ರಜ್ಞಾಪೂರ್ವಕವಾಗಿ ಮುಂದುವರಿಯುತ್ತವೆಯೇ ಎಂಬ ನಿಮ್ಮ ಪ್ರಶ್ನೆಗೆ ಸಂಬಂಧಿಸಿದಂತೆ. ದೇವರ ಸಾಮ್ರಾಜ್ಯ (ಕ್ರಿಂಸನ್ ಆರ್ಕ್) ದೊಳಗೆ ಪ್ರವೇಶಿಸಿದ ಮತ್ತು ಸ್ಥಾಪಿತವಾದ ಬಹಾ ಜನರ ಆತ್ಮಗಳು,**

**ಒಬ್ಬರಿಗೊಬ್ಬರು ಅನ್ಯೋನ್ಯವಾಗಿ ಬೆರೆಯುತ್ತವೆ ಮತ್ತು ಸಂವಹನ ನಡೆಸುತ್ತವೆ ಮತ್ತು ಅವರ ಜೀವನ, ಅವರ ಆಕಾಂಕ್ಷೆಗಳು, ಅವರ ಗುರಿಗಳು ಮತ್ತು ಶ್ರಮಗಳಲ್ಲಿ ಒಂದೇ ಆತ್ಮದಂತೆ ಬಹಳ ನಿಕಟ ಸಂಬಧ ಹೊಂದಿರುವವು ಎಂದು ನೀವು ತಿಳಿಯಿರಿ. ಅವರು ನಿಜಕ್ಕೂ ಸುಶಿಕ್ಷಿತರು, ತೀಕ್ಷ ದೃಷ್ಟಿ ಹೊಂದಿದವರು ಮತ್ತು ತಿಳುವಳಿಕೆಯನ್ನು ಹೊಂದಿರುವವರು. ಹೀಗೆ ಸರ್ವಜ್ಞ, ಸರ್ವ-ವಿವೇಕಿಯಾದವನು ಆಜ್ಞಾಪಿಸಿದ್ದಾನೆ.**

"**ದೇವರ ಸಾಮ್ರಾಜ್ಯ ವಾಸಿಗಳಾಗಿರುವ ಬಹಾನ ಜನರು, ಒಬ್ಬರಿಗೊಬ್ಬರು ಮತ್ತು ಎಲ್ಲರೂ ಪರಸ್ಪರರ ಅಂತಸ್ತು ಮತ್ತು ಸ್ಥಿತಿಯನ್ನು ಚೆನ್ನಾಗಿ ತಿಳಿದಿರುವರು ಮತ್ತು ಆತ್ಮೀಯತೆ ಮತ್ತು ಸಹಭಾಗಿತ್ವಗಳಿಂದ ಕೂಡಿರುವರು. ಆದಾಗ್ಯೂ, ಅಂತಹ ಅಂತಸ್ತು ಅವರ ನಂಬಿಕೆ ಮತ್ತು ಅವರ ನಡವಳಿಕೆಯನ್ನು ಅವಲಂಬಿಸಿರತಕ್ಕದ್ದು. ಒಂದೇ ದರ್ಜೆಯ ಮತ್ತು ಸ್ಥಾನದಲ್ಲಿರುವವರು ಪರಸ್ಪರರ ಸಾಮರ್ಥ್ಯ, ನಡವಳಿಕೆ, ಸಾಧನೆಗಳ ಮತ್ತು ಯೋಗ್ಯತೆಗಳ ಕುರಿತು ಸಂಪೂರ್ಣವಾಗಿ ತಿಳಿದಿರುವರು. ಆದಾಗ್ಯೂ, ಕೆಳಗಿನ ದರ್ಜೆಯಲ್ಲಿರುವವರು, ತಮಗಿಂತ ಮೇಲಿರುವವರ ಸ್ಥಾನ ಅಥವಾ ಅವರ ಯೋಗ್ಯತೆಯನ್ನು ಗ್ರಹಿಸಲು ಅಸಮರ್ಥರಾಗಿರುವರು. ಪ್ರತಿಯೊಬ್ಬರೂ ತಮ್ಮ ಸ್ವಾಮಿಯಿಂದ ಅವರ ಪಾಲನ್ನು ಪಡೆಯುವರು. ತನ್ನ ಮುಖವನ್ನು ದೇವರೆಡೆಗೆ ತಿರುಗಿಸಿರುವ ಮತ್ತು ಎಲ್ಲರ ಸಾರ್ವಭೌಮ ಪ್ರಭು, ಸರ್ವ ಶಕ್ತನು, ಸದಾ ಕ್ಷಮಿಸುವವನು, ಕರುಣಾಮಯಿಯಾದ ದೇವರ ಕಡೆಗೆ ತನ್ನ ಹಾರಾಟವನ್ನು ಬೆಳೆಸುವ ತನಕ ಆತನ ಪ್ರೀತಿಯಲ್ಲಿ ಸ್ಥಿರವಾಗಿ ನಡೆದ ಮನುಷ್ಯನು, ಧನ್ಯನು.**"[28]

1. ಈ ಪ್ರಪಂಚಹದಲ್ಲಿ ನಮಗೆ ಗೊತ್ತಿರುವವರನ್ನು ನಾವು ಮುಂದಿನ ಪ್ರಪಂಚದಲ್ಲಿ ಗುರುತಿಸುತ್ತೇವೆಯೇ? ______________________________

2. ಮುಂದಿನ ಪ್ರಪಂಚದಲ್ಲಿ, ಆತ್ಮಗಳ ನಡುವಿನ ಒಡನಾಟ ಎಷ್ಟು ಹತ್ತಿರವಾಗಿರುತ್ತದೆ? ______
______________________________

3. ಮುಂದಿನ ಪ್ರಪಂಚದಲ್ಲಿ, ಆತ್ಮಗಳ ನಡುವೆ ವ್ಯತ್ಯಾಸಗಳು ಮತ್ತು ಪ್ರತ್ಯೇಕತೆಗಳು ಯಾವುದರ ಮೇಲೆ ಅವಲಂಬಿಸಿರುತ್ತದೆ? ______________________________
______________________________

4. ದೇವರ ಅನುಗ್ರಹದಿಂದ ಯಾರಾದರೂ ವಂಚಿತರಾಗುವರೇ?______________________

## ವಿಭಾಗ 22

ಬಹಾಉಲ್ಲಾ ನಮಗೆ ಉಪದೇಶಿಸಿದ್ದಾರೆ:

**"ಓ ನನ್ನ ಸೇವಕರೇ! ಈ ದಿನದಲ್ಲಿ ಮತ್ತು ಈ ಪ್ರಾಪಂಚಿಕಾವಸ್ಥೆಯಲ್ಲಿ ನಿಮ್ಮ ಇಚ್ಛೆಗೆ ವಿರುದ್ಧವಾದುದೇನಾದರೂ ದೇವರಿಂದ ಆಜ್ಞಾಪಿಸಲ್ಪಟ್ಟಿದ್ದರೆ ಮತ್ತು ಘಟಿಸಿದರೆ ದುಃಖಿತರಾಗದಿರಿ, ಏಕೆಂದರೆ, ಸುಖ ಸಂತೋಷದ ದಿನಗಳು, ಸ್ವರ್ಗೀಯ ಆನಂದ, ನಿಜವಾಗಿಯೂ ನಿಮಗಾಗಿ ಕಾದಿರಿಸಲ್ಪಟ್ಟಿದೆ. ಪವಿತ್ರ ಹಾಗೂ ಆಧ್ಯಾತ್ಮಿಕ ವೈಭವದ ಲೋಕಗಳು ನಿಮ್ಮ ಕಣ್ಣೆದುರು ತೆರೆಯುವವು. ಈ ಪ್ರಪಂಚದಲ್ಲೂ ಮತ್ತು ಮುಂದೆಯೂ ಅವುಗಳ ಲಾಭವನ್ನು ಪಡೆಯಲು, ಅವರ ಸಂತೋಷದಲ್ಲಿ ಪಾಲ್ಗೊಳ್ಳಲು ಮತ್ತು ನಿರಂತರವಾದ ಅವರ ಅನುಗ್ರಹಗಳಲ್ಲಿ ಪಾಲನ್ನು ಪಡೆಯಲು ನೀವು ಆತನಿಂದ ವಿಧಿಸಲ್ಪಟ್ಟಿರುವಿರಿ. ಅದರ ಪ್ರತಿಯೊಂದನ್ನು ನೀವು ನಿಸ್ಸಂಶಯವಾಗಿ ಪಡೆಯುವಿರಿ."**[29]

1. ಕೆಳಗಿರುವುದರಲ್ಲಿ ಯಾವು ನಿಜವೆಂದು ನಿರ್ಧರಿಸಿ:

_______ ನಮಗೆ ಬೇಕಾದ ಹಾಗೆ ವಿಷಯಗಳು ನಡೆಯದಿದ್ದಾಗ ನಾವು ದುಃಖಿತರಾಗಬೇಕು.

_______ ಒಳ್ಳೆಯದೋ ಕೆಟ್ಟದೋ ಎಲ್ಲವೂ ದೇವರಿಂದಲೇ ವಿಧಿತವಾದುದು.

_______ ಸಂತೋಷದ ದಿನಗಳು ನಮಗೆಲ್ಲರಿಗಾಗಿ ಕಾಯುತ್ತಿವೆ.

_______ ನಾವು ಖಂಡಿತವಾಗಿ ಪವಿತ್ರ ಮತ್ತು ಆಧ್ಯಾತ್ಮಿಕ ವೈಭವದಿಂದ ಕೂಡಿದ ಪ್ರಪಂಚಗಳನ್ನು ಕಾಣುತ್ತೇವೆ.

_______ ಪವಿತ್ರ ಹಾಗೂ ಆಧ್ಯಾತ್ಮಿಕ ವೈಭವದ ಲೋಕಗಳು ಲಾಭದ ಪಾಲನ್ನು ಪಡೆಯಲು ನೀವು ವಿಧಿಸಲ್ಪಟ್ಟಿರುವಿರಿ.

2. ನಮ್ಮ ಇಚ್ಛೆಗೆ ವಿರುದ್ಧವಾದುದೇನಾದರೂ ಘಟಿಸಿದರೆ ನಾವು ಏಕೆ ದುಃಖಿತರಾಗಬಾರದು? __

_______________________________________________

_______________________________________________

_______________________________________________

3. ಬಹಾಉಲ್ಲಾರವರು ಈ ವಾಕ್ಯವೃಂದದಲ್ಲಿ ನಮಗೇನು ಭರವಸೆ ನೀಡಿದ್ದಾರೆ? ___________

_______________________________________________

_______________________________________________

_______________________________________________

# ವಿಭಾಗ 23

ಈ ಪಾಠಗಳಲ್ಲಿ ಮಾನವ ಜೀವನದ ನಿಜಾರ್ಥದ ಕುರಿತು ನೀವು ಚಿಂತನೆ ನಡೆಸಿದ್ದೀರಿ. ಆತ್ಮದ ಲಕ್ಷಣಗಳ ಕುರಿತು, ಜೀವನದ ಉದ್ದೇಶದ ಕುರಿತು, ಈ ಪ್ರಪಂಚದಲ್ಲಿ ಅಭಿವೃದ್ಧಿಗೊಳಿಸಬೇಕಾದ ಆಧ್ಯಾತ್ಮಿಕ ಗುಣಗಳ ಅಗತ್ಯ ಹಾಗೂ ಸಂತೋಷ ಮತ್ತು ವೈಭವದಿಂದ ಕೂಡಿದ ಅಮರ ಜೀವನದ ಭರವಸೆಯ ಕುರಿತು ಬಹಳಷ್ಟು ಕಲಿತುಕೊಂಡಿದ್ದೀರಿ. ಈ ಪುಸ್ತಕದ ಎರಡನೇ ಘಟಕದಲ್ಲಿ, ನಾವು ದ್ವಿಮುಖ ಉದ್ದೇಶದ ಬಗ್ಗೆ ಮಾತನಾಡಿದ್ದೇವೆ — ನಮ್ಮ ವ್ಯಯುಕ್ತಿಕ ಆಧ್ಯಾತ್ಮಿಕ ಮತ್ತು ಬೌದ್ಧಿಕ ಬೆಳವಣಿಗೆಯನ್ನು ಮುಂದುವರೆಸಿಕೊಂಡು ಹೋಗುವುದು ಮತ್ತು ಸಮಾಜದ ಪರಿವರ್ತನೆಗಾಗಿ ಕೊಡುಗೆ ನೀಡುವುದು. ಈ ಪರಿಕಲ್ಪನೆಗೆ ಹಿಂದಿರುಗಲು ಮತ್ತು ಈ ಉದ್ದೇಶದ ಎರಡು ಅಂಶಗಳ ಬಗ್ಗೆ ಗಮನ ಕೊಡುವ ಮಹತ್ವದ ಬಗ್ಗೆ, ಆತ್ಮದ ಪ್ರಗತಿಯ ಬಗ್ಗೆ ನೀವು ಪಡೆದುಕೊಂಡ ಅಂತದೃಷ್ಟಿಯ ಬೆಳಕಿನಲ್ಲಿ ಯೋಚಿಸಲು ಇಲ್ಲಿ ನಿಮಗೊಂದು ಅವಕಾಶವಿದೆ. ಈ ಕೆಳಗಿನ ವಿಚಾರಗಳ ಬಗ್ಗೆ ನಿಮ್ಮ ಗುಂಪಿನ ಜೊತೆ ಚರ್ಚೆಯಿಂದ ನಿಮ್ಮ ಪ್ರತಿಫಲನೆಗಳು ಲಾಭದಾಯಕವಾಗಬಹುದು.

1. *ಆಧ್ಯಾತ್ಮಿಕ ಗುಣಗಳನ್ನು ಬೆಳೆಸಿಕೊಳ್ಳುವುದು*
2. *ದೇವರ ನಿಯಮಗಳಿಗೆ ವಿಧೇಯರಾಗಿರುವುದು*
3. *ಮಾನವ ಜನಾಂಗದ ಒಳಿತಿಗಾಗಿ ಕೊಡುಗೆ ನೀಡುವುದು*
4. *ಸೇವೆಯ ಪಥದಲ್ಲಿ ಮುಂದುವರೆಯುವುದು*

# REFERENCES


1. From a talk given on 10 November 1911, published in *Paris Talks: Addresses Given by 'Abdu'l-Bahá in 1911* (Wilmette: Bahá'í Publishing, 2006, 2016 printing), no. 29.12–13, p. 109.

2. From a letter dated 28 July 2016 written on behalf of the Universal House of Justice.

3. From a letter dated 28 July 2016 written on behalf of the Universal House of Justice.

4. 'Abdu'l-Bahá, in *Some Answered Questions* (Wilmette: Bahá'í Publishing, 2014, 2016 printing), no. 66.3, pp. 352–53.

5. Ibid., no. 38.5, p. 220.

6. From a talk given by 'Abdu'l-Bahá on 9 November 1911, published in *Paris Talks*, no. 28.16, p. 104.

7. From a letter dated 31 December 1937 written on behalf of Shoghi Effendi, published in *Lights of Guidance*, no. 680, p. 204.

8. *Gleanings from the Writings of Bahá'u'lláh* (Wilmette: Bahá'í Publishing Trust, 1983, 2017 printing), LXXXII, par. 8, p. 183.

9. 'Abdu'l-Bahá, in *Some Answered Questions*, no. 61.1–2, p. 334.

10. *Gleanings from the Writings of Bahá'u'lláh*, LXXX, par. 2, p. 174.

11. Ibid., LXXXI, par. 1, p. 176.

12. Ibid., CLXV, par. 1–3, pp. 391–92.

13. Bahá'u'lláh, *The Hidden Words* (Wilmette: Bahá'í Publishing Trust, 2003, 2012 printing), Arabic no. 32, p. 11.

14. From a talk given on 6 July 1912, published in *The Promulgation of Universal Peace: Talks Delivered by 'Abdu'l-Bahá during His Visit to the United States and Canada in 1912* (Wilmette: Bahá'í Publishing, 2012), pp. 315–16. (authorized translation).

15. *Gleanings from the Writings of Bahá'u'lláh*, V, par. 4, p. 8.

16. Ibid., LXXXII, par. 1, pp. 179–80.

17. Ibid., CLIII, par. 6, pp. 370–71.

18. Ibid., XXVII, par. 2, pp. 72–73.

19. Ibid., XXVII, par. 3, p. 73.

20. Ibid., XXI, par. 1, pp. 54–55.

21. Ibid., LXXXI, par. 1, p. 177.

22. Ibid., CXXII, par. 1, pp. 293–94.

23. Ibid., LXXXII, par. 7, p. 182.

24. Ibid., LXXXI, par. 1, pp. 176–77.

25. Ibid., CXXV, par. 3, pp. 300–1.

26. ‘Abdu’l-Bahá, in *Some Answered Questions*, no. 62.3, pp. 340–41.

27. *Selections from the Writings of ‘Abdu’l-Bahá* (Wilmette: Bahá’í Publishing, 2010, 2015 printing), no. 149.3–4, pp. 246–47.

28. *Gleanings from the Writings of Bahá’u’lláh*, LXXXVI, par. 1–2, pp. 192–93.

29. Ibid., CLIII, par. 9, p. 373.